ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಅಕ್ಟೋಬರ್ 21 ಶನಿವಾರ 2023

₹4


ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ/ಜಾಹೀರಾತಿಗಾಗಿ – ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸಂಪುಟ: 44 | ಸಂಚಿಕೆ: 186 | ಪುಟಗಳು: 12

ಸುದ್ದಿ ಮತ್ತು ಫೋಟೋಗೆ: news@mysurumithra.com ಜಾಹೀರಾತು: ad@mysurumithra.com







ಯದುವೀರರಿಂದ ಸೈಕಲ್ ಪ್ಯೂರ್ ಅಗರಬತ್ತಿ ಸಂಸ್ಥಾಪಕರಾದ ಎನ್.ರಂಗರಾವ್ ಗೌರವಾರ್ಥ ಪುಸ್ತಕ ಬಿಡುಗಡೆ




ಮೈಸೂರು,ಅ.20– ಸೈಕಲ್ ಪ್ಯೂರ್ ಅಗರಬತ್ತಿ ಕಂಪನಿಯ ಸಂಸ್ಥಾಪಕರಾದ ಎನ್.ರಂಗರಾವ್ ಅವರ ಗೌರವಾರ್ಥ ಪುಸ್ತಕ ಮತ್ತು ಸೀಮಿತ ಆವೃತ್ತಿಯ ವಿಶೇಷ ಅಗರಬತ್ತಿ 'ದರ್ಬಾರಿ' ಸಂಗ್ರಹವನ್ನು ಮೈಸೂರಿನ ರಾಜವಂಶಸ್ಥ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್ ಅವರು ರಂಗರಾವ್ ಅವರ ಜನ್ಮದಿನವಾದ ಶುಕ್ರವಾರ ಅರಮನೆ ಆವರಣದಲ್ಲಿ ಬಿಡುಗಡೆ ಮಾಡಿದರು.

ನಂತರ ಮಾತನಾಡಿದ ಅವರು ಮೈಸೂರು ಅಗರಬತ್ತಿಯು ಸುವಾಸನೆ ಇದೀಗ ಜಾಗತಿಕ ಮನ್ನಣೆ ಗಳಿಸಿದೆ. ಅಗರಬತ್ತಿ ಜಿಐ ಸ್ಥಾನಮಾನ ಪಡೆದುಕೊಂಡಿದೆ. ಮೈಸೂರು ಅಗರಬತ್ತಿಯ ಸುಗಂಧದ ಪರಿಮಳವು ರಾಜಮನೆತನದ ನ್ಯಾಯಾಲಯಗಳು, ದೇವಾಲಯಗಳು ಹಾಗೂ ನಮ್ಮ ಜನರ ಮನೆಗಳ ದೈವಿಕತೆಯನ್ನು ಸಂಪರ್ಕಿಸುವ ಕೊಂಡಿಯಾಗಿದೆ. ನಮ್ಮ ಸಂಪ್ರದಾಯದ ಈ ಅಮೂಲ್ಯ ರತ್ನವನ್ನು ಸಂರಕ್ಷಿಸಲು ನಾವು ಬದ್ಧರಾಗಿದ್ದೇವೆ. ಮತ್ತು ಪರಿಮಳಯುಕ್ತ ಸೈಕಲ್ ಪ್ಯೂರ್ ಅಗರಬತ್ತಿ ಬ್ರಾಂಡಿಗೆ ನಮ್ಮ ಹೃದಯ ಪೂರ್ವಕ ಪ್ರೋತ್ಸಾಹ ಮುಂದುವರೆಯುತ್ತದೆ ಎಂದರು.

ಭಾರತೀಯ ಸ್ವಾತಂತ್ರ್ಯದ ಹಿನ್ನೆಲೆಯಲ್ಲಿ ತಮ್ಮ ಅಗರಬತ್ತಿ ಉದ್ಯಮವನ್ನು ಸ್ಥಾಪಿಸಲು ಮೈಸೂರನ್ನು ಆಯ್ಕೆ ಮಾಡಿಕೊಂಡ ಧೈರ್ಯಶಾಲಿ ಉದ್ಯಮಿ ಎನ್.ರಂಗರಾವ್ ಅವರ ಕುರಿತು 'ಮೈಸೂರಿನಿಂದ ಜಗತ್ತಿಗೆ' ಪುಸ್ತಕವನ್ನು ರಂಗರಾವ್ ಅವರ ಹಿರಿಯ ಪುತ್ರರಾದ ಎನ್.ಆರ್. ಸಮೂಹದ ಅಧ್ಯಕ್ಷ ಆರ್.ಗುರು ಬರೆದಿದ್ದಾರೆ. ಈ ವೇಳೆ ಮಾತನಾಡಿದ ಅವರು ನನ್ನ ತಂದೆಯು ಸಾಮಾನ್ಯರಲ್ಲಿ ಅಸಾಧಾರಣವಾದುದ್ದನ್ನು ನೋಡುವ ಅಸಾಧಾರಣ ಸಾಮರ್ಥ್ಯವನ್ನು ಹೊಂದಿದ್ದರು. ಅವರು ಸರಳವಾದ ಪದಾರ್ಥಗಳನ್ನು ಉತ್ತಮವಾದ ಸುಗಂಧ ದ್ರವ್ಯಗಳಾಗಿ ಪರಿವರ್ತಿಸುವ ಓರ್ವ ಸುಗಂಧ ದ್ರವ್ಯ ಮಾಸ್ಟರ್. ವ್ಯವಹಾರದಲ್ಲಿ ನಿಪುಣರಾಗಿದ್ದ ಅವರು ಕೌಟುಂಬಿಕ ಸಂಬಂಧಗಳನ್ನು ಗೌರವಿಸುವ ಮತ್ತು ಪ್ರೀತಿಸುವ ವ್ಯಕ್ತಿಯಾಗಿದ್ದರು. ಅವರ ಕಥೆಯು ಮುಂದಿನ ಪೀಳಿಗೆಗೆ ಹಾಗೂ ಯುವ ಉದ್ಯಮಿಗಳಿಗೆ ಸ್ಫೂರ್ತಿ ನೀಡುತ್ತದೆ ಎಂದು ತಾವು ನಂಬುದಾಗಿ ತಿಳಿಸಿದರು. ಸೈಕಲ್ ಪ್ಯೂರ್ ಅಗರಬತ್ತಿ ವ್ಯವಸ್ಥಾಪಕ ನಿರ್ದೇಶಕ ಅರ್ಜುನ್ ರಂಗ ಮಾತನಾಡಿ, 1953ರ ದಸರಾ ಸಂದರ್ಭದಲ್ಲಿ ನನ್ನ ತಾತನ ಸುಗಂಧ ದ್ರವ್ಯಕ್ಕೆ ಚಿನ್ನದ ಪದಕ ಲಭಿಸಿತ್ತು. ಇಂದಿಗೆ ಸರಿಯಾಗಿ 70 ವರ್ಷದ ಬಳಿಕ ರಾಜ ವಂಶಸ್ಥರು ಅವರ ಕುರಿತು ಪುಸ್ತಕವನ್ನು ಬಿಡುಗಡೆ ಮಾಡಿರುವುದು ನಮಗೆ ಪುಣ್ಯವೆನಿಸುತ್ತದೆ. ನಮ್ಮ ತಾತನ ಸುಗಂಧ ದ್ರವ್ಯ ತಯಾರಿಕೆ ಪರಂಪರೆಗೆ ಇದು ರಾಜಗೌರವ ಎಂದು ಭಾವಿಸುತ್ತೇವೆ. ಮೂರು ತಲೆಮಾರುಗಳ ನಂತರವು ನಾವು ಅದನ್ನು ಮುಂದುವರೆಸಿಕೊಂಡು ಬಂದಿದ್ದೇವೆ. ಮೈಸೂರಿನಿಂದ ಜಗತ್ತಿಗೆ ಅತ್ಯುತ್ತಮವಾದ ಸುಗಂಧ ದ್ರವ್ಯವನ್ನು ಕೊಂಡೊಯ್ಯಲು ಹೆಮ್ಮೆಯಾಗುತ್ತಿದೆ ಎಂದು ಹೇಳಿದರು.

ದಸರಾ ಆನೆಗಳ ಮಾವುತರಿಗೆ ಸೈಕಲ್ ಪ್ಯೂರ್ ಅಗರಬತ್ತಿ ಕಂಪನಿಯಿಂದ ಮಿಕ್ಸರ್ ಗ್ರೈಂಡರ್ ಉಡುಗೊರೆ



ಮೈಸೂರು,ಅ.20–ಮೈಸೂರು ದಸರಾ ಮಹೋತ್ಸವದ ಪ್ರಮುಖ ಆಕರ್ಷಣೆಯ ಜಂಬೂಸವಾರಿಯ ತೆರೆಮರೆಯ ರೂವಾರಿಗಳಾದ ಆನೆಗಳ ಮಾವುತರಿಗೆ ದಸರಾ ಪ್ಲಾಟಿನಂ ಪ್ರಯೋಕ್ತತ್ವ ಪಡೆದಿರುವ ಸೈಕಲ್ ಪ್ಯೂರ್ ಅಗರಬತ್ತಿ ಕಂಪನಿಯಿಂದ ಮಿಕ್ಸರ್ ಗ್ರೈಂಡರ್‌ಗಳನ್ನು ಉಡುಗೊರೆಯಾಗಿ ನೀಡಿ ಗೌರವಿಸಲಾಯಿತು.

ಈ ಸಂದರ್ಭದಲ್ಲಿ ಮಾತನಾಡಿದ ಎನ್.ಆರ್.ಫೌಂಡೇಶನ್ ಅಧ್ಯಕ್ಷ ಆರ್.ಗುರು ರವರು, ಸೈಕಲ್ ಪ್ಯೂರ್ ಅಗರಬತ್ತಿ ಮನೆ ಮನೆಗಳಲ್ಲಿ ಪೂಜನೀಯವಾದ ಸ್ಥಾನ ಗಳಿಸಿದೆ. ಪ್ರಾರ್ಥನೆ ಮತ್ತು ಅಚಲ ನಂಬಿಕೆಯ ಪ್ರತಿಕವಾಗಿದೆ. ಮೈಸೂರಿನಲ್ಲಿ ಬೆಳೆದ ನನಗೆ ಅದರ ಭವ್ಯತೆ ಕಣ್ತುಂಬಿಕೊಳ್ಳುವ ಭಾಗ್ಯ ಸಿಕ್ಕಿದೆ. ನಮ್ಮ ಸಂಸ್ಥೆ 75ನೇ ವಾರ್ಷಿಕೋತ್ಸವವನ್ನು ಆಚರಿಸುತ್ತಿರುವ ಈ ವರ್ಷ ದಸರಾ ನಮಗೆ ಮತ್ತಷ್ಟು ಮಹತ್ವದ್ದಾಗಿದ್ದು ಈ ಮೈಲಿಗಲ್ಲನ್ನು ಸಂಭ್ರಮಿಸಲು ದಸರಾದಲ್ಲಿ ತೆರೆಮರೆಯ ವೀರರಾಗಿ ಕಾರ್ಯನಿರ್ವಹಿಸುತ್ತಿರುವ ಆನೆಗಳ ಮಾವುತರಿಗೆ ಕೃತಜ್ಞತೆ ಸಲ್ಲಿಸ ಬೇಕಿದೆ ಎಂದರು. ಕಾರ್ಯಕ್ರಮದಲ್ಲಿ ಡಿಸಿಎಫ್ ಸೌರಭ್‌ಕುಮಾರ್, ಎನ್.ರಂಗರಾವ್ ಸನ್ಸ್ ಪಾಲುದಾರರಾದ ಆರ್.ಗುರು, ಅರ್ಜುನ್ ರಂಗ್, ಪವನ್ ರಂಗ್, ಕಿರಣ್ ರಂಗ್, ಅನಿರುದ್ಧ್ ರಂಗ್, ವಿಷ್ಣುರಂಗ್ ಮತ್ತು ನಿಖಿಲ್ ರಂಗ್ ಉಪಸ್ಥಿತರಿದ್ದರು.

ಲೇಖಕಿ ಎಂ.ನಾಗವೀಣಾಗೆ ಡಾಕ್ಟರೇಟ್ ಪದವಿ



ಮೈಸೂರು ವಿಶ್ವವಿದ್ಯಾನಿಲಯದ 103ನೇ ಘಟಿಕೋತ್ಸವದಲ್ಲಿ 'ಮ್ಯಾನೇಜ್ಮೆಂಟ್ ಸೈನ್ಸ್' ವಿಭಾಗದಲ್ಲಿ ನಾಗವೀಣಾ ಪಿಎಚ್‌ಡಿ ಪದವಿಯನ್ನು, ವಿವಿ ಕುಲಪತಿ ಪ್ರೊ.ಎನ್.ಕೆ. ಲೋಕನಾಥ್, ಗೌರವ ಡಾಕ್ಟರೇಟ್ ಪಡೆದ 'ಮೈಸೂರು ಮಿತ್ರ' ಸಂಸ್ಥಾಪಕ ಸಂಪಾದಕರಾದ ಡಾ|| ಕೆ.ಬಿ.ಗಣಪತಿ, ಹಣಕಾಸು ಅಧಿಕಾರಿ ಪೂಜಾ ಅವರಿಂದ ಪಡೆದರು. ಲೇಖಕಿಯಾದ ನಾಗವೀಣಾ ಅವರು ಈವರೆಗೆ ಹತ್ತು ಪುಸ್ತಕಗಳನ್ನು ಲೋಕಾರ್ಪಣೆ ಮಾಡಿದ್ದಾರೆ. ಮಕ್ಕಳ ವಿಜ್ಞಾನ ಸಾಹಿತ್ಯದಲ್ಲಿ ವಿಶೇಷವಾಗಿ ಗುರುತಿಸಿಕೊಂಡಿದ್ದಾರೆ. 'ನಾದಪ್ರಸಂಗ' ಪತ್ರಿಕೆಯ ಉಪಸಂಪಾದಕರಾಗಿ, 'ಜೀವನ್ಮುಖಿ' ಹಾಗೂ 'ಸಿಟಿಕೆಂಪ್' ಪತ್ರಿಕೆಗಳಲ್ಲಿ ಅಂಕಣಕಾರರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಇವರು 'ಕಲಾಸಂಗಮ' ಎನ್‌ಜಿಓದ ಸಂಸ್ಥಾಪಕಿಯಾಗಿದ್ದಾರೆ.



ಶ್ರೀ ಛಾಯಾದೇವಿ ಶಿಕ್ಷಣ ಮಹಾವಿದ್ಯಾಲಯದಲ್ಲಿ ನಡೆದ ಪದವಿ ಪ್ರಮಾಣ ವಚನ ಕಾರ್ಯಕ್ರಮವನ್ನು ನರಸಿಂಹರಾಜ ಕ್ಷೇತ್ರದ ಶಾಸಕ ತನ್ವೀರ್ ಸೇಠ್, ಮೈಸೂರು ವಿಶ್ವವಿದ್ಯಾನಿಲಯದ ಕಾಲೇಜು ಅಭಿವೃದ್ಧಿ ಮಂಡಳಿಯ ನಿರ್ದೇಶಕರಾದ ಡಾ.ಆನಂದ್ ದೀಪ ಬೆಳಗಿಸುವುದರ ಮೂಲಕ ಉದ್ಘಾಟನೆ ಮಾಡಿದರು. ಸಂಸ್ಥೆಯ ಅಧ್ಯಕ್ಷರಾದ ಡಾ ಭಾನುಪ್ರಕಾಶ್, ಪ್ರಾಂಶುಪಾಲ ಡಾ ಅಂಥೋಣಿ ಪಾಲ್ ರಾಜ್ ಹಾಜರಿದ್ದರು. 81 ಬಿ ಇಡಿ ಪದವೀಧರ ಪ್ರಶಿಕ್ಷಕರು ಕೈಯಲ್ಲಿ ದೀಪ ಹಿಡಿದು ಪ್ರಮಾಣ ವಚನ ಸ್ವೀಕರಿಸಿದರು.

ಕ್ರೀಡಾ, ಸಾಂಸ್ಕೃತಿಕ ಸ್ಪರ್ಧೆಗಳ ಆಯೋಜನೆ

ಮೈಸೂರು, ಅ.20– ಅ.27ರಿಂದ 29ರವರೆಗೆ ತುಮಕೂರು ನಗರದ ಮಹಾತ್ಮ ಗಾಂಧಿ ಜಿಲ್ಲಾ ಕ್ರೀಡಾಂಗಣದಲ್ಲಿ ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘ, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಸಹಯೋಗದ ವತಿಯಿಂದ ರಾಜ್ಯ ಸರ್ಕಾರಿ ನೌಕರರ ರಾಜ್ಯ ಮಟ್ಟದ ಕ್ರೀಡಾ ಮತ್ತು ಸಾಂಸ್ಕೃತಿಕ ಸ್ಪರ್ಧೆಗಳನ್ನು ಏರ್ಪಡಿಸಲಾಗಿದ್ದು, ಕಾರ್ಯಕ್ರಮವನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಉದ್ಘಾಟಿಸುವರು.

ಜಿಲ್ಲಾ ಮಟ್ಟದಿಂದ ರಾಜ್ಯಮಟ್ಟಕ್ಕೆ ಆಯ್ಕೆಯಾಗಿರುವ ಸುಮಾರು 10,000 ಕ್ಕೂ ಹೆಚ್ಚಿನ ಕ್ರೀಡಾಪಟುಗಳು ಕ್ರೀಡಾಕೂಟಗಳಲ್ಲಿ ಭಾಗವಹಿಸಲಿದ್ದಾರೆ. ಅ.27 ಬೆಳಗ್ಗೆ 10 ಗಂಟೆಯಿಂದ ಸಂಜೆ 4:00 ವರೆಗೆ ನೋಂದಣಿ ಮಾಡಿಕೊಳ್ಳಬಹುದಾಗಿದೆ ಎಂದು ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಜಯದೇವ ಆಸ್ಪತ್ರೆ ಏಷ್ಯಾದಲ್ಲಿಯೇ ದೊಡ್ಡದು ಮಾತ್ರವಲ್ಲ ಅತ್ಯುತ್ತಮ ಆಸ್ಪತ್ರೆ



ಮೈಸೂರು, ಅ. 20– ಜಯದೇವ ಹೃದ್ರೋಗ ಆಸ್ಪತ್ರೆ ಏಷ್ಯಾದಲ್ಲಿಯೇ ಅತ್ಯಂತ ದೊಡ್ಡ ಆಸ್ಪತ್ರೆಯಾಗಿದ್ದು, 18 ಕ್ಯಾತ್ ಲ್ಯಾಬ್‌ಗಳನ್ನು ಹೊಂದಿದೆ ಎಂದು ಜಯದೇವ ಹೃದ್ರೋಗ ಮತ್ತು ವಿಜ್ಞಾನ ಸಂಸ್ಥೆಯ ನಿರ್ದೇಶಕ ಪದ್ಮಶ್ರೀ ಡಾ. ಸಿ.ಎನ್. ಮಂಜುನಾಥ್ ತಿಳಿಸಿದರು.

ಮೈಸೂರಿನ ಜಯದೇವ ಹೃದ್ರೋಗ ಆಸ್ಪತ್ರೆಗೆ ಗುರುವಾರ ಭೇಟಿ ನೀಡಿ ಪರಿಶೀಲಿಸಿ ಮಾತನಾಡಿದ ಅವರು, ಬೆಂಗಳೂರು, ಮೈಸೂರು, ಕಲ್ಬುರ್ಗಿ ಸೇರಿದಂತೆ 1600 ಬೆಡ್‌ಗಳ ಸಾಮರ್ಥ್ಯವಿರುವ ಜಯದೇವ ಆಸ್ಪತ್ರೆ ಪ್ರತಿನಿತ್ಯ ಸಾವಿರಾರು ಜನರಿಗೆ ಚಿಕಿತ್ಸೆ ನೀಡುತ್ತಿದೆ. ಮೈಸೂರಿನಲ್ಲಿ ಪ್ರತಿನಿತ್ಯ 700 ಜನರಿಗೆ ಹೊರರೋಗಿಗಳಿಗೆ ಚಿಕಿತ್ಸೆ ನೀಡುತ್ತಿದ್ದೇವೆ. ಇದುವರೆಗೆ 8 ಲಕ್ಷದ 89 ಸಾವಿರ ಜನರಿಗೆ ಇಸಿಜಿ ಮಾಡಿದ್ದೇವೆ. 5 ಲಕ್ಷದ 83 ಸಾವಿರ ಜನರಿಗೆ ಎಕೋ ಆಗಿದೆ. 31.265 ಜನರಿಗೆ ಆಂಜಿಯೋಪ್ಲಾಸ್ಟಿ ಆಗಿದೆ. 2141 ಜನರಿಗೆ ತೆರೆದ ಹೃದಯ ಶಸ್ತ್ರ ಚಿಕಿತ್ಸೆಯನ್ನು ಮಾಡಿದ್ದೇವೆ ಎಂದ ಅವರು ಈ ಆಸ್ಪತ್ರೆಯಿಂದ ಮೈಸೂರು, ಮಂಡ್ಯ, ಚಾಮರಾಜನಗರ, ಕೊಡಗು, ಹಾಸನ ಭಾಗದ ಜನರಿಗೆ ಅನುಕೂಲವಾಗಿದ್ದು ಹಣ ಇರಲಿ, ಇಲ್ಲದಿರಲಿ ಮೊದಲು ಮಾನವೀಯತೆಗೆ ಆದ್ಯತೆ ನೀಡಿ ಚಿಕಿತ್ಸೆ ನೀಡುತ್ತೇವೆ. ವೈದ್ಯರು ಮತ್ತು ಸಿಬ್ಬಂದಿ ಉತ್ತಮವಾಗಿ ಕೆಲಸ ಮಾಡುತ್ತಿದ್ದಾರೆ. ಅದಕ್ಕಾಗಿ ಅವರನ್ನು ಅಭಿನಂದಿಸುತ್ತೇನೆ ಎಂದರು.

ಈ ಸಂದರ್ಭದಲ್ಲಿ ವೈದ್ಯಕೀಯ ಅಧೀಕ್ಷಕ ಡಾ. ಕೆ.ಎಸ್.ಸದಾನಂದ, ಡಾ. ಹರ್ಷ ಬಸಪ್ಪ, ವಿಧಾನ ಪರಿಷತ್ ಮಾಜಿ ಸದಸ್ಯ ಡಿ.ಎಲ್. ಜಗದೀಶ, ಡಾ. ಸಂತೋಷ, ಡಾ.ಶ್ರೀನಿಧಿ ಹೆಗ್ಗಡೆ, ಡಾ. ಶಂಕರ್ ಶಿರಾ, ಡಾ. ದೇವರಾಜ್, ನರ್ಸಿಂಗ್ ಅಧೀಕ್ಷಕ ಹರೀಶ್ ಕುಮಾರ್ ಪಿಆರ್‌ಓಗಳಾದ ವಾಣಿ, ಚಂಪಕಮಾಲ, ಶಂಕರ ಹಾಜರಿದ್ದರು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

21.10.2023 ಶನಿವಾರ, ಮಳೆ ನಕ್ಷತ್ರ: ಚಿತ್ತ,
11.10.2023 ರಿಂದ 24.10.2023 ಶ್ರೀ ಶೋಭಕೃತ್ ನಾಮ ಸಂವತ್ಸರ, ದಕ್ಷಿಣಾಯನ, ಶರದ್ ಋತು, ಅಶ್ವಯುಜ ಮಾಸ, ಶುಕ್ಲ ಪಕ್ಷ, ತಿಥಿ: ಸಪ್ತಮಿ, ನಕ್ಷತ್ರ: ಪೂಷಾ,
ರಾಹುಕಾಲ: ಬೆಳಗ್ಗೆ 9 ರಿಂದ 10.30ರವರೆಗೆ

■ **ರಾಮ್‌ಸನ್ಸ್ ಬೊಂಬೆ ಮನೆ:** ದಸರೆ ಬೊಂಬೆ ಪ್ರದರ್ಶನ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, ನಜರ್‌ಬಾದ್ ಮುಖ್ಯ ರಸ್ತೆ, ಬೆಳಗ್ಗೆ 10ರಿಂದ ಸಂಜೆ 7ರವರೆಗೆ.

■ **ಶ್ರೀ ಚಂದ್ರಮೌಳೀಶ್ವರಸ್ವಾಮಿ ದೇವಸ್ಥಾನ:** ಶರನ್ನವರಾತ್ರಿ ಉತ್ಸವ, ಸಪ್ತಶತಿ ಪಾರಾಯಣ, ಸುಮಂಗಲಿಯರಿಂದ ಕುಂಕುಮಾರ್ಚನೆ, ಪೂರ್ಣಾಹುತಿ, ಶ್ರೀ ಮಹಾ ಸರಸ್ವತಿ ಹೋಮ, ಕಾಳಿಕಾ ಅಲಂಕಾರ, ಸ್ಥಳ: ದೇವಸ್ಥಾನದ ಪ್ರಾಂಗಣ, ವಿ.ವಿ.ಮೊಹಲ್ಲಾ, ಬೆಳಗ್ಗೆಯಿಂದ.

■ **ಸ್ವರ್ಣ ನೃಸಿಂಹದತ್ತ ಸಾಯಿ ಪೀಠಿಕ ಸೇವಾ ಟ್ರಸ್ಟ್ :** ಶರನ್ನವರಾತ್ರಿ ಪೂಜಾ ಮಹೋತ್ಸವ, ಸಪ್ತಶತಿ ಪಾರಾಯಣ, ಆಶೀರ್ವಾದ: ಶ್ರೀ ವೆಂಕಟಚಲ ಅವಧೂತ ಗುರು ಮಹಾರಾಜರು, ಸಾನ್ನಿಧ್ಯ: ಶ್ರೀ ಅರ್ಜುನ ಅವಧೂತರು, ಬಗಳಾಮುಖಿಹೋಮ, ಸ್ಥಳ: ಶ್ರೀರಾಮಮಂದಿರ, ಜಯನಗರ, ಬೆಳಗ್ಗೆ 10 ಗಂಟೆಗೆ.

■ **ಸಿ. ಕೃಷ್ಣಯ್ಯ ಚೆಟ್ಟಿ ಗ್ರೂಪ್ ಆಫ್ ಜ್ಯುವೆಲ್ಲರ್ಸ್ :** ಎಕ್ಸ್‌ಕ್ಲೂಸಿವ್ ದರ್ಬಾರ್ ಕಲೆಕ್ಷನ್ ಪ್ರದರ್ಶನ, ಸ್ಥಳ: ಹೋಟೆಲ್ ಸಂದೇಶ್ ದಿ ಪ್ರಿನ್ಸ್, ಬೆಳಗ್ಗೆ 10.30 ರಿಂದ.

■ **ತ್ರಯೀನ್ಯಾಸ್ ಶ್ರೀವಿದ್ಯಾ ಫೌಂಡೇಷನ್ :** 26ನೇ ವರ್ಷದ ಶರನ್ನವರಾತ್ರಿ ಮಹೋತ್ಸವ, ಬೆಳಗ್ಗೆ 8.30ರಿಂದ ಮಹಾಭಿಷೇಕ, ಶ್ರೀ ಸರಸ್ವತಿ ಆವಾಹನ, ಶ್ರೀ ಕಾಲರಾತ್ರಿ, ಶ್ರೀ ವಿದ್ಯಾ ಲವಣದುರ್ಗಾ ಪೂಜಾ, ಸಪ್ತಶತಿ ಪಾರಾಯಣ, ಲಲಿತೋಪಾಖ್ಯಾನ ಪಾರಾಯಣ, ಶ್ರೀ ಚಕ್ರಾರ್ಚನೆ, ಶ್ರೀ ಸುಂದರಕಾಂಡ ಪಾರಾಯಣ, ಸಂಜೆ 5.30ಕ್ಕೆ ಶ್ರೀ ಬಾಲಾ ತ್ರಿಪುರಸುಂದರೀ ಮತ್ತು ಶ್ರೀ ದಶಶ್ಯಾಮಲಾ ಹೋಮ, ಸ್ಥಳ: ತ್ರಯೀನ್ಯಾಸ್, ಜಯಲಕ್ಷ್ಮಿಪುರಂ.

■ **ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮ:** ಶ್ರೀದೇವಿ ನವರಾತ್ರಿ ಕಾರ್ಯಕ್ರಮ, ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ, ಶ್ರೀ ದತ್ತ ವಿಜಯಾನಂದ ತೀರ್ಥ ಸ್ವಾಮೀಜಿ ದಿವ್ಯ ಸಾನ್ನಿಧ್ಯ, ಬೆಳಗ್ಗೆ 9ರಿಂದ ಶ್ರೀದೇವಿ ಪಲ್ಲಕ್ಕಿ ಉತ್ಸವ, ಕುಮಾರಿ ಪೂಜೆ, ಶ್ರೀ ಚಕ್ರಪೂಜೆ, ನವಾವರಣ ಪೂಜೆ, ವಿದುಷಿ ಪುಣ್ಯ ಶ್ರೀನಿವಾಸ್ ಅವರಿಂದ ಕರ್ನಾಟಕ ವೀಣಾ ವಾದನ, ಮಧ್ಯಾಹ್ನ 12 ಗಂಟೆಗೆ ಅನ್ನಾರ್ಚನೆ, ಸರಸ್ವತಿ ಪೂಜೆ, ಹೋಮ ಪೂರ್ಣಾಹುತಿ, ಸಂಜೆ 4 ಗಂಟೆಗೆ ಮಹಾಮಂಗ ಳಾರತಿ, ಡೋಲೋತ್ಸವ, ಸುನಾಸಿನಿ ಪೂಜೆ, ಸಂಜೆ 6 ಗಂಟೆಗೆ ಶ್ರೀ ಸ್ವಾಮೀಜಿ ಅವರಿಂದ ದೇವಿ ಭಜನೆ ಮತ್ತು ಪ್ರವಚನ, ಸ್ಥಳ: ನಾದಮಂಟಪ, ಆಶ್ರಮದ ಆವರಣ.

■ **ಶ್ರೀ ಸುಬ್ರಾಯದಾಸರ ಪ್ರಸನ್ನ ವೆಂಕಟರಮಣಸ್ವಾಮಿ ದೇವಸ್ಥಾನ:** ನವರಾತ್ರಿ ಬ್ರಹ್ಮೋತ್ಸವ, ಸಪ್ತಮಿ, ಬೆಳಗ್ಗೆ ಪವಮಾನ ಹೋಮ, ಹನುಮಂತೋತ್ಸವ, ಸಾಯಂಕಾಲ ಪ್ರಹ್ಲದೋತ್ಸವ, ಗರುಡೋತ್ಸವ, ಸ್ಥಳ: ದೇವಸ್ಥಾನದ ಆವರಣ, ಕೃಷ್ಣವಿಲಾಸ ರಸ್ತೆ, ದೇವರಾಜ ಮೊಹಲ್ಲಾ.

■ **ಶ್ರೀ ಮುಕ್ಕಣ್ಣೇಶ್ವರ ಸ್ವಾಮಿ ದೇವಸ್ಥಾನ:** 55ನೇ ವರ್ಷದ ನವರಾತ್ರಿ ಪೂಜಾ ಕಾರ್ಯಕ್ರಮ, ಶ್ರೀ ರಾಜರಾಜೇಶ್ವರಿ ಅಲಂಕಾರ, ಸಂಜೆ 5 ಗಂಟೆಗೆ.

■ **ಶ್ರೀ ವ್ಯಾಸರಾಜ ಮಠ :** ನವರಾತ್ರಿ ಪ್ರಯುಕ್ತ ವಿದ್ವಾನ್ ಎಸ್.ಎಂ. ಪ್ರಣವಾಚಾರ್ಯ ಅವರಿಂದ 'ಶ್ರೀನಿವಾಸ ಕಲ್ಯಾಣ ಪ್ರವಚನ' ಸ್ಥಳ: ಶ್ರೀ ವ್ಯಾಸರಾಜ ಮಠ ಸೋಸಲೆ ಶ್ರೀ ವ್ಯಾಸತೀರ್ಥ ವಿದ್ಯಾಪೀಠ, ಕೃಷ್ಣಮೂರ್ತಿಪುರಂ, ಸಂಜೆ 6 ರಿಂದ.

■ **ರಂಗಾಯಣ :** ನವರಾತ್ರಿ ರಂಗೋತ್ಸವ, ಹುಣಸೂರಿನ ಲಾಸಲೆಟ್ ಪದವಿಪೂರ್ವ ಕಾಲೇಜು ವಿದ್ಯಾರ್ಥಿಗಳಿಂದ ಕೂಳಿನ ಕಾಳಗ ನಾಟಕ ಪ್ರದರ್ಶನ, ಸ್ಥಳ: ಭೂಮಿಗೀತ, ಸಂಜೆ 6.30ಕ್ಕೆ.

■ **ಶ್ರೀರಾಮಕೃಷ್ಣ ಆಶ್ರಮ :** ಮಹಾಸಪ್ತಮಿ, ಬೆಳಗ್ಗೆ 7ಕ್ಕೆ ಶ್ರೀ ದುರ್ಗಾ ಮಾತೆಗೆ ಪೂಜೆ, 8ಕ್ಕೆ ಚಂಡೀಪಾರಾಯಣ, 11ಕ್ಕೆ ಭಜನೆ, 11.45ಕ್ಕೆ ಆರತಿ ಹಾಗೂ ಪುಷ್ಪಾಂಜಲಿ, ಸಂಜೆ 7ಕ್ಕೆ ಸಂಧ್ಯಾರತಿ, ವಿಶೇಷ ಭಜನೆ, ಸ್ಥಳ: ಆಶ್ರಮದ ಆವರಣ, ಯಾದವಗಿರಿ.

■ **ಶ್ರೀ ನಟರಾಜ ಮಹಿಳಾ ವಸತಿ ಪ್ರಥಮ ದರ್ಜೆ ಕಾಲೇಜು :** ರಾಷ್ಟ್ರಕವಿ ಕುವೆಂಪು ಸಾಹಿತ್ಯ ಸಂವಾದ ಮತ್ತು ದಸರಾ ಕವಿಗೋಷ್ಠಿ, ಸಾನ್ನಿಧ್ಯ : ಶ್ರೀ ನಟರಾಜ ಪ್ರತಿಷ್ಠಾನ ಅಧ್ಯಕ್ಷ ಶ್ರೀ ಚಿದಾನಂದ ಸ್ವಾಮೀಜಿ, ಸಂವಾದದಲ್ಲಿ: ಕುವೆಂಪು ಅವರ ಪುತ್ರಿ ಶ್ರೀಮತಿ ತಾರಿಣಿ ಚಿದಾನಂದ, ಮುಖ್ಯ ಅತಿಥಿಗಳು : ಕುವೆಂಪು ವಿವಿ ವಿಶ್ರಾಂತ ಕುಲಪತಿ ಪ್ರೊ. ಕೆ. ಚಿದಾನಂದಗೌಡ, ಅಧ್ಯಕ್ಷತೆ : ಶ್ರೀ ನಟರಾಜ ಪ್ರತಿಷ್ಠಾನ ವಿಶೇಷಾಧಿಕಾರಿ ಪ್ರೊ. ಎಸ್. ಶಿವರಾಜಪ್ಪ, ಉಪಸ್ಥಿತರು : ಪ್ರಾಂಶುಪಾಲರಾದ ಡಾ.ಎಂ. ಶಾರದಾ, ಡಾ. ಜಿ. ಪ್ರಸಾದಮೂರ್ತಿ, ಸ್ಥಳ: ಶ್ರೀ ನಟರಾಜ ಸಭಾ ಭವನ, ಬೆಳಗ್ಗೆ 10.30ಕ್ಕೆ.


ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ದಸರಾ ಗೀತಾರಾಧನ, 6.30 ಮೈಸೂರು ದಸರಾದಲ್ಲಿ ಇಂದು, ಪ್ರಸ್ತುತಿ–ಪ್ರಭುಸ್ವಾಮಿ ಮಳಿಮಠ್, ಸಂಕಲನ–ಎಸ್. ಲಕ್ಷ್ಮೀನಾರಾಯಣ, 6.35 ಮತ್ತು ಸಂಜೆ 6.10ಕ್ಕೆ ಸಿ.ಎಫ್.ಟಿ.ಆರ್.ಐ ಶೋಧ ಅನುಶೋಧ – ಪ್ರಾಯೋಜಿತ ಕಾರ್ಯಕ್ರಮ, ಪ್ರಸ್ತುತಿ– ಡಾ. ವಿ.ಬಿ. ಕುಡಚಿರ, 6.40 ಹಾಡು ಹೇಳಿದ ಕಥೆ, ಪ್ರಸ್ತುತಿ– ಡಾ. ಮೈಸೂರ್ ಉಮೇಶ್, 7.15 ಭಾವಗೀತೆಗಳು–ಸುಪ್ರಿಯಾ ಆಚಾರ್ಯ, ಎಂ.ಡಿ.ಪಲ್ಲವಿ, 9.05 ಮೈಸೂರು ಮಹಲುಗಳು–ರೂಪಕ ಸರಣಿ, ಪ್ರಸ್ತುತಿ–ಡಾ. ಮೈಸೂರು ಉಮೇಶ್, 10.00 ದಸರಾ ವಿಶೇಷ ಕಥಾ ಕಾಲಕ್ಷೇಪ – "ಶಾಕಂಬರಿ ಅವತಾರ", ನಡೆಸಿಕೊಡುತ್ತಾರೆ ವಿ. ಮಾಲಿನಿ, 11.00 "ಸ್ವರಾಜ್"– ಭಾರತ ಸ್ವಾತಂತ್ರ್ಯ ಸಂಗ್ರಾಮದ ಸಮಗ್ರಗಾಥೆ

ಮಧ್ಯಾಹ್ನ: 12.30 "ಕನಕ–ಜಾನಕಿ" ತಾಳಮದ್ದಲೆಯ ರೂಪಕ ಸರಣಿ, ಪರಿಕಲ್ಪನೆ ಮತ್ತು ಪ್ರಸ್ತುತಿ– ದಿವಾಕರ ಹೆಗಡೆ, 1.00 ಪ್ರಗತಿ ಪಥ–ಕೇಂದ್ರ ಸರ್ಕಾರದ ಅಭಿವೃದ್ಧಿ ಯೋಜನೆಗಳನ್ನು ಕುರಿತ ಕಾರ್ಯಕ್ರಮ, 12.45 ಜನಪದಗೀತೆ–ಸ್ವಾಮಿಗೌಡ ಮತ್ತು ಸಂಗಡಿಗರು, 1.20 ಭಾವಗೀತೆ–ಆರ್. ಶೈಲಾ, 1.30 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 3.30 ಮಕ್ಕಳ ಮಂಟಪ–ನಂದಗೋಕುಲ, ಪ್ರಸ್ತುತಿ– ಕೆ.ಬಿ. ವೀನಾ, 4.00 ನಾಟಕ "ಅಂತರಾತ್ಮ ನೀಡಿದ್ ಕಣ್ ಬೆಳಕು", ರಚನೆ–ವನಮಾಲಾ ಆಚಾರ್, ಪ್ರಸ್ತುತಿ– ಜಯಚಂದ್ರ, 4.30 ನೆನಪಿನಂಗಳ–ಬಿಳಿಗಿರಿ ರಂಗನ ಬೆಟ್ಟದ ಶ್ರೀ ವಿವೇಕಾನಂದ ಗಿರಿಜನ ಕಲ್ಯಾಣ ಕೇಂದ್ರದ ರಜತ ಮಹೋತ್ಸವದಲ್ಲಿ ಭಾರತದ ಸನ್ಮಾನ್ಯ ಮಾಜಿ ರಾಷ್ಟ್ರಪತಿಗಳಾದ ಡಾ.ಎ.ಪಿ.ಜೆ. ಅಬ್ದುಲ್ ಕಲಾಂ ಅವರು ಮಾಡಿದ ಭಾಷಣದ ಆಯ್ದ ಭಾಗಗಳು, 6.50 ಕೃಷಿರಂಗ–ತೋರಣ ಹೂರಣ–ವಾರದ ಗ್ರಾಮೀಣ ಕಾರ್ಯಕ್ರಮ, ಪ್ರಸ್ತುತಿ–ಎನ್. ಕೇಶವಮೂರ್ತಿ, ಆರ್. ಲೋಕೇಶ್ವರಿ, ಪರಾಗ–ಬೇಸಾಯದ ಬದುಕು ಸರಾಗ – ಬಾನುಲಿ ಸರಣಿ, 8.00 ಯುವವಾಣಿ, 9.30 "ಮೈಸೂರಿನಿಂದಾಗಿ ದಸರಾ–ದಸರೆಯಿಂದಾಗಿ ಮೈಸೂರು", ಮಾತನಾಡುವವರು ಡಾ. ವಿ. ರಂಗನಾಥ್, 10.00 ರಾಷ್ಟ್ರೀಯ ಸಂಗೀತ ಕಾರ್ಯಕ್ರಮ, ಅಜೀಜ್–ವಯೋಲಿನ್ ವಾದನ

ಮೈಸೂರು ದಸರಾ ಕಾರ್ಯಕ್ರಮ



■ **ಅರಮನೆ ಆವರಣ**

ಬೆಳಗ್ಗೆ 6 ರಿಂದ ಸೂರ್ಯೋದಯ ದಿಂದ ಸೂರ್ಯಾಸ್ತದವರೆಗೆ, ಸಂಜೆ 6 ರಿಂದ ವಿದ್ವಾನ್ ಡಾ. ಸಿ.ಎ. ಶ್ರೀಧರ್ ಅವರಿಂದ ಕರ್ನಾಟಕ ಶಾಸ್ತ್ರೀಯ ಸಂಗೀತ, ಸಂಜೆ 6.40 ರಿಂದ ಚೌಡಿಕೆ ಪದಗಳು ಖ್ಯಾತಿಯ ಶಿಲ್ಪಾ ಮುಡಬಿ ಅವರಿಂದ ಮರೆತ ಮಣ್ಣಿನ ಹಾಡುಗಳು, ಸಂಜೆ 7.30 ರಿಂದ ಮೈಸೂರಿನ ಪಂಡಿತ್ ರಾಜೀವ್ ತಾರಾನಾಥ್ ಅವರಿಂದ ಸರೋದ್ ವಾದನ, ರಾತ್ರಿ 8.30 ರಿಂದ ವಿದ್ವಾನ್ ರಾಜೇಶ್ ವೈದ್ಯ, ವಿದ್ವಾನ್ ಯು. ರಾಜೇಶ್ ಅವರಿಂದ ವೀಣಾ– ಮ್ಯಾಂಡೋಲಿನ್ ಜುಗಲ್‌ಬಂದಿ ಫ್ಯೂಷನ್.

■ **ಜಗನ್ಮೋಹನ ಅರಮನೆ ವೇದಿಕೆ**

ಸಂಜೆ 6 ರಿಂದ ಮಂಡ್ಯದ ಎ.ಎಂ. ಗೋವಿಂದರಾಜು ಅವರಿಂದ ನಾದಸ್ವರ, ಸಂಜೆ 6.45 ರಿಂದ ದಕ್ಷಿಣ ಕನ್ನಡದ ಭರತಾಂಜಲಿ ಅವರಿಂದ ಭರತನಾಟ್ಯ, ಸಂಜೆ 7.30ಕ್ಕೆ ತುಮಕೂರಿನ ಡಾ. ಲಕ್ಷ್ಮಣದಾಸ್ ಅವರಿಂದ ಹರಿಕಥೆ, ರಾತ್ರಿ 8.30ಕ್ಕೆ ಡಾ. ತುಳಸಿ ರಾಮಚಂದ್ರ ಅವರಿಂದ ನೃತ್ಯರೂಪಕ : ದನ್ಯ ಮಾನಿನಿ

■ **ಕರ್ನಾಟಕ ಕಲಾಮಂದಿರ ವೇದಿಕೆ**

ಸಂಜೆ 6 ರಿಂದ ಮೈಸೂರಿನ ರವಿಕಿರಣ್ ಮತ್ತು ತಂಡದಿಂದ ವಾದ್ಯ ಸಂಗೀತ, ಸಂಜೆ 6.45 ರಿಂದ ಧಾರವಾಡದ ಕವನಾ ವೆಂ. ಹೆಗಡೆ ಅವರಿಂದ ಕಥಕ್ ನೃತ್ಯ, ಸಂಜೆ 7.30ಕ್ಕೆ ಶ್ರೀಮತಿ ಶುಭಾಂಗಿ ಅವರಿಂದ ನೃತ್ಯರೂಪಕ : ಓಂಕರ ನೃತ್ಯ ಸಾಧನ, ರಾತ್ರಿ 8.30ಕ್ಕೆ ಆರ್. ನಿತ್ಯಶ್ರೀ ಅವರಿಂದ ಕರ್ನಾಟಕ ಶಾಸ್ತ್ರೀಯ ಸಂಗೀತ.

■ **ಗಾನಭಾರತಿ ವೇದಿಕೆ**

ಸಂಜೆ 6 ರಿಂದ ಮೈಸೂರಿನ ರಾಮಚಂದ್ರ ಮತ್ತು ತಂಡದಿಂದ ಸುಗಮ ಸಂಗೀತ, ಸಂಜೆ 6.45 ರಿಂದ ಬೆಂಗಳೂರು ಕುಶಾಲ್ ಡಿ.ಆರ್. ಅವರಿಂದ ವಯೋಲಿನ್ ವಾದನ, ರಾತ್ರಿ 7.30 ರಿಂದ ನೃತ್ಯಲೋಕ ಡಾ. ವಿದ್ಯಾಕುಮಾರಿ ಶಿಮ್ಲಡ್ಕ ಅವರಿಂದ ನೃತ್ಯರೂಪಕ, ರಾತ್ರಿ 8.30 ರಿಂದ ಹಾಸನದ ರೋಹನ್ ಅಯ್ಯರ್ ಅವರಿಂದ ಸುಗಮ ಸಂಗೀತ.

■ **ನಾದಬ್ರಹ್ಮ ಸಂಗೀತಾ ಸಭಾ ವೇದಿಕೆ**

ಸಂಜೆ 6 ರಿಂದ ಹಾಸನದ ಎಸ್. ಶಿವಣ್ಣ ಅವರಿಂದ ಜನಪದ ಗೀತೆ, ಸಂಜೆ 6.45 ರಿಂದ ಧಾರವಾಡದ ಸಂಗೀತ ಹೆಗಡೆ ಅವರಿಂದ ಹಿಂದೂಸ್ಥಾನಿ ಶಾಸ್ತ್ರೀಯ ಸಂಗೀತ, ರಾತ್ರಿ 7.30 ರಿಂದ ವಿದುಷಿ ವರ್ಷಾ ರವಿಪ್ರಕಾಶ್ ಅವರಿಂದ ಭರತನಾಟ್ಯ, ರಾತ್ರಿ 8.30 ರಿಂದ ಮೈಸೂರಿನ ಪ್ರಿಯ ಎಸ್. ಮತ್ತು ತಂಡದಿಂದ ಸುಗಮ ಸಂಗೀತ.

■ **ಚಿಕ್ಕ ಗಡಿಯಾರ ವೇದಿಕೆ**

ಸಂಜೆ 6 ರಿಂದ ತುಮಕೂರು ವೈ.ಎಚ್. ಉಮೇಶ್ ಅವರಿಂದ ವೀರಭದ್ರ ಕುಣಿತ, ಮೈಸೂರು ಪುಟ್ಟರಾಜು, ಹೊಸಹುಂಡಿ ಅವರಿಂದ ಕಂಸಾಳೆ, ಸಂಜೆ 6.30 ರಿಂದ ರಾಜಪ್ಪ ಕೋಲಾರ ಮತ್ತು ತಂಡದಿಂದ ಜನಪದ ಗಾಯನ, ಸಂಜೆ 7 ರಿಂದ ಬದನವಾಳು ಲಕ್ಷ್ಮಿನಾರಾಯಣ ಅವರಿಂದ ಜನಪದ ಗಾಯನ, ರಾತ್ರಿ 8.30 ರಿಂದ ಧಾರವಾಡ ಭಾಗ್ಯಶ್ರೀ ಗಾಳೆಮ್ಮನವರ್ ಅವರಿಂದ ಜನಪದ ಗಾಯನ.

■ **ಪುರಭವನ ವೇದಿಕೆ**

ಬೆಳಗ್ಗೆ 10.30ರಿಂದ ಮೈಸೂರು ಮಹದೇಶ್ವರ ಮಿತ್ರ ಮಂಡಳಿ ಅವರಿಂದ ಐತಿಹಾಸಿಕ ನಾಟಕ : ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ, ಮಧ್ಯಾಹ್ನ 3 ರಿಂದ ಮೈಸೂರು ಶ್ರೀ ಗುರುರಾಜ ನಾಟಕ ಮಂಡಳಿ ಅವರಿಂದ ಪೌರಾಣಿಕ ನಾಟಕ : ದಕ್ಷಯಜ್ಞ, ಸಂಜೆ 6 ರಿಂದ ಚನ್ನಪಟ್ಟಣ ಆರಾಧನಾ ಕಲಾ ಟ್ರಸ್ಟ್ ಅವರಿಂದ ಪೌರಾಣಿಕ ನಾಟಕ : ಶ್ರೀ ಕೃಷ್ಣ ಸಂಧಾನ.

■ **ಕಿರುರಂಗಮಂದಿರ ವೇದಿಕೆ**

ಮಧ್ಯಾಹ್ನ 2ರಿಂದ ಕೊಳತ್ತೂರು ಪಿ. ಮಹದೇಶ್ವರಸ್ವಾಮಿ ಅವರಿಂದ ಜನಪದ ಗಾಯನ, ಮ. 3 ರಿಂದ ರಂಗಚಂದಿರ ಟ್ರಸ್ಟ್ ಅವರಿಂದ ನಾಟಕ : ಶಕ್ತಿಮಿತ್ರ, ಸಂಜೆ 7 ರಿಂದ ಧಾರವಾಡ ಸುನಿಧಿ ಕಲಾಸೌರಭ ಅವರಿಂದ ನಾಟಕ : ಮಹಾಮಾರಿ

■ **ರಮಾಗೋವಿಂದ ರಂಗಮಂದಿರ ವೇದಿಕೆ**

ಸಂಜೆ 5.30 ರಿಂದ ಅರೆಭಾಷೆ ಕೃಷಿ ಜಾನಪದ : ಅಭಿನಯ ಕಲಾಮಿಲನ ಚಾರಿಟೆಬಲ್ ಟ್ರಸ್ಟ್ ಮಿಲನ ಕೆ. ಭರತ್ ಅವರಿಂದ ಕೊಡಗಿನ ಸುಗ್ಗಿ ಕುಣಿತ, ಹುತ್ತರಿ ಕೋಲು, ಜೋಗಿ ಕುಣಿತ, ಸಂಜೆ 6.30 ರಿಂದ ಕೆ.ಎಸ್. ಮುದ್ದಪ್ಪ ಸ್ಮಾರಕ ಟ್ರಸ್ ಡಾ. ಎಂ. ಭೈರೇಗೌಡ ಅವರಿಂದ ಯಕ್ಷಲಾಪ, ಸಂಜೆ 7.30 ರಿಂದ ಬೆಂಗಳೂರು ಸಮಾಜಮುಖಿ ತಂಡದಿಂದ ನಾಟಕ : ಚಾವುಂಡರಾಯ.

■ **ನಟನ ರಂಗಮಂದಿರ**

ಸಂಜೆ 5ರಿಂದ ಮಂಗಳೂರು ಜರ್ನಿ ಥೇಟರ್ ಗ್ರೂಪ್‌ನಿಂದ ರಂಗ ಸಂಗೀತ, ಜನಪದ ಸಂಗೀತ, ಸಂಜೆ 6.30 ರಿಂದ ಮಂಡ್ಯದ ಕರ್ನಾಟಕ ಸಂಘದಿಂದ ನಾಟಕ : ನಿತ್ಯಸಚಿವ, ರಚನೆ : ರಾಜಪ್ಪ ದಳವಾಯಿ, ನಿರ್ದೇಶನ : ಪ್ರಮೋದ್ ಶಿಗ್ಗಾಂವ್, ಅಜಯ್ ನೀನಾಸಂ.

■ **ಮಹಾರಾಜ ಕಾಲೇಜು ಮೈದಾನ**

ಯುವ ದಸರಾ ಕಾರ್ಯಕ್ರಮ

ಸಂಜೆ ಸಂಜೆ 7 ರಿಂದ ಮೋಹನ್ ಸಿಸ್ಟರ್ಸ್ ಮತ್ತು ತಂಡದಿಂದ ಕಾರ್ಯಕ್ರಮ, ರಾತ್ರಿ 9 ರಿಂದ ಬೆನ್ನಿ ದಯಾಳ್ ಮತ್ತು ತಂಡದಿಂದ ರಸಮಂಜರಿ ಕಾರ್ಯಕ್ರಮ

ಶ್ರೀಕಂಠೇಶ್ವರ ದೇವಸ್ಥಾನ

■ **ನಂಜನಗೂಡು ವೇದಿಕೆ**

ಸಂಜೆ 6 ರಿಂದ ಬಾಗಲಕೋಟೆ ಪ್ರಕಾಶ್ ಮಲ್ಲಪ್ಪ ಹುಣಸೆಹಾಳ ಅವರಿಂದ ಕರಡಿ ಮಜಲು, ಸಂಗೀತ ಬಿ ಮತ್ತು ತಂಡದಿಂದ ವಚನ ಗಾಯನ, ಸಂಜೆ 6.30 ರಿಂದ ಮೈಸೂರಿನ ವಿದುಷಿ ಜ್ಯೋತಿ ಅವರಿಂದ ಪಂಚ ವೀಣವಾದನ, ರಾತ್ರಿ 7 ರಿಂದ ಬೆಂಗಳೂರು ಕು. ಅನು ಮತ್ತು ತಂಡದಿಂದ ನೃತ್ಯರೂಪಕ, ರಾತ್ರಿ 7.30 ರಿಂದ ಚನ್ನಪಟ್ಟಣದ ಹೊಂಬಾಳಯ್ಯ, ಪ್ರಸನ್ನಕುಮಾರ್ ಎಂ.ಡಿ. ಅವರಿಂದ ಜನಪದ ಗೀತ ಗಾಯನ, ರಾತ್ರಿ 8.30 ರಿಂದ ರಾಮನಗರದ ಸ್ವಾಮಿ ಮೆಣಸಿಗನಹಳ್ಳಿ ಹಾಗೂ ಬೇವೂರು ರಾಮಯ್ಯ ಮತ್ತು ತಂಡದಿಂದ ಜನಪದ ಗಾಯನ

ಮಹಿಳಾ ಮತ್ತು ಮಕ್ಕಳ ದಸರಾ–2023

■ **ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಮೈಸೂರು:** ಬೆಳಗ್ಗೆ 10 ರಿಂದ ಮ್ಯಾಜಿಕ್ ಶೋ, ಜಾನಪದ ಜಾದೂ, ರಸ ಮಂಜರಿ ಕಾರ್ಯಕ್ರಮ, ಬೆಳಗ್ಗೆ 11ಕ್ಕೆ ಅಂಗನವಾಡಿ ಮಕ್ಕಳಿಂದ ವೇಷಭೂಷಣ ಸ್ಪರ್ಧೆ, ಅಂಗನವಾಡಿ ಮಕ್ಕಳಿಂದ ಸಾಂಸ್ಕೃತಿಕ ಕಾರ್ಯಕ್ರಮ, ಸರಿಗಮಪ ಲಿಟಲ್ ಚಾಂಪ್ ಖ್ಯಾತಿಯ ಗುರುಪ್ರಸಾದ್ ಅವರಿಂದ ಸಂಗೀತ, ಅಂಗನವಾಡಿ ಕಾರ್ಯಕರ್ತೆಯರಿಂದ ಸಾಂಸ್ಕೃತಿಕ ಕಾರ್ಯಕ್ರಮ, ಮಧ್ಯಹ್ನ 2.30 ರಿಂದ ತೃತೀಯ ಲಿಂಗಿಗಳಿಂದ ಸಾಂಸ್ಕೃತಿಕ ಕಾರ್ಯಕ್ರಮ, ಒನ್ ಮಿನಿಟ್ ಗೇಮ್ಸ್, ಭರತನಾಟ್ಯ, ಸಂಜೆ 5.30ಕ್ಕೆ ಸಮಾರೋಪ, ಸ್ಥಳ: ಜೆ.ಕೆ.ಮೈದಾನ.

ನಾಡಕುಸ್ತಿ ಪಂದ್ಯಾವಳಿ

■ **ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ:** ದಸರಾ ಮಹೋತ್ಸವ ಅಂಗವಾಗಿ ನಾಡಕುಸ್ತಿ ಪಂದ್ಯಾವಳಿ, ದಸರಾ ಕಂಠೀರವ, ದಸರಾ ಕೇಸರಿ, ದಸರಾ ಕಿಶೋರ, ದಸರಾ ಕಿಶೋರಿ ಮತ್ತು ದಸರಾ ಕುಮಾರ್ ಪ್ರಶಸ್ತಿಗಾಗಿ ಪಂದ್ಯಾವಳಿ, ಸ್ಥಳ: ಡಿ.ದೇವರಾಜ ಅರಸು ವಿವಿಧೋದ್ದೇಶ ಕ್ರೀಡಾಂಗಣ, ವಸ್ತು ಪ್ರದರ್ಶನ ಆವರಣ, ದೊಡ್ಡಕೆರೆ ಮೈದಾನ, ಬೆಳಗ್ಗೆ 8 ಗಂಟೆಯಿಂದ.

ದಸರಾ ಚಲನ ಚಿತ್ರೋತ್ಸವ

■ **ಐನಾಕ್ಸ್ (ಮಾಲ್ ಆಫ್ ಮೈಸೂರ್) :** ಬೆಳಗ್ಗೆ 10 ಗಂಟೆಗೆ–ಟೋಬಿ, ಮಧ್ಯಾಹ್ನ 1 ಗಂಟೆಗೆ ಆರ್ಕೆಸ್ಟ್ರಾ ಮೈಸೂರು, ಸಂಜೆ 4 ಗಂಟೆಗೆ ಹಾಸ್ಟೆಲ್ ಹುಡುಗರು ಬೇಕಾಗಿದ್ದಾರೆ, ಸಂಜೆ 7 ಗಂಟೆಗೆ ಸಿರಿ ಲಂಬೋದರ ವಿವಾಹ

■ **ಭಾರತೀಯ ಚಿತ್ರಗಳು:** ಬೆಳಗ್ಗೆ 10.15ಕ್ಕೆ ತನುಜಾ, 1.15ಕ್ಕೆ ಸಿಗ್ನಲ್ ಮ್ಯಾನ್ 1971, ಸಂಜೆ 4.15ಕ್ಕೆ ದಿ ಗಾರ್ಡ್, ಸಂಜೆ 7.15ಕ್ಕೆ ನಾನು ಕುಸುಮ

■ **ವಿಶ್ವ ಚಿತ್ರಗಳು:** ಬೆಳಗ್ಗೆ 10.30ಕ್ಕೆ ಇಕಿರು, ಮಧ್ಯಾಹ್ನ 1.30ಕ್ಕೆ ಪಥೇರ್ ಪಾಂಚಾಲಿ, ಸಂಜೆ 4.30ಕ್ಕೆ ಪಂಡಿತ್ ರಾಜೀವ್ ತಾರಾನಾಥ್, ಹಕ್ಕಿಯ ನೆಲದ ಹಾಡು, ಸಂಜೆ 7.30ಕ್ಕೆ ರಶೊಮನ್

ಡಿಆರ್‌ಸಿ (ಬಿ.ಎಂ.ಹ್ಯಾಬಿಟೆಟ್ ಮಾಲ್)

■ **ಕನ್ನಡ ಚಿತ್ರಗಳು:** ಬೆಳಗ್ಗೆ 10 ಗಂಟೆಗೆ–ತುಂಬುರ, ಮಧ್ಯಾಹ್ನ 1 ಗಂಟೆಗೆ ಬಂಗಾರದ ಮನುಷ್ಯ, ಸಂಜೆ 4 ಗಂಟೆಗೆ ಮಾನ್ಸೂನ್ ರಾಗ, ಸಂಜೆ 7 ಗಂಟೆಗೆ ದಿ ಗಿಲ್ಡಿ

■ **ಆಹಾರ ಮೇಳ:** ಬೆಳಗ್ಗೆ 10ರಿಂದ ರಾತ್ರಿಯವರೆಗೆ, ವೈವಿಧ್ಯಮಯ ತಿಂಡಿ–ತಿನಿಸುಗಳ ಮಾರಾಟ, ಸ್ಥಳ: ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಮೈದಾನ.

■ **ವಸ್ತು ಪ್ರದರ್ಶನ:** ಮಧ್ಯಾಹ್ನ 3 ಗಂಟೆಯಿಂದ ರಾತ್ರಿಯವರೆಗೂ, ಸ್ಥಳ: ದೊಡ್ಡಕೆರೆ ಮೈದಾನ

■ **ಫಲಪುಷ್ಪ ಪ್ರದರ್ಶನ:** ಬೆಳಗ್ಗೆ 10ರಿಂದ ರಾತ್ರಿವರೆಗೂ ಸ್ಥಳ: ಕುಪ್ಪಣ್ಣ ಪಾರ್ಕ್, ನಜರ್‌ಬಾದ್.

■ **ರೈತ ದಸರಾ ಅಂಗವಾಗಿ ರಾಜ್ಯ ಮಟ್ಟದ ಹಾಲು ಕರೆಯುವ ಸ್ಪರ್ಧೆ :** ಉದ್ಘಾಟನೆ : ಜಿಲ್ಲಾ ಉಸ್ತುವಾರಿ ಸಚಿವ ಡಾ. ಹೆಚ್.ಸಿ. ಮಹದೇವಪ್ಪ, ಸ್ಥಳ: ಜೆ.ಕೆ. ಮೈದಾನ, ಬೆಳಗ್ಗೆ 6.30ಕ್ಕೆ.

■ **ಪಾರಂಪರಿಕ ನಡಿಗೆ :** ಉದ್ಘಾಟನೆ : ಕಾನೂನು ಮತ್ತು ಸಂಸದೀಯ ವ್ಯವಹಾರ ಹಾಗೂ ಪ್ರವಾಸೋದ್ಯಮ ಸಚಿವ ಹೆಚ್.ಕೆ. ಪಾಟೀಲ್, ಸ್ಥಳ: ಮೈಸೂರು ಪುರಭವನ ಆವರಣ, ಬೆಳಗ್ಗೆ 7ಕ್ಕೆ.

■ **ರಾಜ್ಯ ದಸರಾ ಸಿಎಂ ಕಪ್ ಕ್ರೀಡಾ ಕೂಟದ ಸಮಾರೋಪ ಸಮಾರೋಪ ಸಮಾರಂಭ :** ಉದ್ಘಾಟನೆ : ಮುಖ್ಯಮಂತ್ರಿ ಸಿದ್ದರಾಮಯ್ಯ, ಸ್ಥಳ: ಚಾಮುಂಡಿ ವಿಹಾರ ಕ್ರೀಡಾಂಗಣ, ಸಂಜೆ 4.30ಕ್ಕೆ

■ **ರೈತ ದಸರಾ ಅಂಗವಾಗಿ ರಾಜ್ಯ ಮಟ್ಟದ ಹಾಲು ಕರೆಯುವ ಸ್ಪರ್ಧೆಯಲ್ಲಿ ವಿಜೇತರಿಗೆ ಬಹುಮಾನ ವಿತರಣೆ :** ಉದ್ಘಾಟನೆ : ಪಶು ಸಂಗೋಪನೆ ಸಚಿವ ಕೆ. ವೆಂಕಟೇಶ್, ಸ್ಥಳ: ಜೆ.ಕೆ. ಮೈದಾನ, ಸಂಜೆ 6.30ಕ್ಕೆ.

■ **ಪ್ರಧಾನ ಕವಿಗೋಷ್ಠಿ :** ಉದ್ಘಾಟನೆ : ಕವಯತ್ರಿ ಶ್ರೀಮತಿ ಶಶಿಕಲಾ ವಸ್ತ್ರದ, ಅಧ್ಯಕ್ಷತೆ : ಕವಿ ಡಾ. ಮೂಡ್ನಾಕೂಡು ಚಿನ್ನಸ್ವಾಮಿ, ಮುಖ್ಯ ಅತಿಥಿಗಳು : ಜಿಲ್ಲಾ ಉಸ್ತುವಾರಿ ಸಚಿವ ಡಾ. ಹೆಚ್.ಸಿ. ಮಹದೇವಪ್ಪ, ಸ್ಥಳ: ಕಲಾಮಂದಿರ, ಬೆಳಗ್ಗೆ 11ಕ್ಕೆ.

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಅಕ್ಟೋಬರ್ 21 ಶನಿವಾರ 2023

ಸಂಪುಟ: 44 | ಸಂಚಿಕೆ: 186 | ಪುಟಗಳು: 12

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ/ಜಾಹೀರಾತಿಗಾಗಿ– ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.co

₹4

ನಮ್ಮ ಮೈಸೂರಿಗೂ ಮೆಟ್ರೋ

ಪ್ರಧಾನಿ ಮೋದಿ ಘೋಷಣೆ





ಬೆಂಗಳೂರು, ಅ.20– ದೇಶಾದ್ಯಂತ ರೈಲು ಸೇವೆಗಳು ತ್ವರಿತಗತಿಯಲ್ಲಿ ವಿಸ್ತಾರಗೊಳ್ಳುತ್ತಿದೆ. ಬೆಂಗಳೂರಿನ ಬಳಿಕ ಮೈಸೂರಿನಲ್ಲೂ ಮೆಟ್ರೋ ಸೇವೆ ಆರಂಭವಾಗಲಿದೆ. ಹೀಗೆ ಹಲವು ನಗರಗಳಲ್ಲಿ ಮೆಟ್ರೋ ರೈಲು ಸೇವೆ ಆರಂಭವಾಗಲಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಪ್ರಕಟಿಸಿದ್ದಾರೆ.

ಉತ್ತರ ಪ್ರದೇಶದ ಗಾಜಿಯಾಬಾದ್‌ನಲ್ಲಿ ನಡೆದ ಸಮಾರಂಭದಲ್ಲಿ ದೇಶದ ಮೊದಲ ಪ್ರಾದೇಶಿಕ ರೈಲು ಎಂದೇ ಗುರುತಿಸಲಾದ ರ್‍ಯಾಪಿಡ್ ಎಕ್ಸ್– Rapid X (ನಮೋ ಭಾರತ್) ರೈಲಿಗೆ ಚಾಲನೆ ನೀಡಿದ್ದಲ್ಲದೆ, ದೇಶದ ಹಲವು ರೈಲು ಮಾರ್ಗಗಳ ಉದ್ಘಾಟನೆಯನ್ನು ವರ್ಚ್ಯುವಲ್ ಮೂಲಕ ನೆರವೇರಿಸಿದರು. ಬೆಂಗಳೂರು ಚಲ್ಲಘಟ್ಟ–ವೈಟ್ ಫೀಲ್ಡ್ ರೈಲು ಮಾರ್ಗದ ಉದ್ಘಾಟನೆಯಿಂದ ಐಟಿ ವಲಯದಲ್ಲಿ ಕೆಲಸ ಮಾಡುತ್ತಿರುವ ಉದ್ಯೋಗಿಗಳಿಗೆ ಮತ್ತು ಜನಸಾಮಾನ್ಯರಿಗೆ ಭಾರೀ ಪ್ರಯೋಜನವಾಗಲಿದೆ. ಬೆಂಗಳೂರು ಮೆಟ್ರೋ ಇನ್ನಷ್ಟು ಯೋಜನೆಗಳು ಪ್ರಗತಿಯಲ್ಲಿವೆ ಎಂದು ಪ್ರಧಾನಿ ಮೋದಿ ವಿವರಿಸಿದರು. ದೇಶದಲ್ಲಿ ಇನ್ನಷ್ಟು ● 9ನೇ ಪುಟಕ್ಕೆ

ಯೋಗಿ ಆದಿತ್ಯನಾಥ್ ಜೊತೆ ಸಿದ್ದರಾಮಯ್ಯ ಫೋಟೋ!

ಈ ನಡುವೆ ಗಾಜಿಯಾಬಾದ್ ಕಾರ್ಯಕ್ರಮದ ವೇದಿಕೆಯ ಪೋಸ್ಟರ್‌ನಲ್ಲಿ ಯುಪಿ ಸಿಎಂ ಯೋಗಿ ಆದಿತ್ಯನಾಥ್ ಜೊತೆ ಕರ್ನಾಟಕ ಸಿಎಂ ಸಿದ್ದರಾಮಯ್ಯ ಫೋಟೋ ಕಾಣಿಸಿಕೊಂಡಿದೆ. ಪ್ರಧಾನಿ ಮೋದಿ ಜೊತೆ ಇಬ್ಬರು ಸಿಎಂಗಳ ಫೋಟೋ ಕಾಣಿಸಿಕೊಂಡಿದೆ. ಇದನ್ನು ನೋಡಿದ ಉಪ ಮುಖ್ಯಮಂತ್ರಿ ಡಿಕೆ ಶಿವಕುಮಾರ್, ನಿಮ್ಮದೂ ಫೋಟೋ ಇದೆ ಎಂದು ಸಿದ್ದರಾಮಯ್ಯ ಅವರಿಗೆ ತಿಳಿಸಿದರು. ಈ ವೇಳೆ ಮಾತನಾಡಿದ ಸಿದ್ದರಾಮಯ್ಯ ಅವರು, ಇಲ್ಲ ಅನ್ಸುತ್ತೆ ಎಂದು ವಿಡಿಯೋ ಕಾನ್ಫರೆನ್ಸ್‌ನಲ್ಲಿ ಕಣ್ಣಿಟ್ಟು ನೋಡಿದರು. ಇದೆ.. ಇದೆ.. ನಾನು ನೋಡ್ದೆ ಎಂದು ಡಿಕೆ ಶಿವಕುಮಾರ್ ಹೇಳಿದ್ದು, ನಿಮ್ ಫೋಟೋ ಹಾಕಿದ್ದಾರೆ ಸರ್ ಎಂದು ಅಧಿಕಾರಿಗಳು ಕೂಡ ಮಾಹಿತಿ ನೀಡಿದರು. ಬಳಿಕ ಹೌದಾ ಎಂದು ಸಿಎಂ ಸಿದ್ದರಾಮಯ್ಯ ಸುಮ್ಮನಾದರು.

ಫ್ಯಾಷನ್ ಬೆಡಗಿಯರ ಬಳುಕುವ ನಡಿಗೆ; ರ್‍ಯಾಪಿಡ್ ಹಾಡುಗಳ ರಿದಂಗೆ

ಹುಚ್ಚೆದ್ದು ಕುಣಿದು ಕುಪ್ಪಳಿಸಿದ ಯುವ ಪಡೆ

ಯುವ ದಸರಾದ ಸಂಗೀತ ಲೋಕದಲ್ಲಿ ಮಿಂದೆದ್ದ ಯುವ ಸಮೂಹ



ಮೈಸೂರು, ಅ.20(ಎಂಕೆ)– ಪಡ್ಡೆ ಹುಡುಗರ ಕಣ್ಮನಕ್ಕೆ ಪುಳಕ ನೀಡಿದ ಫ್ಯಾಷನ್ ಬೆಡಗಿಯರ ಬೆಕ್ಕಿನ ನಡಿಗೆಯ ನಡುವೆ ರ್‍ಯಾಪಿಡ್ ಹಾಡುಗಳ ರಿದಂಗೆ ಹುಚ್ಚೆದ್ದು ಕುಣಿದು ಕುಪ್ಪಳಿಸಿದ ಯುವ ಸಮೂಹ...!

ಮೈಸೂರು ಮಹಾರಾಜ ಕಾಲೇಜು ಮೈದಾನದಲ್ಲಿ ನಡೆಯುತ್ತಿರುವ 'ಯುವ ದಸರಾ' ನೃತ್ಯ–ಸಂಗೀತ ವೈಭವದ ವೇದಿಕೆಯಲ್ಲಿ ಬೆಳ್ಳಿ ಬೆಡಗಿಯರು ವೈಯಾರದ ನಡೆ ಮೂಲಕ ನೋಡುಗರ ಕಣ್ಣಲ್ಲಿ ಮಿಂಚು ಹರಿಸಿದರೆ, 'ಆಲ್ ಓಕೆ' ತಂಡದ ರ್‍ಯಾಪಿಡ್ ರಿದಂ ಮಿಕ್ಸಿಂಗ್ ಹಾಡುಗಳ ಝಲಕ್ ನೆರೆದಿದ್ದವರನ್ನು ನಿಂತಲ್ಲೇ ಕುಣಿದಾಡಿಸಿತು. ಪಲಾಶ್ ಬಿಡ್ಡಪ್ಪ ನೇತೃತ್ವದ ಫ್ಯಾಷನ್ ಶೋ ತಂಡ ವೆಸ್ಟರ್ನ್ ಹಾಗೂ ಪಾರಂಪರಿಕ ವಸ್ತ್ರವಿನ್ಯಾಸ ತೊಟ್ಟು ವೇದಿಕೆ ಮೇಲೆ ಕ್ಯಾಟ್ ವಾಕ್ ಮಾಡಿದ ಚೆಂದುಳ್ಳಿ ಚೆಲುವೆಯರು ಫ್ಯಾಷನ್ ಲೋಕದ ಅನಾವರಣಗೊಳಿಸಿದರು. ಹಿನ್ನೆಲೆ ಮ್ಯೂಸಿಕ್‌ಗೆ ಅನುಗುಣವಾಗಿ ● 9ನೇ ಪುಟಕ್ಕೆ

ಇಂದು 'ಯುವ ದಸರಾ' ನೃತ್ಯ–ಸಂಗೀತ ವೈಭವಕ್ಕೆ ತೆರೆ...

ಮೈಸೂರು ಮಹಾರಾಜ ಕಾಲೇಜು ಮೈದಾನದಲ್ಲಿ ಕಳೆದ ಮೂರು ದಿನಗಳಿಂದ ನಡೆಯುತ್ತಿರುವ 'ಯುವ ದಸರಾ' ನೃತ್ಯ–ಸಂಗೀತ ವೈಭವಕ್ಕೆ ನಾಳೆ(ಅ.21) ತೆರೆ ಬೀಳಲಿದೆ. ಕನ್ನಡ ಚಿತ್ರರಂಗದ ಖ್ಯಾತ ನಟ ಹ್ಯಾಟ್ರಿಕ್ ಹೀರೋ ಡಾ.ಶಿವರಾಜ್ ಕುಮಾರ್ ಅವರೊಂದಿಗೆ ತಾರ ಬಳಗದ ಮೆರಗು ಪಡೆದ 'ಯುವ ದಸರಾ' ವೇದಿಕೆ, ಯುವ ಸಮೂಹಕ್ಕೆ ರಸದೌತಣ ನೀಡುತ್ತಿದ್ದು, ಕಡೆಯ ದಿನದ ನೃತ್ಯ–ಸಂಗೀತ ವೈಭವವನ್ನು ಕಣ್ತುಂಬಿಕೊಳ್ಳುವ ಕಾತುರದಲ್ಲಿ ಯುವಸಮೂಹ.



'ಆಲ್ ಓಕೆ' ತಂಡದಿಂದ ರ್‍ಯಾಪಿಡ್ ಹಾಡುಗಳ ಗಾಯನ



ಬಾಲಿವುಡ್ ಗಾಯಕರಾದ ಸಲೀಂ ಸುಲೇಮಾನ್ ಅವರಿಂದ ಸಂಗೀತ ಸಂಜೆ

ದಸರಾ ವಿಶೇಷ ಬಸ್, ರೈಲು ಸಂಚಾರ ಆರಂಭ



■ ರಾಜ್ಯಾದ್ಯಂತ 2000 ಹೆಚ್ಚುವರಿ ಬಸ್ ವ್ಯವಸ್ಥೆ ■ ಮೈಸೂರು ವಿಭಾಗದಿಂದ 300ಕ್ಕೂ ಅಧಿಕ ಬಸ್ ವಿವಿಧ ಜಿಲ್ಲೆ, ತಾಲೂಕಿಗೆ ಸಂಪರ್ಕ ■ ಎರಡು ವಿಶೇಷ ರೈಲು ಸಂಚಾರ; ಕೆಲ ರೈಲುಗಳ ಸಮಯ ಪರಿಷ್ಕರಣೆ



ಮೈಸೂರು, ಅ.20(ಎಸ್‌ಬಿಡಿ)– ಮೈಸೂರು ದಸರಾ ಮಹೋತ್ಸವದ ಹಿನ್ನೆಲೆಯಲ್ಲಿ ವಿಶೇಷ ಸಾರಿಗೆ ಬಸ್ಸು ಹಾಗೂ ರೈಲು ಸಂಚಾರ ಕಲ್ಪಿಸಲಾಗಿದೆ.


ರಾಜ್ಯಾದ್ಯಂತ ಸುಮಾರು 2 ಸಾವಿರ ಹೆಚ್ಚುವರಿ ಬಸ್‌ಗಳ ಸಂಚಾರ ಶುಕ್ರವಾರದಿಂದ ಆರಂಭವಾಗಿದೆ. ಮೈಸೂರು ವಿಭಾಗದಿಂದ 300ಕ್ಕೂ ಹೆಚ್ಚು ಬಸ್‌ಗಳು ಜಿಲ್ಲೆಯ ಎಲ್ಲಾ ತಾಲೂಕು ಕೇಂದ್ರಗಳು, ಪ್ರೇಕ್ಷಣೀಯ ಸ್ಥಳಗಳು, ಸುತ್ತಮುತ್ತಲ ಜಿಲ್ಲೆಗಳಿಗೆ ಸಂಚಾರ ಆರಂಭಿಸಿವೆ. ಪ್ರಯಾಣಿಕರ ಬೇಡಿಕೆ ಆಧಾರದಲ್ಲಿ ಅ.30ರವರೆಗೂ ಈ ವಿಶೇಷ ಬಸ್ ಸೇವೆ ಮುಂದುವರೆಸಲಾಗುವುದು ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಬೆಂಗಳೂರಿನ ಮೈಸೂರು ರಸ್ತೆ ಬಸ್ ನಿಲ್ದಾಣದಿಂದ ಮೈಸೂರು ನಗರಕ್ಕೆ 250 ವಿಶೇಷ ಬಸ್‌ಗಳು ಸೇರಿ ಬೆಂಗಳೂರಿನ ವಿವಿಧೆಡೆಯಿಂದ ರಾಜ್ಯದ ಪ್ರಸಿದ್ಧ ಪ್ರವಾಸಿ ಹಾಗೂ ಯಾತ್ರಾ ಸ್ಥಳಗಳಿಗೆ 600ಕ್ಕೂ ಹೆಚ್ಚು ಬಸ್ ಸಂಚರಿಸುತ್ತಿವೆ. ಜೊತೆಗೆ ಬೆಂಗಳೂರಿನ ಕೆಂಪೇಗೌಡ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದಿಂದ ನೇರವಾಗಿ ಮೈಸೂರಿಗೆ ಹವಾ ನಿಯಂತ್ರಿತ, ಮಲ್ಟಿ–ಆಕ್ಸಲ್ ಬಸ್‌ಗಳನ್ನು ಓಡಿಸಲಾಗುತ್ತಿದೆ.

ವಿಶೇಷ ರೈಲು ಸಂಚಾರ: ದಸರಾ ಹಿನ್ನೆಲೆಯಲ್ಲಿ ಪ್ರಯಾಣಿಕರ ಹೆಚ್ಚುವರಿ ದಟ್ಟಣೆ ನಿರ್ವಹಣೆ ದೃಷ್ಟಿಯಿಂದ ನೈರುತ್ಯ ರೈಲ್ವೆ ವತಿಯಿಂದ ಮೈಸೂರು–ಧಾರವಾಡ ಹಾಗೂ ಮೈಸೂರು–ವಿಜಯಪುರ ನಡುವೆ ವಿಶೇಷ ರೈಲು ಸೇವೆ ಕಲ್ಪಿಸಲಾಗುತ್ತಿದೆ.

ಮೈಸೂರು–ಧಾರವಾಡ: ರೈಲು ಸಂಖ್ಯೆ 06205 ಮೈಸೂರಿನಿಂದ ● 9ನೇ ಪುಟಕ್ಕೆ

ಮಂತ್ರಿಯಾಗಲು ಗಾಡ್ ಫಾದರ್, ನಕ್ಷತ್ರ ಸರಿ ಇರಬೇಕು

ಆಡಳಿತ ಪಕ್ಷದ ಮುಖ್ಯ ಸಚೇತಕ ಅಶೋಕ್ ಪಟ್ಟಣ್ ಅಳಲು



ಬೆಂಗಳೂರು, ಅ.20(ಕೆಎಂಶಿ)– ಕಾಂಗ್ರೆಸ್ ಸರ್ಕಾರದಲ್ಲಿ ಮಂತ್ರಿಯಾಗಲು ಗಾಡ್‌ಫಾದರ್ ಹಾಗೂ ನಕ್ಷತ್ರ ಸರಿ ಇರಬೇಕು ಎಂದು ವಿಧಾನಸಭೆಯ ಆಡಳಿತ ಪಕ್ಷದ ಮುಖ್ಯ ಸಚೇತಕ ಅಶೋಕ್ ಪಟ್ಟಣ್ ಅಳಲು ತೋಡಿಕೊಂಡಿದ್ದಾರೆ.

ಎರಡೂವರೆ ವರ್ಷ ಆಡಳಿತಾವಧಿ ಮುಗಿದ ನಂತರ ತಮಗೆ ಮಂತ್ರಿ ಸ್ಥಾನ ದೊರಕಿಸಿಕೊಡುವುದಾಗಿ ಪಕ್ಷದ ವರಿಷ್ಠರು ಭರವಸೆ ನೀಡಿದ್ದಾರೆ. 30 ತಿಂಗಳ ಆಡಳಿತ ಪೂರ್ಣಗೊಂಡ ನಂತರ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಬದಲಾವಣೆ ಆಗುತ್ತದೋ ಅಥವಾ ಮಂತ್ರಿ ಮಂಡಲ ಪುನರ್ರಚನೆ ಆಗುತ್ತದೋ ನನಗೆ ತಿಳಿಯದು. ಜಾತಿ ನೋಡಬೇಡಿ. ಪಕ್ಷದ ಹಿರಿಯನಾದ ನನ್ನನ್ನು ಮಂತ್ರಿ ಮಾಡಿ ಎಂದಾಗ ಎಐಸಿಸಿ ಪ್ರಧಾನ ಕಾರ್ಯದರ್ಶಿಗಳಾದ ರಣದೀಪ್ ಸಿಂಗ್ ಸುರ್ಜೆವಾಲ, ವೇಣುಗೋಪಾಲ್, ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಹಾಗೂ ಸಿದ್ದರಾಮಯ್ಯ ಈ ಭರವಸೆ ನೀಡಿದ್ದಾರೆ. ಸಂದರ್ಭದಲ್ಲಿ ಪೂರ್ಣವಾಗಿ ಬದಲಾವಣೆ ಆಗಲಿದೆಯೇ ಎಂಬ ವಿಚಾರ ತಿಳಿದಿಲ್ಲ ಅದೃಷ್ಟ ಇದ್ದವರು ಮಂತ್ರಿಯಾಗುತ್ತಾರೆ. ದುರಾದೃಷ್ಟ ಉಳ್ಳವರು ಸುದ್ದಿಗಾರರೊಂದಿಗೆ ಮಾತನಾಡುತ್ತಾ ನಿಂತುಕೊಳ್ಳುತ್ತಾರೆ ಎಂದು ಹೇಳಿದರು. ನಮ್ಮದು ಕೂಡ ರಾಜಕೀಯ ಹಿನ್ನೆಲೆಯ ಕುಟುಂಬ. ಆದರೆ, ಸರಿಯಾದ ಗಾಡ್‌ಫಾದರ್‌ಗಳು ಇಲ್ಲ. ಇನ್ನೂ ನಕ್ಷತ್ರ ಸರಿಪಡಿಸಿಕೊಳ್ಳಲು ಪೂಜೆ ಮಾಡುತ್ತಿದ್ದೇನೆ. ಮಂತ್ರಿ ಮಾಡಲು ಹಿರಿಯರು, ಕಿರಿಯರು ಎಂಬುದನ್ನು ನೋಡಬಾರದು. ಪಕ್ಷದ ನಿಷ್ಠೆಯುಳ್ಳವರಿಗೆ ಅವಕಾಶ ನೀಡಬೇಕು. ನಾನು ಕೂಡ ಹಿರಿಯ ಶಾಸಕನಾಗಿದ್ದು, ಸಚಿವ ಸ್ಥಾನದ ಪ್ರಮುಖ ಆಕಾಂಕ್ಷಿಯಾಗಿದ್ದೇನೆ. ಮಂತ್ರಿ ಮಾಡಿದರೂ ಪಕ್ಷದಲ್ಲಿ ಇರುತ್ತೇನೆ. ಸಚಿವ ಸ್ಥಾನ ನೀಡದಿದ್ದರೂ ಪಕ್ಷದಲ್ಲೇ ಇರುವೆ ಎಂದು ಹೇಳಿದರು.

ಮೈಸೂರು ದಸರಾ ಉತ್ಸವಕ್ಕೆ ಮೆರಗು ನೀಡಿದ ವಿಂಟೇಜ್ ಕಾರ್ ರ್‍ಯಾಲಿ

ಮೈಸೂರಲ್ಲಿ ಖಾಯಂ ವಿಂಟೇಜ್ ಕಾರುಗಳ ಸಂಗ್ರಹಾಲಯ: ಸಂಸದ ಪ್ರತಾಪ್ ಸಿಂಹ





'ಮೈಸೂರು ಮಿತ್ರ' ಮತ್ತು 'ಸ್ಟಾರ್ ಆಫ್ ಮೈಸೂರ್' ಪತ್ರಿಕೆಗಳ ಸಂಸ್ಥಾಪಕ ಸಂಪಾದಕರಾದ ಡಾ.ಕೆ.ಬಿ.ಗಣಪತಿ ಅವರು ಶುಕ್ರವಾರ ದಸರಾ ವಿಂಟೇಜ್ ಕಾರುಗಳ ಪ್ರದರ್ಶನ ಮತ್ತು ರ್‍ಯಾಲಿಯನ್ನು ಉದ್ಘಾಟಿಸಿದರು. ಈ ವೇಳೆ (ಎಡದಿಂದ) ಶಾಸಕ ಟಿ.ಎಸ್. ಶ್ರೀವತ್ಸ, ಸಂಸದ ಪ್ರತಾಪ್ ಸಿಂಹ, ಸಾವಿತ್ರಿ ಶೆಣೈ, ಎಂ. ಗೋಪಿನಾಥ ಶೆಣೈ, ಎಂ.ಜಿ. ಮಾಧವ ಶೆಣೈ (ಎಡಚಿತ್ರ) ಉಪಸ್ಥಿತರಿದ್ದಾರೆ. ಫೋರ್ಡ್–1909 ಮಾಡೆಲ್ ಕಾರ್‌ನೊಂದಿಗೆ ಸಂದೀಪ್ ನಾಯಕ ಹಾಗೂ ಇನ್ನಿತರೆ ಗಣ್ಯರನ್ನು ಬಲಚಿತ್ರದಲ್ಲಿ ಕಾಣಬಹುದು.

ಮೈಸೂರು, ಅ. 20(ಆರ್‌ಕೆ)– 2023ರ ದಸರಾ ಮಹೋತ್ಸವಕ್ಕೆ ವಿಂಟೇಜ್ ಕಾರುಗಳ ಪ್ರದರ್ಶನ ಮತ್ತು ರ್‍ಯಾಲಿ ಮೆರಗು ನೀಡುವುದರೊಂದಿಗೆ ಜನರ ಗಮನ ಸೆಳೆಯಿತು.

ಮೈಸೂರಿನ ಪ್ರಮುಖ ರಸ್ತೆಗಳಲ್ಲಿ ಸಾಗಿದ ಅತೀ ಹಳೆಯ ವಿಂಟೇಜ್ ಕಾರುಗಳು ಆಟೋಮೊಬೈಲ್ ಕ್ಷೇತ್ರದಲ್ಲಿ ಆಸಕ್ತಿ ಇರುವ ಯುವಕ–ಯುವತಿಯರ ಮನಸ್ಸಿಗೆ ಮುದ ನೀಡಿದವು. ಮೈಸೂರಿನ ಎಂಜಿಎಸ್ (ಎಂ. ಗೋಪಿನಾಥ ಶೆಣೈ) ವಿಂಟೇಜ್ ಕಾರ್ ವತಿಯಿಂದ ಮೈಸೂರಿನ ಹೆಬ್ಬಾಳು ಕೈಗಾರಿಕಾ ಪ್ರದೇಶದ ಇನ್‌ಫೋಸಿಸ್ ಕ್ಯಾಂಪಸ್ ಸಮೀಪ ಇರುವ ಎಂ. ಗೋಪಿನಾಥ ಶೆಣೈ ಮಾಲೀಕತ್ವದ ಸಂಸ್ಥೆಯಿಂದ ವಿಂಟೇಜ್ ಕಾರುಗಳ ರ್‍ಯಾಲಿ ಶುಕ್ರವಾರ ಬೆಳಗ್ಗೆ ಆರಂಭವಾಯಿತು.

'ಮೈಸೂರು ಮಿತ್ರ' ಮತ್ತು 'ಸ್ಟಾರ್ ಆಫ್ ಮೈಸೂರ್' ಪತ್ರಿಕೆಗಳ ಸಂಸ್ಥಾಪಕ ಸಂಪಾದಕರಾದ ಡಾ.ಕೆ.ಬಿ.ಗಣಪತಿ ಅವರು ದಸರಾ ವಿಂಟೇಜ್ ಕಾರ್ ರ್‍ಯಾಲಿಯನ್ನು ಟೇಪು ಕತ್ತರಿಸುವ ಮೂಲಕ ರ್‍ಯಾಲಿಯನ್ನು ಉದ್ಘಾಟಿಸಿದರು. ಸಂಸದ ಪ್ರತಾಪ್ ಸಿಂಹ, ಶಾಸಕ ಟಿ.ಎಸ್.ಶ್ರೀವತ್ಸ, ಬಿಜೆಪಿ ಮುಖಂಡ ಗಿರಿಧರ್, ಎಂ.ಜಿ.ಎಸ್. ವಿಂಟೇಜ್ ಕಾರ್ ರ್‍ಯಾಲಿ ಪ್ರೇರಕ ಗೋಪಿನಾಥ ಶೆಣೈ, ಪತ್ನಿ ಸಾವಿತ್ರಿ ಶೆಣೈ, ಪುತ್ರ ಎಂ.ಜಿ.ಮಾಧವ ಶೆಣೈ ಈ ವೇಳೆ ಉಪಸ್ಥಿತರಿದ್ದರು. ರಿಂಗ್ ರಸ್ತೆ ಹಿನಕಲ್ ಜಂಕ್ಷನ್, ಹುಣಸೂರು ರಸ್ತೆ, ಕ್ರಾಫರ್ಡ್ ಹಾಲ್, ಚಾಮರಾಜ ಜೋಡಿ ರಸ್ತೆ, ನಂಜನಗೂಡು ರಸ್ತೆ, ಎಂಆರ್‌ಸಿ ರಸ್ತೆ, ಲಲಿತ ಮಹಲ್ ಪ್ಯಾಲೇಸ್ ರೋಡ್ ಹಾದು ಕುರುಬಾರಹಳ್ಳಿ ಸರ್ಕಲ್ ಬಳಿಯ ಗೋಪಿನಾಥ ಶೆಣೈ ಅವರ ಮಾಲೀಕತ್ವದ ಸ್ಥಳವನ್ನು ರ್‍ಯಾಲಿ ತಲುಪಿತು.

ಫೋರ್ಡ್ 1909, 1948 ಮಾಡೆಲ್‌ನ ಹಿಂದೂಸ್ತಾನ್–10, ಅಂಬಾಸಡರ್ ಲಿಮೌಸಿನ್, ಬ್ಯುಕ್ ರೋಡ್ ಮಾಸ್ಟರ್ 1932, ವಿಲ್ಲಿ ಜೀಪ್–1960, ಕ್ಯಾಡಿಲ್ಯಾಕ್–1930, ಡಾಡ್ಜ್ ಕಿಂಗ್ಸ್‌ವೇ–1964, ಮೋರಿಸ್ ಮೈನರ್–1955, ಡಿಸೋಟೋ–1930, ಫೋರ್ಡ್–1931, ಸ್ಟ್ಯಾಂಡರ್ಡ್ ವಾಂಗಾರ್ಡ್, ಬೆಡ್‌ಫೋರ್ಡ್ ಪಿಕ್‌ಅಪ್, ಲಕ್ಸುರಿ ಸೆಡಾನ್ (ಚೆವರ್ಲೆಟ್), ಬುಕಲ್ ವೆಕ್ಟಾ, ಆಸ್ಟಿನ್–1948, ರೋವರ್–1947, ಆರ್‌ಎಂಎನ್ ಡಿಸೋಟೋ–1931, ಮರ್ಸಿಡಿಸ್ ಬೆನ್ಜ್ ಹಿಂದೂಸ್ತಾನ್–1949, ಕಾರ್ಡ್ ಅಪ್ಪಾ ರಾಯಲ್–1950, ಕ್ಯಾಡಿಲ್ಯಾಕ್ ಮೋಟಾರ್ಸ್–1930 ಸೇರಿದಂತೆ 24 ಕಾರುಗಳು ಇಂದು ಮೈಸೂರಿನ ರಸ್ತೆಗಳಲ್ಲಿ ಸಾಗಿ ಜನರ ಗಮನ ಸೆಳೆದವು.





ಈ ಸಂದರ್ಭ ವಿಂಟೇಜ್ ಕಾರುಗಳ ಪ್ರದರ್ಶನ ಮತ್ತು ರ್‍ಯಾಲಿಗೆ ಚಾಲನೆ ನೀಡಿ ಮಾತನಾಡಿದ ಡಾ.ಕೆ.ಬಿ.ಗಣಪತಿ ಅವರು, ಸರ್ಕಾರದ ಜೊತೆಗೆ ಖಾಸಗಿ ಸಂಸ್ಥೆ–ವ್ಯಕ್ತಿಗಳೂ ವಿಶೇಷ ಕಾರ್ಯಕ್ರಮಗಳನ್ನು ಆಯೋಜಿಸಿ ವಿಶ್ವ ಪ್ರಸಿದ್ಧ ದಸರಾ ಉತ್ಸವಕ್ಕೆ ಮೆರಗು ನೀಡಿದ್ದಾರೆ ಎಂದರು.

ಕೇವಲ ದಸರಾ ಸಂದರ್ಭದಲ್ಲಿ ಮಾತ್ರ ವಿಂಟೇಜ್ ಕಾರುಗಳ ಪ್ರದರ್ಶನ ಮತ್ತು ರ್‍ಯಾಲಿ ಏರ್ಪಡಿಸುವ ಬದಲು ಲಂಡನ್ನಿನ ಮಡೇಮ್ ತುಸಾಡ್ಸ್ ವ್ಯಾಕ್ಸ್ ಮ್ಯೂಸಿಯಂನಂತೆ ಮೈಸೂರಲ್ಲಿ ಖಾಯಂ ವಿಂಟೇಜ್ ಕಾರುಗಳ ಮ್ಯೂಸಿಯಂ ಮಾಡಿ ಸದಾ ಸಾರ್ವಜನಿಕರ ವೀಕ್ಷಣೆಗೆ ಅವಕಾಶ ಕಲ್ಪಿಸುವುದು ಸೂಕ್ತ ಎಂದು ಡಾ. ಕೆಬಿಜಿ ಸಲಹೆ ನೀಡಿದರು. ಗೋಪಿನಾಥ ಶೆಣೈ ಅವರ ಹಳೇ ಕಾರುಗಳ ಮೇಲಿನ ಪ್ರೀತಿ ಮತ್ತು ಭಾವನಾತ್ಮಕ ಸಂಬಂಧ, ಅವುಗಳಲ್ಲಿನ ನಿರ್ವಹಣೆಯ ಬದ್ಧತೆಯು ಪ್ರಶಂಸನೀಯವಾದುದು ಎಂದು ನುಡಿದರು. ಸಂಸದ ಪ್ರತಾಪ್ ಸಿಂಹ ನಂತರ ಡಾ. ಕೆ.ಬಿ.ಗಣಪತಿ ಅವರ ಅಭಿಪ್ರಾಯಕ್ಕೆ ಪ್ರತಿಕ್ರಿಯಿಸಿ, ಖಾಯಂ ಮ್ಯೂಸಿಯಂ ಮಾಡುವ ಪ್ರಕ್ರಿಯೆ ಪ್ರಗತಿಯಲ್ಲಿದ್ದು, ಮೈಸೂರು ಮಹಾನಗರ ಪಾಲಿಕೆಯಲ್ಲಿ ಕಡತ ಅಂತಿಮ ಹಂತದಲ್ಲಿದೆ. ಇನ್ನೊಂದು ವಾರದೊಳಗಾಗಿ ಅಫಿಷಿಯಲ್ ಪ್ರೊಸೀಜರ್ ಕಾರ್ಯಪೂರ್ಣಗೊಳ್ಳಲಿದ್ದು, ಮುಂದಿನ ವರ್ಷದ ದಸರಾ ವೇಳೆಗೆ ಮೂರನೇ ವಿಂಟೇಜ್ ರ್‍ಯಾಲಿ ಮ್ಯೂಸಿಯಂನಲ್ಲೇ ಆರಂಭವಾಗಲಿದೆ ಎಂದರು. ದಾನ, ಧರ್ಮ, ನೆರವು, ಸಹಾಯದ ವಿಷಯದಲ್ಲಿ ಉದ್ಯಮಿ ಗೋಪಿನಾಥಶೆಣೈ ಸದಾ ಮುಂದಿರುತ್ತಾರೆ. ಉಳ್ಳವರೆಲ್ಲರಿಗೂ ● 9ನೇ ಪುಟಕ್ಕೆ

ನಕ್ಕರೆ ಅದೇ ಸ್ವರ್ಗ

ಭಾಷಣಕಾರ : "ಕ್ಷಮಿಸಿ ತುಂಬಾ ಮಾತನಾಡಿಬಿಟ್ಟೆ ಟೈಂ ನೋಡೋಕೆ ಗಡಿಯಾರ ಇರಲಿಲ್ಲ."
ಶ್ರೋತೃಗಳಲ್ಲಿ ಓರ್ವ : "ಯಾಕೆ ಹಿಂದೆ ಕ್ಯಾಲೆಂಡರ್ ಇತ್ತಲ್ಲ?!"

ಮೈಸೂರು ಮಿತ್ರ

ಶನಿವಾರ, 21 ಅಕ್ಟೋಬರ್ 2023

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತವಾಹಿನಿ..........

ಅಪವ್ಯಯವಾದ ಹಣವನ್ನು ನಾವು ಗಳಿಸಬಹುದು. ಆದರೆ ಕಳೆದು ಹೋದ ಕಾಲ ಮತ್ತೆ ಬಾರದು –ಡೇವಿಡ್‌ನಾರಿಸ್

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಲಕ್ಕಿ ಸೊಪ್ಪಾದ್ರೂ ಲೆಕ್ಕದ ಮುದ್ದೆ ಉಣಬೇಕು

ನಿಮ್ಮ ಪತ್ರಗಳು

ಸಪ್ಪೆಯಾಗಿರುವ ಮೈಸೂರು ದಸರಾ

ಮಾನ್ಯರೆ,



ಕನ್ನಡಿಗರ ಹೆಮ್ಮೆಯ ಉತ್ಸವ ದಸರಾವನ್ನು ಆಚರಿಸುವಾಗಲೂ ಸ್ವಜನ ಪಕ್ಷಪಾತ, ವಶೀಲಿ, ಭ್ರಷ್ಟಾಚಾರ ದಂತಹ ಆಪಾದನೆಗಳು ಬರುತ್ತಿರುವುದು ಕನ್ನಡಿಗರ ದೌರ್ಭಾಗ್ಯ. ಆಳುವ ಸರ್ಕಾರಗಳು ತಮ್ಮನ್ನು ಓಲೈಸುವ ಮಂದಿಯನ್ನೇ ಇಂತಹ ಸಂದರ್ಭಗಳಲ್ಲಿ ಆಶ್ರಯಿಸುವುದು ಸಾಮಾನ್ಯವಾದರೂ ಸಮಸ್ತ ಕನ್ನಡಿಗರನ್ನೂ ಪ್ರತಿನಿಧಿಸುವ ಸರ್ಕಾರ ಇಂತಹ ಆಪಾದನೆಗಳಿಗೆ ಅವಕಾಶ ನೀಡಬಾರದಿತ್ತು.

ಬೊಕ್ಕಸದ ಹಣವೆಲ್ಲವೂ ಬೇರೆ ಬೇರೆ ಆದ್ಯತೆಗಳಿಗೆ ಖರ್ಚು ಮಾಡಿ, ರಾಜ್ಯವು ಭೀಕರ ಬರವನ್ನು ಎದುರಿಸುತ್ತಿರುವ ಸಂದರ್ಭದಲ್ಲಿ ಮಿತವ್ಯಯ ಅವಶ್ಯವಾದರೂ ಸರ್ಕಾರ ಮತ್ತವರ ಬಾಲಬಡುಕರು ಸಿಕ್ಕಿದವನಿಗೆ ಸೀರುಂಡೆ ಎಂದುಕೊಂಡು ಸಿಕ್ಕ ಅವಕಾಶಗಳನ್ನು ಬಾಚಿಕೊಂಡು ತಮ್ಮ ನಿಜರೂಪ ಬಹಿರಂಗವಾಗುತ್ತಿರುವುದು ಸರ್ಕಾರದ ನಿರ್ಲಕ್ಷ, ಬೇಜವಾಬ್ದಾರಿ ಮತ್ತು ಒಂದು ರೀತಿಯ ದಾರ್ಷ್ಟ್ಯತೆಗೆ ಸಾಕ್ಷಿಯಾಗಿದೆ. ವಿವರವಾಗಿ ಹೇಳಬೇಕೆಂದರೆ, ವಿಶ್ವ ವಿಖ್ಯಾತ ಮೈಸೂರು ದಸರಾ ನಾನಾ ಕಾರಣಗಳಿಂದ ತುಂಬಾ ಸಪ್ಪೆ ಎನಿಸಿರುವುದು ದುರದೃಷ್ಟಕರ.

ಸಾಂಸ್ಕೃತಿಕ ಕಾರ್ಯಕ್ರಮದ ಉದ್ಘಾಟನೆ ಅರಮನೆ ಎದುರು ಮೊದಲ ದಿನ ಆದಾಗ ಕಾಂಗ್ರೆಸ್ ಕಾರ್ಯಕರ್ತೆ, ನಟಿ ಭಾವನಾ ರಾಮಣ್ಣ ಅವರ ನೃತ್ಯ ಪ್ರದರ್ಶನ ತೀರಾ ಸಪ್ಪೆಯಾಗಿತ್ತು. ತಮ್ಮ ಕಾರ್ಯಕರ್ತೆ ಎಂಬ ಅಭಿಮಾನದಿಂದ ಬಿಡುವಿಲ್ಲದ ಮುಖ್ಯಮಂತ್ರಿಗಳು ಒಂದು ಗಂಟೆ ಕಾರ್ಯಕ್ರಮದಲ್ಲಿದ್ದು ಕಲಾವಿದರನ್ನು ಪ್ರೋತ್ಸಾಹಿಸಿದರು.

ಅತ್ಯಂತ ವಿಜೃಂಭಣೆಯಿಂದ ದೀಪಾಲಂಕಾರ ಮಾಡಲಾಗಿದೆಯಾದರೂ ಮುಖ್ಯ ರಸ್ತೆ ಬಿಟ್ಟು ಬೇರೆ ರಸ್ತೆಗಳಲ್ಲಿ ಸಂಪೂರ್ಣ ಕಾರ್ಗತ್ತಲು ದಿನವೂ ಇರುವುದರ ಮರ್ಮ ತಿಳಿಯಲಿಲ್ಲ. ಕರೆಂಟ್ ಉಳಿಸುವ ಪರಿಯೇ (ಉದಾಹರಣೆಗೆ.. ಸರಸ್ವತಿಪುರಂ ಬೀದಿ ದೀಪ, ಕುಕ್ಕರಳ್ಳಿ ಕೆರೆಯಿಂದ ಯೂನಿವರ್ಸಿಟಿ, ಬೋಗಾದಿಗೆ ಬರುವ ಮುಖ್ಯ ರಸ್ತೆ.. ಇತ್ಯಾದಿ).

ಪಂಡಿತ್ ರಾಜೀವ್ ತಾರಾನಾಥ್ (ಅದೂ ಕಮಿಷನ್ ದುರ್ವಾಸನೆ) ಅವರಂತಹ ಒಬ್ಬ ಕಲಾವಿದರು ಬಿಟ್ಟರೆ, ಕಾಂಗ್ರೆಸ್ ಪಕ್ಷದಲ್ಲಿ ಗುರುತಿಸಿಕೊಂಡ ಸಾಧು ಕೋಕಿಲಾ, ಹಂಸಲೇಖ ಅವರ ಶಿಫಾರಸ್ಸಿನಿಂದ ಬಂದ ಕಲಾವಿದರು, ಕಳೆದ ಬಾರಿ ಅವಕಾಶ ಪಡೆದವರೇ ಮತ್ತೆ ಮತ್ತೆ ಅವಕಾಶ ಪಡೆದರು (ಯುವ ದಸರಾ ಕವಿಗೋಷ್ಠಿಯಲ್ಲಿ ವಯಸ್ಸಾದವರು) ಎಂದು ರೇಣುಕಾ ವೆಂಕಟಯ್ಯ ನವರು ಪತ್ರಿಕೆಗಳಲ್ಲೇ ಆಪಾದನೆ ಮಾಡಿದ್ದಾರೆ. ಬಿಟ್ಟಿ ಭಾಗ್ಯಗಳನ್ನು ಕೊಟ್ಟ ಹಾಗೆ ಮಾಡಿ ಬೆಲೆ ಏರಿಸಿದ ಕಾಂಗ್ರೆಸ್ ಸರ್ಕಾರ ಈ ಬಾರಿ ಕಣ್ಣೊರೆಸುವ ರೀತಿಯಲ್ಲಿ ತಮ್ಮದೇ ಹೊಗಳು ಭಟ್ಟರಿಂದ ಸುತ್ತುವರೆಸಿಕೊಂಡು ದಸರಾ ಮಾಡುತ್ತಿರುವುದು ವಿಪರ್ಯಾಸ ಹಾಗೆಯೇ ದುರದೃಷ್ಟಕರ. ತಾಯಿ ಚಾಮುಂಡೇಶ್ವರಿ ನಮ್ಮನ್ನು ಕಾಪಾಡಲಿ

–ಶಿವಮೊಗ್ಗ ನಾ. ದಿನೇಶ್ ಅಡಿಗ, ಮೈಸೂರು

ಪಾರ್ಕ್‌ನ ಬೀಗ ತೆರೆಯಿರಿ



ಮಾನ್ಯರೆ,

ಮಳವಳ್ಳಿ ಪಟ್ಟಣದ ಸಿದ್ಧಾರ್ಥ ನಗರದ 1ನೇ ಕ್ರಾಸ್‌ನ ಚೌಡೇಶ್ವರಿ ದೇವಸ್ಥಾನ ಹಾಗೂ ಅಂಬೇಡ್ಕರ್ ಭವನದ ಪಕ್ಕದಲ್ಲಿರುವ ಸಾರ್ವಜನಿಕ ಪಾರ್ಕ್‌ಗೆ ಕಳೆದ ಒಂದು ತಿಂಗಳಿಂದ ಬೀಗ ಹಾಕಿದ್ದು, ವಾಯುವಿಹಾರಿಗಳಿಗೆ ಬೆಳಿಗ್ಗೆ, ಸಂಜೆ ವಾಯು ವಿಹಾರ ಮಾಡಲು, ಜಿಮ್ ಮಾಡಲು ತೊಂದರೆಯಾಗುತ್ತಿದೆ.

ಈ ಬಗ್ಗೆ ಜನಸ್ಪಂದನ – ಏಕೀಕೃತ ಸಾರ್ವಜನಿಕ ಕುಂದುಕೊರತೆಗಳ ನಿವಾರಣಾ ವ್ಯವಸ್ಥೆಯಲ್ಲಿ ಆನ್‌ಲೈನ್ ಮೂಲಕ ಅಕ್ಟೋಬರ್ 6 ರಂದು ದೂರು ದಾಖಲಿಸಲಾಗಿದೆ. ಪ್ರಸ್ತುತ ಮಂಡ್ಯ ಜಿಲ್ಲಾಧಿಕಾರಿ ಅವರ ಹಂತದಲ್ಲಿ ದೂರು ಬಾಕಿ ಉಳಿದಿದ್ದು, ಕೂಡಲೇ ಸಮಸ್ಯೆ ಬಗೆಹರಿಸಿ ವಾಯು ವಿಹಾರಿಗಳಿಗೆ ಅನುಕೂಲ ಮಾಡಿಕೊಡಬೇಕೆಂದು ಮನವಿ.

–ಶರತ್.ಎಂ.ಆರ್, ಸಿದ್ಧಾರ್ಥನಗರ, ಮಳವಳ್ಳಿ

ಏಳನೇ ವೇತನ ಆಯೋಗದ ವರದಿ ಶೀಘ್ರ ಜಾರಿಯಾಗಲಿ!

ಮಾನ್ಯರೆ,

ಈ ಹಿಂದಿನ ಬಿಜೆಪಿ ಸರ್ಕಾರ ಸರ್ಕಾರಿ ನೌಕರರ ವೇತನ ಹಾಗೂ ಭತ್ಯೆ ಪರಿಷ್ಕರಣೆಗಾಗಿ ಏಳನೇ ವೇತನ ಆಯೋಗವನ್ನು ರಚಿಸಿತ್ತು. ಪ್ರಸ್ತುತ ಕಾಂಗ್ರೆಸ್ ಸರ್ಕಾರ ಅದರ ಕಾರ್ಯ ಅವಧಿಯನ್ನು ಮತ್ತೆ ಆರು ತಿಂಗಳು ವಿಸ್ತರಿಸಿ ಆದೇಶಿಸಿತ್ತು. ವೇತನ ಆಯೋಗವನ್ನು ರಚನೆ ಮಾಡಿ ಈಗಾಗಲೇ ಬರುವ ನವಂಬರ್ ಗೆ ಒಂದು ವರ್ಷ ಕಳೆಯುತ್ತಾ ಬಂದಿದೆ. ಹೀಗಾಗಿ ಸರ್ಕಾರ ಇನ್ನಾದರೂ ಶೀಘ್ರವಾಗಿ ವೇತನ ಆಯೋಗದ ವರದಿ ಪಡೆದು ಜಾರಿ ಮಾಡುವುದು ಅವಶ್ಯಕವಾಗಿದೆ.

ಸರಕಾರದ ಒಂದು ಪ್ರಮುಖ ಅಂಗವೇ ಆಗಿರುವ ಸರಕಾರಿ ನೌಕರರು ಬೆಳಗ್ಗೆಯಿಂದ ಸಂಜೆಯವರೆಗೆ ಸರಕಾರದ ಪ್ರತಿನಿಧಿಗಳಂತೆ ಪ್ರಜೆಗಳ ಸೇವೆ ಮಾಡುತ್ತಾರೆ. ಇಂಥ ಕರ್ತವ್ಯಕ್ಕೆ ಪ್ರತಿಯಾಗಿ ಸರಕಾರವೂ ಸಕಾಲಕ್ಕೆ ಸಂಬಳ ನೀಡುತ್ತ, ಕಾಲಾನುಕಾಲಕ್ಕೆ ಹೆಚ್ಚಿಸುತ್ತ ತನ್ನ ನೌಕರರ ಹಿತವನ್ನು ಕಾಪಾಡಿಕೊಂಡು ಬಂದಿದೆ. ಸರಕಾರಿ ಸೇವೆಯಲ್ಲೇ ಸಂತೃಪ್ತಿ ಮತ್ತು ಸಾರ್ಥಕತೆ ಪಡೆಯುವುದು ತಮ್ಮ ಧ್ಯೆಯವೆಂದು ನಂಬಿರುವ ನೌಕರರಿಗೆ ತೊಂದರೆ ಆಗದಂತೆ ನೋಡಿಕೊಳ್ಳುವುದು ಸರಕಾರದ ಕರ್ತವ್ಯವಾಗಿದೆ. ವಿವಿಧ ತೆರಿಗೆ ರೂಪದಲ್ಲಿ ಸರಕಾರಕ್ಕೆ ಪಾವತಿಯಾಗಬೇಕಿರುವ ಹಣವನ್ನು ನಾಗರಿಕರಿಂದ ಸಕಾಲಕ್ಕೆ ಸಂಗ್ರಹಿಸಿ, ಸರಕಾರದ ಮಹತ್ವಾಕಾಂಕ್ಷಿ ಯೋಜನೆಗಳ ನೆರವೇರಿಕೆಗೆ ಅದು ಬಳಕೆಯಾಗುವಂತಾಗುವ ನಿಟ್ಟಿನಲ್ಲಿ ಅವುಗಳಿಗೆ ಹೆಗಲು ಕೊಟ್ಟು ದುಡಿಯುತ್ತಿರುವ ಸರಕಾರಿ ನೌಕರರ ಬೇಡಿಕೆಗಳು ನ್ಯಾಯಯುತವೂ ಸಕಾಲಿಕವೂ ಆಗಿದೆ. ಆದಕಾರಣ, ಸರ್ಕಾರ ತಡಮಾಡದೆ 7ನೇ ವೇತನ ಆಯೋಗದಿಂದ ಶೀಘ್ರವಾಗಿ ವರದಿಯನ್ನು ಪಡೆದುಕೊಂಡು, ಅದನ್ನು ಪ್ರಾಮಾಣಿಕವಾಗಿ ಯಥಾವತ್ತಾಗಿ ಜಾರಿ ಮಾಡುವ ಪ್ರಯತ್ನವನ್ನು ಶೀಘ್ರವಾಗಿ ಮಾಡಲಿ ಎಂಬುದು ಸಮಸ್ತ ಸರ್ಕಾರಿ ನೌಕರರ ಸದಾಶಯವಾಗಿದೆ.

–ಹರಳಹಳ್ಳಿ ಪುಟ್ಟರಾಜು, ಪಾಂಡವಪುರ.



ಕಾರ್ಕಳ ಆನಂದ ಭಟ್
ಮೊ : 7676554198
ಫ್ಲಾಟ್ ನಂ.204, ಮೂರನೇ ಮಹಡಿ, ಏಕದಂತ ಅಪಾರ್ಟ್‌ಮೆಂಟ್ಸ್, Opp. H.P. ಗ್ಯಾಸ್ ಪೆರ್ವಾಜೆ ರಸ್ತೆ, ಕಾರ್ಕಳ– 574 104, ಉಡುಪಿ ಜಿಲ್ಲೆ

ದಿಕ್ಕುದೆಸೆ

ಭಾರತದ ಅಭಿವೃದ್ಧಿ, ಬಾಂಧವ್ಯ ರಹದಾರಿಗೆ ವಿಶ್ವ ಮನ್ನಣೆ!

ಇತ್ತೀಚೆಗೆ ದೆಹಲಿಯಲ್ಲಿ ಜಿ–20 ಶೃಂಗ ಸಭೆ ಯಶಸ್ವಿಯಾದ ನಂತರ ವೈಶ್ವಿಕಕ ರಾಜಕಾರಣದಲ್ಲಿ ಮಹತ್ತರ ಪರಿವರ್ತನೆಗಳಾಗುವ ಸಂಕೇತಗಳನ್ನು ನೀಡಿದೆ. ಕೆಲವು ದೇಶಗಳ ನಡುವೆ ಆಗಿರುವ ವ್ಯೂಹಾತ್ಮಕ ಮೈತ್ರಿಗಳು ಹೊಸ ಭೂ–ರಾಜಕೀಯ ಸಮೀಕರಣಗಳನ್ನು ಸೃಷ್ಟಿಸಿವೆ. ದಿಲ್ಲಿ ಶೃಂಗ ಸಭೆಯು ಒಂದು ಐತಿಹಾಸಿಕ ಒಪ್ಪಂದಕ್ಕೆ ಸಾಕ್ಷಿಯಾಯಿತು. ಭಾರತ–ಯುಎಇ–ಸೌದಿ ಅರೇಬಿಯ ಒಂದಾಗಿ ಭಾರತ–ಮಧ್ಯಪ್ರಾಚ್ಯ ಮೂಲಕ ಯುರೋಪ್ ಅನ್ನು ಸಂಪರ್ಕಿಸುವ ರೈಲು, ಸಮುದ್ರ ಮಾರ್ಗ ರೂಪಿಸುವ ಒಪ್ಪಂದ ಮಾಡಿಕೊಂಡವು. ಭಾರತ–ಮಧ್ಯಪ್ರಾಚ್ಯ–ಯುರೋಪ್ ಆರ್ಥಿಕ ಕಾರಿಡಾರ್ (IMEC) ಎಂದು ಕರೆಯಲ್ಪಡುವ ಈ ಯೋಜನೆಯು ಅಮೇರಿಕ, ಸೌದಿ ಅರೇಬಿಯಾ ಹಾಗೂ ಇನ್ನಿತರ ಪಾಲುದಾರ ದೇಶಗಳ ಮಧ್ಯೆ ಸಂಬಂಧಗಳನ್ನು ದೃಢಗೊಳಿಸಲಿದೆ. ಯೋಜನೆ ಪೂರ್ಣವಾದಾಗ ಜಾಗತಿಕ ಸಂಪರ್ಕ ಹಾಗೂ ವ್ಯಾಪಾರ–ವಾಣಿಜ್ಯದಲ್ಲಿ ಕ್ರಾಂತಿಕಾರಕ ಬದಲಾವಣೆಯಾಗಲಿದೆ. ಏಷ್ಯಾ ಉಪ ಖಂಡದಲ್ಲಿ ಭಾರತದೊಡನೆ ಶ್ರೀಲಂಕಾ, ನೇಪಾಳ, ಬಾಂಗ್ಲಾದೇಶ, ಥೈಲ್ಯಾಂಡ್, ಭೂತಾನ್‌ಗಳಿಗೂ ಮಧ್ಯಪ್ರಾಚ್ಯ, ಯುರೋಪ್ ದೇಶಗಳಲ್ಲಿ ಹೊಸ ಅವಕಾಶಗಳನ್ನು ತೆರೆಯಲಿದೆ. ಚೀನಾದ ಪುರಾತನ ಸಿಲ್ಕ್ ರೂಟ್ (Silk Route) ನೆನಪಿಸುವ ಚೀನಿ ಅಧ್ಯಕ್ಷ ಕ್ಸಿ ಚಿನ್–ಪಿಂಗ್‌ರ ಮಹತ್ವಾಕಾಂಕ್ಷಿ ಬೆಲ್ಟ್ ಅಂಡ್ ರೋಡ್ ಇನಿಷಿಯೇಟಿವ್‌ಗೆ (BRI) ಈ ಮಾರ್ಗವು ಪರ್ಯಾಯವೂ, ಪ್ರತಿಸ್ಪರ್ಧಿಯೂ ಆಗಲಿದೆ ಎನ್ನುತ್ತಾರೆ.

ಪುರಾತನ ರೇಷ್ಮೆ ಮಾರ್ಗ (Silk Route): ಈ ಪುರಾತನ ವ್ಯಾಪಾರ ಮಾರ್ಗವು ಕ್ರಿ.ಪೂ. 2ನೇ ಶತಮಾನದಿಂದ ಕ್ರಿಶ 14ನೇ ಶತಮಾನದ ವರೆಗೆ ವಿಸ್ತರಿಸಿತ್ತು. ಚೀನಾ, ಭಾರತ, ಪರ್ಷಿಯಾ, ಅರೇಬಿಯಾ, ಗ್ರೀಸ್ ಹಾಗೂ ಇಟಲಿಯನ್ನು ಈ ಮಾರ್ಗ ಸಂಪರ್ಕಿಸುತ್ತಿತ್ತು. ಮೂಲ ರೇಷ್ಮೆ ಮಾರ್ಗವನ್ನು ಹಾನ್ ರಾಜವಂಶದ ಅವಧಿಯಲ್ಲಿ ರಾಜತಾಂತ್ರಿಕ ಚಾಂಗ್ ಕ್ವಿಯಾಂಗ್ ನಿರ್ಮಿಸಿದರು. ಚೀನಾದಲ್ಲಿ ಹುಟ್ಟಿದ ಈ ಅಮೂಲ್ಯವಾದ ಫ್ಯಾಬ್ರಿಕ್‌ನಿಂದಾಗಿ ಚೀನಾ ರೇಷ್ಮೆ ಉತ್ಪಾದನೆಯ ಮೇಲೆ ಏಕಸ್ವಾಮ್ಯ ಹೊಂದಿತ್ತು. ಈ ವೇಳೆ ಭಾರೀ ಪ್ರಮಾಣದ ರೇಷ್ಮೆ ವ್ಯಾಪಾರದಿಂದ ಇದನ್ನು ರೇಷ್ಮೆ ರಸ್ತೆ (Silk Route)ಎಂದು ಕರೆಯಲಾಗುತ್ತಿತ್ತು. ರೇಷ್ಮೆ ಮಾರ್ಗವು ಪ್ರಾಚೀನ ರಸ್ತೆಗಳ ಜಾಲವಾಗಿದ್ದು, ಚೀನಾದೊಡನೆ ದೂರದ ಪೂರ್ವ ಯುರೋಪ್, ಮಧ್ಯಪ್ರಾಚ್ಯ ದೇಶಗಳನ್ನು ಸಂಪರ್ಕ ಕಲ್ಪಿಸಿತ್ತು. ಹೀಗಾಗಿ ರೇಷ್ಮೆಯೊಂದಿಗೆ ಇತರ ವಸ್ತುಗಳ ಸಾಗಾಟವು ಸುಗಮವಾಗಿ ನಡೆಯುತ್ತಿತ್ತು. ಟ್ಯಾಂಗ್ ರಾಜ ವಂಶದ ಅವಧಿಯಲ್ಲಿ ರೇಷ್ಮೆ ಮಾರ್ಗ ಜನಪ್ರಿಯವಾಗಿತ್ತು. ಕ್ರಿ.ಶ.618 ರಿಂದ 907ರವರೆಗೆ ಪ್ರಯಾಣಿಕರಿಗೆ ಗಮ್ಯ ಸ್ಥಾನ ತಲುಪಲು ಹಲವಾರು ಭೂ–ಜಲ ಮಾರ್ಗಗಳು ವಿಕಾಸಗೊಂಡವು. ರೇಷ್ಮೆ ಮಾರ್ಗವು ವ್ಯಾಪಾರ, ವ್ಯವಹಾರದೊಂದಿಗೆ ಸಂಸ್ಕೃತಿ ವಿನಿಮಯಕ್ಕೂ ಕಾರಣವಾಯಿತು.

ವಿಜ್ಞಾನ, ತಂತ್ರಜ್ಞಾನ, ಸಾಹಿತ್ಯ ಕಲೆಯೊಂದಿಗೆ ವಿವಿಧ ಮತ–ಧರ್ಮ–ಸಂಪ್ರದಾಯಗಳು ಹರಡುವಲ್ಲಿ ಪ್ರಮುಖ ಪಾತ್ರ ವಹಿಸಿತು. ಜಗತ್ತಿನ ಪೂರ್ವದಿಂದ ಪಶ್ಚಿಮಕ್ಕೆ ಸಂಪರ್ಕ ಕಲ್ಪಿಸಿದ ನಾಲ್ಕು ಸಾವಿರ ಮೈಲಿ ಉದ್ದದ ಭೂ–ಜಲ ಮಾರ್ಗವು ಸುಮಾರು 1500 ವರ್ಷಗಳ ಕಾಲ ಈ ಪ್ರದೇಶಗಳ ಜೀವನ ರೇಖೆಯಾಗಿತ್ತು. ಪೌರ್ವಾತ್ಯ ದೇಶಗಳ ಗೌರವ, ವೈಭವ ಹಾಗೂ ಸಾಮರ್ಥ್ಯದ ಪ್ರತೀಕವಾಗಿತ್ತು.

ರೇಷ್ಮೆ ಮಾರ್ಗ ಪುನರುಜ್ಜೀವನದ ಚಿನ್‌ಪಿಂಗ್ ಕನಸು: ಚೀನಾದ ಗತವೈಭವವನ್ನು ಪುನರುತ್ಥಾನಗೊಳಿಸುವ ದೃಷ್ಟಿಯಿಂದ 2013ರಲ್ಲಿ ಚೀನಾದ ಅಧ್ಯಕ್ಷ ಕ್ಸಿ ಚಿನ್‌ಪಿಂಗ್‌ರವರು ತಮ್ಮ ಮಹತ್ವಾಕಾಂಕ್ಷೆಯ 'ಒನ್ ಬೆಲ್ಟ್ ಒನ್ ರೋಡ್' ಯೋಜನೆಯನ್ನು ಘೋಷಿಸಿದ್ದರು. ಚೀನಾವು ಮತ್ತೆ ಜಗತ್ತಿನ ಕೇಂದ್ರ ಬಿಂದುವಾಗಬೇಕು. ಜಗತ್ತಿನ ದೊಡ್ಡಣ್ಣ ಎಂಬ ಅಮೇರಿಕದ ಹಿರಿಮೆ ತನ್ನ ದೇಶಕ್ಕೆ ಸಿಗಬೇಕು ಎಂಬ ಉದ್ದೇಶದಿಂದ ಚಿನ್‌ಪಿಂಗ್ ಈ ಯೋಜನೆ ಆರಂಭಿಸಿದ್ದಾರೆ. ಇದಕ್ಕೆ ಬೆಲ್ಟ್ ಆ್ಯಂಡ್ ರೋಡ್ ಇನಿಷಿಯೇಟಿವ್ (BRI) ಎಂದೂ ಕರೆಯಲಾಗುತ್ತಿದೆ. ಕಳೆದ ಹತ್ತು ವರ್ಷಗಳಲ್ಲಿ ಜಗತ್ತಿನ 155 ದೇಶಗಳು BRIನ ಸದಸ್ಯತ್ವ ಪಡೆದುಕೊಂಡಿವೆ. ಉದ್ದೇಶಿತ BRI ಯೋಜನೆಯಲ್ಲಿ ಪಶ್ಚಿಮ ಚೀನಾ ಪಶ್ಚಿಮ ರಷ್ಯಾ ಸಂಪರ್ಕಿಸುವ ಹೊಸ ಯುರೇಷಿಯನ್ ಭೂ ಸೇತುವೆ ಹೆದ್ದಾರಿ, ಪೂರ್ವ ರಷ್ಯಾ ಸಂಪರ್ಕಿಸುವ ಚೀನಾ–ಮಂಗೋಲಿಯಾ ರಷ್ಯಾ ಕಾರಿಡಾರ್ ಟರ್ಕಿಗೆ ಸಂಪರ್ಕ ಕಲ್ಪಿಸುವ ಚೀನಾ–ಮಧ್ಯ ಹಾಗೂ ಪಶ್ಚಿಮ ಏಷ್ಯಾ ಕಾರಿಡಾರ್, ಸಿಂಗಾಪುರ ಸಂಪರ್ಕಿಸುವ ಚೀನಾ–ಇಂಡೋಚೈನಾ ಪರ್ಯಾಯ ದ್ವೀಪ ಕಾರಿಡಾರ್, ಅರಬ್ಬೀ ಸಮುದ್ರ ಸಂಪರ್ಕಿಸುವ ಚೀನಾ–ಪಾಕಿಸ್ತಾನ ಕಾರಿಡಾರ್ ಹಾಗೂ ಬಾಂಗ್ಲಾದೇಶ–ಚೀನಾ–ಭಾರತ–ಮ್ಯಾನ್ಮಾರ್ ಕಾರಿಡಾರ್, ಈ ರೀತಿ ಆರು ಆರ್ಥಿಕ ಕಾರಿಡಾರ್‌ಗಳಿವೆ. BRI ಯೋಜನೆಯೂ ಈ ಆರು ಕಾರಿಡಾರ್‌ಗಳ ದ್ವಾರಾ ಏಷ್ಯಾ, ಆಫ್ರಿಕಾ ಹಾಗೂ ಯುರೋಪ್ ಖಂಡಗಳಲ್ಲಿ ಹರಡಿರುವ ಅನೇಕ ದೇಶಗಳ ನಡುವೆ ಆರ್ಥಿಕಾಭಿವೃದ್ಧಿ, ವಾಣಿಜ್ಯ, ಸಂಪರ್ಕ ಹಾಗೂ ಸಹಕಾರವನ್ನು ಸುಧಾರಿಸುವ 'ಶತಮಾನದ ಯೋಜನೆ (Project of the Century) ಎಂದು ಚೀನಿ ಅಧಿಕಾರಿಗಳು ಅಭಿಮಾನದಿಂದ ಹೇಳಿಕೆಗಳನ್ನು ನೀಡುತ್ತಿದ್ದಾರೆ. ಜಗತ್ತಿನ ಜನಸಂಖ್ಯೆಯ ಶೇ.75ರಷ್ಟು ವಿಶ್ವದ ಅರ್ಧ ಜಿ.ಡಿ.ಪಿ. ಕೇಂದ್ರೀಕೃತವಾಗಿರುವ ಪ್ರದೇಶದಲ್ಲಿ ಈ BRI ಮಾರ್ಗ ಹಾದು ಹೋಗುತ್ತಿರುವುದು ವೈಶ್ವಿಕ ಮಟ್ಟದಲ್ಲಿ ಇದರ ಪ್ರಾಮುಖ್ಯತೆಯನ್ನು ಸೂಚಿಸುತ್ತದೆ. ಈ ಯೋಜನೆಯಿಂದಾಗಿ 2040ರೊಳಗೆ ಪ್ರತಿ ವರ್ಷವೂ ಸುಮಾರು ಏಳು ಟ್ರಿಲಿಯನ್ ಡಾಲರ್ ಆದಾಯವನ್ನು ನಿರೀಕ್ಷಿಸಲಾಗಿದೆ. ಹೀಗಾಗಿ ಈ ಯೋಜನೆಯಿಂದ ಅಮೇರಿಕ, ಯುರೋಪಿಯನ್ ದೇಶಗಳು ಆತಂಕಗೊಂಡಿವೆ. ಕೇವಲ ಶ್ರೀಮಂತ ದೇಶಗಳು ಮಾತ್ರವಲ್ಲ, ಈ ಯೋಜನೆಯಲ್ಲಿ ಶಾಮೀಲಾಗಿರುವ ಮಧ್ಯಮ, ಕೆಳ ಆದಾಯದ ದೇಶಗಳು, ಬಡ ದೇಶಗಳು ಇದರಲ್ಲಿರುವ ನಾಲ್ಕು ಪ್ರಮುಖ ಬೆದರಿಕೆಗಳಿಂದ ಭಯಗೊಂಡಿವೆ. ಈ ಯೋಜನೆ ನೆಪದಲ್ಲಿ ಚೀನಾ ಬೃಹತ್ ಮೊತ್ತದ ಸಾಲ ನೀಡಿ ಸಾಲದ ಬಲೆಯಲ್ಲಿ ಕೆಡಹಿ ಆರ್ಥಿಕ ಗುಲಾಮರನ್ನಾಗಿ ಮಾಡಬಹುದು. ಎರಡನೆಯದಾಗಿ BRI ಯೋಜನೆಗಳು ಪಾರದರ್ಶಕವಾಗಿಲ್ಲ. ಈ ಯೋಜನೆಯಿಂದ ಪರಿಸರ ವ್ಯವಸ್ಥೆ ಹಾಗೂ ವನ್ಯಜೀವಿಗಳ ಆವಾಸ ಸ್ಥಾನಗಳ ಮೇಲಾಗುವ ಹಾನಿಯನ್ನು ಪರಿಹರಿಸುವ ಯಾವುದೇ ಯೋಜನೆಗಳಿಲ್ಲ. BRIನಿಂದ ಚೀನಾದ ಪಾಶವಿ ಪ್ರಭಾವ ತಮ್ಮ ದೇಶಗಳ ಮೇಲೆ ಆಗುವ ಸಾಧ್ಯತೆಯಿಂದಲೂ ದೇಶಗಳು ಚಿಂತಿತಗೊಂಡಿವೆ. ಈ ಹಿನ್ನೆಲೆಯಲ್ಲಿ BRIಗೆ ಪ್ರತಿಸ್ಪರ್ಧಿಯಾಗಿ ಪ್ರಧಾನಿ ಮೋದಿಯವರು ಜಿ–20 ಶೃಂಗ ಸಭೆಯಲ್ಲಿ ಪ್ರಸ್ತಾಪಿಸಿದ ಭಾರತ–ಮಧ್ಯಪೂರ್ವ ಇಕನಾಮಿಕ್ ಕಾರಿಡಾರ್ (IMEC) ಯೋಜನೆಯನ್ನು ಕೆಲವು ಉತ್ತಮ ವಿಷಯಗಳಿರುವುದರಿಂದ ಸ್ವಾಗತಿಸಿದ್ದಾರೆ.

ಭಾರತ–ಮಧ್ಯಪ್ರಾಚ್ಯ–ಆರ್ಥಿಕ ಕಾರಿಡಾರ್ (IMEC): ದಿಲ್ಲಿಯಲ್ಲಿ ನಡೆದ ಜಿ–20 ಸಮ್ಮೇಳನದಲ್ಲಿ ಏಷ್ಯಾ ಉಪ ಖಂಡ ಮತ್ತು ಜಾಗತಿಕ ಆರ್ಥಿಕತೆ, ಮೇಲೆ ದೂರಗಾಮಿ ಸಕಾರಾತ್ಮಕ ಪರಿಣಾಮ ಬೀರಬಲ್ಲ ಭಾರತ–ಮಧ್ಯ ಪೂರ್ವ–ಯುರೋಪ್ ಆರ್ಥಿಕ ಕಾರಿಡಾರ್ ಯೋಜನೆಗೆ ಚಾಲನೆ ನೀಡಲಾಯಿತು. ಈ ಮಹತ್ವಾಕಾಂಕ್ಷಿ ಕಾರಿಡಾರ್ ಯೋಜನೆಯಲ್ಲಿ ಭಾರತವು ಪ್ರಮುಖ ಪಾಲುದಾರ ಹಾಗೂ ಭಾರತದ ಮಾರ್ಗದರ್ಶನದಲ್ಲಿ ಈ ಯೋಜನೆ ಅನುಷ್ಠಾನಗೊಳ್ಳಲಿರುವುದು ಭಾರತೀಯರ ಸಾಮರ್ಥ್ಯಕ್ಕೆ ಸಂದ ಗೌರವವಾಗಿದೆ. ಅಮೇರಿಕದ ಉಪ ಭದ್ರತಾ ಸಲಹೆಗಾರ ಜಾನ್ ಫೈನರ್ ಈ ಯೋಜನೆಯು ಉಪ ಖಂಡಗಳ ಮಧ್ಯೆ ವ್ಯಾಪಾರ ವಾಣಿಜ್ಯ, ಇಂಧನ ಹಾಗೂ ಮಾಹಿತಿಗಳ ಸುಗಮ ಸಾಗಣೆಗೆ ಭಾರಿ ಪ್ರಮಾಣದಲ್ಲಿ ಅವಕಾಶ ಕಲ್ಪಿಸಲಿದೆ ಎಂದು ಅಭಿಪ್ರಾಯಪಟ್ಟಿದ್ದಾರೆ. ಇಸ್ರೇಲ್ ಪ್ರಧಾನಿ ಬೆಂಜಮಿನ್ ನೆತ್ಯನಾಹುರವರು ಐ.ಎಂ.ಇ.ಸಿ. ಕುರಿತು 'ಇದು ಪ್ರಾದೇಶಿಕ ಮತ್ತು ಜಾಗತಿಕ ಏಕೀಕರಣ ಹಾಗೂ ಸಹಯೋಗಕ್ಕೆ ಅತ್ಯಂತ ಅವಶ್ಯವಾದ ಸಹಕಾರ ನೀಡುವ ಯೋಜನೆಯಾಗಲಿದೆ ಎಂದು ಹೇಳಿಕೆ ನೀಡಿದ್ದಾರೆ. ಈ ಯೋಜನೆಯಿಂದ ಭಾರತ ಇಸ್ರೇಲ್ ಮಧ್ಯೆ ರಕ್ಷಣಾ ಸಹಯೋಗ ಸುಲಭವಾಗಲಿದೆ. ಐ.ಎಂ.ಇ.ಸಿ. ನಿರ್ಮಾಣವು ಭಾರತದಿಂದ ದಕ್ಷಿಣ ಯುರೋಪಿಗೆ ಯು.ಎ.ಇ., ಸೌದಿ ಅರೇಬಿಯ ಹಾಗೂ ಇಸ್ರೇಲ್ ಮೂಲಕ ಸುಗಮ ಸಾರಿಗೆ ಮಾರ್ಗವು ಜಾಗತಿಕವಾಗಿ ಭಾರತದ ಪ್ರಭಾವ ಹೆಚ್ಚಿಸಲಿದೆ. ಅದರೊಡನೆ ಇರಾನ್, ರಷ್ಯಾ ಮೂಲಕ ಸಾಗುವ ಅತ್ಯಂತ ಕಷ್ಟಕರವಾದ 'ಅಂತರರಾಷ್ಟ್ರೀಯ ಉತ್ತರ–ದಕ್ಷಿಣ ಟ್ರಾನ್ಸ್‌ಪೋರ್ಟ್ ಕಾರಿಡಾರ್‌ಗೆ ಪರ್ಯಾಯವಾಗಿದೆ. IMEC ಮಾರ್ಗದಲ್ಲಿ ಬರುವ ಬಂದರುಗಳು, ರೈಲ್ವೆ ಹಾಗೂ ರಸ್ತೆಗಳ ಪಕ್ಕದಲ್ಲಿ ವಿದ್ಯುತ್ ಕೇಬಲ್‌ಗಳನ್ನು ಅಳವಡಿಸಿ, ಆ ಮೂಲಕ ಸೌದಿ ಅರೇಬಿಯಾ ಮತ್ತು ಯು.ಎ.ಇಯಿಂದ ಭಾರತ ಮತ್ತು ಇ.ಯು. ಒಕ್ಕೂಟಕ್ಕೆ ವಿದ್ಯುತ್ ಹಾಗೂ ಪರಿಸರ ಸ್ನೇಹಿ ಹಾಗೂ ನೈಸರ್ಗಿಕವಾದ ಹಸಿರು ಜಲಜನಕವನ್ನು ರವಾನಿಸಬಹುದು.

I.M.E.C. ಯೋಜನೆಯ ಸ್ವರೂಪ: I.M.E.C.ಯು ಭಾರತ–ಪಶ್ಚಿಮ ಏಷ್ಯಾ, ಆಫ್ರಿಕಾ ಹಾಗೂ ಯುರೋಪಿಯನ್ ಅನೇಕ ದೇಶಗಳ ಮಧ್ಯೆ ನಾಲ್ಕು ಸಾವಿರ ಕಿ.ಮೀ. ಉದ್ದದ ರಸ್ತೆ, ರೈಲು ಹಾಗೂ ಜಲ ಮಾರ್ಗದಲ್ಲಿ ಅತ್ಯಾಧುನಿಕ ಮೂಲ ಸೌಕರ್ಯಗಳನ್ನು ಕಲ್ಪಿಸುವ ಗುರಿ ಹೊಂದಿದೆ. ಸುಮಾರು 20 ಬಿಲಿಯನ್ ಡಾಲರ್ ವೆಚ್ಚದಲ್ಲಿ ಈ ಯೋಜನೆ ನಿರ್ಮಾಣಗೊಳ್ಳಲಿದೆ. ಈ ಯೋಜನೆಯಲ್ಲಿ ಬರುವ ಪೂರ್ವದ ಕಾರಿಡಾರ್ ಭಾರತವನ್ನು ಗಲ್ಫ್ ದೇಶಗಳೊಂದಿಗೆ ಹಾಗೂ ಉತ್ತರ ಕಾರಿಡಾರ್ ಗಲ್ಫ್ ದೇಶಗಳನ್ನು ಯುರೋಪಿನೊಂದಿಗೆ ಜೋಡಿಸುತ್ತದೆ. I.M.E.C. ಯೋಜನೆಯು ಖಂಡಾಂತರ ಹಾಗೂ ಪ್ರಾದೇಶಿಕ ಪೂರೈಕೆ ಜಾಲಗಳಿಗೆ ವೇಗವನ್ನು ನೀಡುವುದರಿಂದ ಭಾರತ ಹಾಗೂ ಯುರೋಪಿನ ನಡುವಿನ ವ್ಯಾಪಾರದ ಪ್ರಮಾಣ ಶೇ.40ರಷ್ಟು ಏರಲಿದೆ. BRI ಕೇವಲ ರಸ್ತೆ, ರೈಲು ಮಾರ್ಗಕ್ಕೆ ಸೀಮಿತವಾದ ಯೋಜನೆಯಾದರೆ IMEC ಎಲ್ಲ ಮಾದರಿಯ ಮೂಲ ಸೌಕರ್ಯ ಕಲ್ಪಿಸುವ ಬೃಹತ್ ಯೋಜನೆಯಾಗಿದೆ. ಎಲ್ಲಕ್ಕಿಂತ ಮುಖ್ಯವಾಗಿ BRIಗೆ ಸಹಿ ಹಾಕಿರುವ ದೇಶಗಳನ್ನು ಚೀನಾ ಸಾಲದ ಬಲೆಗೆ ದೂಡಿ ಅವುಗಳ ಸಂಪನ್ಮೂಲಗಳನ್ನು ಕೊಳ್ಳೆ ಹೊಡೆಯುವ ಧೂರ್ತ ಯೋಜನೆಯೆಂದು ಈ ದೇಶಗಳಿಗೆ ಅರ್ಥವಾಗಿದೆ. ಇದಕ್ಕೆ ವಿರುದ್ಧವಾಗಿ ಭಾರತ ನಿರ್ಮಾಣದ IMEC ಸಹಕಾರ ತತ್ವದ ಮೂಲಕ ಬಡ ಹಾಗೂ ಅಭಿವೃದ್ಧಿಶೀಲ ದೇಶಗಳ ಅಭಿವೃದ್ಧಿಗೆ ಅವಕಾಶ ಕಲ್ಪಿಸಲಿದೆ. ಭಾರತ–ಸೌದಿ ಅರೇಬಿಯಾ–ಯುರೋಪಿಯನ್ ದೇಶಗಳು ವೈವಿಧ್ಯಮಯ ಸಂಸ್ಕೃತಿ, ಮತ, ಧರ್ಮ, ಇತಿಹಾಸ ಮೀರಿ ಪರಸ್ಪರ ಸಹಕರಿಸಲು ಮುಂದಾಗಿರುವುದು ಜಾಗತಿಕ ಮಟ್ಟದಲ್ಲಿ ಆರ್ಥಿಕ ಪ್ರಗತಿಯೊಂದಿಗೆ ವಿವಿಧತೆಯಲ್ಲಿ ಏಕತೆಯ ಭಾವನೆಯನ್ನು ಮೂಡಿಸುವುದರೊಂದಿಗೆ ಜಗತ್ತಿನ ಶಾಂತಿ, ಸಮೃದ್ಧಿ ನೆಮ್ಮದಿಗೆ ಮಹತ್ವದ ಕೊಡುಗೆ ನೀಡಲಿದೆ. ಭಾರತ ವೈಶ್ವಿಕ ಕೇಂದ್ರವಾಗಲಿದೆ.



ಪಂಚ ವೀಣಾ ವಾದನದಲ್ಲಿ ಹೊಮ್ಮಿದ ನಾದತರಂಗಿಣಿ


ಅರಮನೆ ವೇದಿಕೆಯಲ್ಲಿ ಗಾನ ಮಾಧುರ್ಯದೊಂದಿಗೆ ನೃತ್ಯದ ಸೊಬಗು ; ಗಾನ ಸುಧೆಯೊಂದಿಗೆ ಅರಳಿದ ಮಹನೀಯರ ಚಿತ್ರಗಳು



ಮೈಸೂರು,ಅ.20(ಪಿಎಂ)– ಗಾನ ಸುಧೆಯೊಂದಿಗೆ ಅರಳಿದ ಮಹನೀಯರ ಚಿತ್ರಗಳು... ಪಂಚ ವೀಣಾ ವಾದನದಲ್ಲಿ ಹೊಮ್ಮಿದ ನಾದತರಂಗಿಣಿ... ಮನ ಮೋಹಕ ನೃತ್ಯ ರೂಪಕ ಸೊಗಸು... ಮೈಸೂರು ಅರಮನೆ ವೇದಿಕೆಯಲ್ಲಿ ಕಂಡುಬಂದ ಕಲಾ ವೈಭವವಿದು.

ದಸರಾ ಮಹೋತ್ಸವ ಪ್ರಯುಕ್ತ ಸಾಂಸ್ಕೃತಿಕ ಉಪಸಮಿತಿ ವತಿಯಿಂದ ಇಲ್ಲಿ ಹಮ್ಮಿಕೊಂಡಿರುವ ಸಾಂಸ್ಕೃತಿಕ ಕಾರ್ಯಕ್ರಮದ ಅಂಗವಾಗಿ ಆರನೇ ದಿನವಾದ ಶುಕ್ರವಾರ ಸಂಜೆ ಇಂಥ ಕಲಾ ಲೋಕವೊಂದು ಅನಾವರಣಗೊಂಡು ಸಭಿಕರ ಮೋಡಿ ಮಾಡಿತು.

'ಕಾವ್ಯ–ಕುಂಚ–ಗಾಯನ' ಶೀರ್ಷಿಕೆಯಡಿ ಮುಡಿಗುಂಡ ಮೂರ್ತಿ ಮತ್ತು ತಂಡದಿಂದ ಮೊದಲಿಗೆ ನಡೆದ ಸಂಗೀತ–ಗಾಯನದ ಜೊತೆಗೆ ಕುಂಚವಿಡಿದು ಅರಳಿಸಿದ ಮಹನೀಯರ ಚಿತ್ರಗಳು ನೋಡುಗರಲ್ಲಿ ಮನೋಲ್ಲಾಸ ತಂದಿತು. 'ನವ ಮೈಸೂರು ನಿರ್ಮಾತೃಗಳಾಗಿ ಮಾದರಿಯಾದ ರಾಜ ಯೋಗಿಯ... ಮರೆಯೋದುಂಟೆ ಮೈಸೂರು ದೊರೆಯ... ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯ...' ಗೀತೆಯನ್ನು ವಾದ್ಯ ಸಂಗೀತದ ಹೊನಲಿನಲ್ಲಿ ಸುಶ್ರಾವ್ಯವಾಗಿ ಗಾಯಕ ರವಿಕುಮಾರ್ ಸಾದರಪಡಿಸುತ್ತಿದ್ದರೆ, ಮತ್ತೊಂದೆಡೆ ಕುಂಚದಲ್ಲಿ ಚಿತ್ರಕಲಾವಿದ ಮಧುಸೂದನ್ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ಭಾವಚಿತ್ರ ಮೂಡಿಸಿದರು.



ಅಂತೆಯೇ 'ಜ್ಞಾನ ಶೀಲ ಸ್ವಾಭಿಮಾನ ನನ್ನ ದೇವರೆಂದರು ಅಂಬೇಡ್ಕರ... ಅಂಬೇಡ್ಕರ...' ಗೀತೆ ಪೂರ್ಣಗೊಳ್ಳುವುದರೊಳಗೆ ಡಾ.ಅಂಬೇಡ್ಕರ್ ಅವರ ಭಾವಚಿತ್ರ ಅರಳಿತು. ಅದೇ ರೀತಿ 'ನಿನ್ನಂತಾಗಬೇಕು ಕನಕ... ನಿನ್ನಂತಾಗಬೇಕು...' ಗೀತೆ ಗಾಯನ ಸೂಸುತ್ತಿದ್ದರೆ, ಮತ್ತೊಂದೆಡೆ ಕನಕದಾಸರ ಚಿತ್ರಪಟವೂ ಮೂಡಿ ಬಂದಿತು. ಈ ಕಲಾಕೌಶಲ್ಯಕ್ಕೆ ಸಭಿಕರು ಬೆರಗಾಗಿ ಚಪ್ಪಾಳೆಯ ಮಳೆ ಸುರಿಸಿದರು.

ಬಳಿಕ ವಿದುಷಿ ರೇಖಾ ಸುಬ್ರಹ್ಮಣ್ಯ ನೇತೃತ್ವದಲ್ಲಿ ಸಾದರಪಡಿಸಿದ 'ಪಂಚ ವೀಣಾ ವಾದನ'ದ ನಾದ ಲೋಕ ಸಭಿಕರನ್ನು ಮಂತ್ರಮುಗ್ಧರಾಗಿಸಿತು. ಶಿವಮೊಗ್ಗದ ರೇಖಾ ಸುಬ್ರಹ್ಮಣ್ಯ ರಾಜ್ಯ ಮಟ್ಟದಲ್ಲಿ ವೀಣಾ ವಾದನ ಕಚೇರಿ ನೀಡಿದ ಮನ್ನಣೆ ಹೊಂದಿದ್ದು, ಕಳೆದ 25 ವರ್ಷಗಳಿಂದ ಇಂತಹ ಸಂಗೀತದ ಸೇವೆಯಲ್ಲಿ ತೊಡಗಿರುವ ಅವರು ತಮ್ಮ ನವೀನ ಸಂಗೀತದ ಆವಿಷ್ಕಾರಗಳ ಸಿದ್ಧಹಸ್ತರಾಗಿ ಗಮನ ಸೆಳೆದಿದ್ದಾರೆ. ಅವರಿಂದ ತಮ್ಮ ತಂಡದೊಂದಿಗೆ ನಡೆಸಿಕೊಟ್ಟ ಪಂಚ ವೀಣಾ ವಾದನವು ಸಭಿಕರನ್ನು ತಲೆದೂಗುವಂತೆ ಮಾಡಿತು.




ಬಿಂಬ ರಾಘವೇಂದ್ರ, ಭಾರತಿ ಬಾಬು, ಹಂಸವೀಣಾ ಸುರೇಶ್, ಕೀರ್ತನಾ ವೀಣೆಗಳನ್ನು ನುಡಿಸಿ ಸಂಗೀತದ ಕಂಪನ ಉಂಟು ಮಾಡಿದರು. ಜಯಚಾಮರಾಜ ಒಡೆಯರ್ ಅವರ ಕೃತಿ 'ಭೂರಿ ಭಾಗ್ಯ ಲಹರಿ'ಯ ಪ್ರತಾಪ ವರಾಳಿ ರಾಗದಲ್ಲಿ ವೀಣೆಯನ್ನು ಮೀಟಿ ನಾದ ಹೊಮ್ಮಿಸಿದರು. ಅಲ್ಲದೆ, ತ್ಯಾಗರಾಜರ 'ನಗುಮೋಮು' ಕೃತಿಯ 'ಅಬೇರಿ' ರಾಗ ಸೇರಿದಂತೆ ಇನ್ನಿತರ ರಾಗಗಳಲ್ಲಿ ವೀಣೆಯ ನಾದ ಹರಿಸಿ ಸಭಿಕರಲ್ಲಿ ಮೋಡಿ ಮಾಡಿದರು.

ವೀಣೆಯ ನಾದಕ್ಕೆ ಪಕ್ಕವಾದ್ಯದ ಸಂಗೀತವೂ ಸಮ್ಮಿಲನಗೊಂಡು ಶ್ರೋತೃಗಳಲ್ಲಿ ಸಂಗೀತದ ಸಂಚಲನ ಉಂಟು ಮಾಡಿತು. ಮೃದಂಗದಲ್ಲಿ ವಿದ್ವಾನ್ ನಾರಾಯಣ ಮೂರ್ತಿ, ಘಟಂನಲ್ಲಿ ವಿದ್ವಾನ್ ರಘುನಂದನ್, ಖಂಜೀರಾದಲ್ಲಿ ವಿದ್ವಾನ್ ಸುಬ್ರಹ್ಮಣ್ಯ, ತಬಲದಲ್ಲಿ ತುಕರಾಂ, ತಂಬೂರಿಯಲ್ಲಿ ಶಿವಶಂಕರ್ ಮತ್ತು ಧಾತ್ರಿ ಸಹಕಾರ ನೀಡಿದರು.

ನಂತರ ಪ್ರದರ್ಶನ ಕಂಡ 'ತ್ರಿವೇಣಿ (ಒಡಿಸ್ಸಿ–ಕೂಚಿಪುಡಿ–ಭರತನಾಟ್ಯಂ)' ಶೀರ್ಷಿಕೆಯ ಮೂರು ನೃತ್ಯ ಪ್ರಕಾರಗಳ ನರ್ತನವೂ ಮನಮೋಹಕ ದೃಶ್ಯಾವಳಿಯನ್ನು ಅನಾವರಣಗೊಳಿಸಿತು.

ಕೂಚಿಪುಡಿ ನೃತ್ಯವು ವಿದುಷಿ ಅರ್ಚನಾ ಪುಣ್ಯೇಶ್, ಭರತನಾಟ್ಯವು ಡಾ.ಸುಪರ್ಣಾ ವೆಂಕಟೇಶ್ ಹಾಗೂ ಒಡಿಸ್ಸಿ ನೃತ್ಯವು ಸೋಹಿನಿ ಬೋಸ್ ಬ್ಯಾನರ್ಜಿ ನೇತೃತ್ವದಲ್ಲಿ ನಡೆದವು. ಮೂರು ಶಾಸ್ತ್ರೀಯ ನೃತ್ಯ ಪ್ರಕಾರಗಳ ಈ ಸಂಗಮವು ನೋಡುಗರ ಮನಸೂರೆಗೊಂಡಿತು. ಈ ನೃತ್ಯರೂಪಕವು ನವದುರ್ಗೆಯರು ವೈಶಿಷ್ಟ್ಯ, ಪರಮೇಶ್ವರಿಯ ಮಹಿಮೆ ಮತ್ತು ದುರ್ಗೆ ದೇವಿಯ ಒಂಭತ್ತು ರೂಪಗಳನ್ನು ಅನಾವರಣಗೊಳಿಸಿತು. ಈ ನೃತ್ಯ ಸಂಗಮದ ವೈವಿಧ್ಯಮಯ ನೋಟವು ಪ್ರೇಕ್ಷಕರಲ್ಲಿ ಪುಳಕವಿಟ್ಟಿತು. ಮಂಡ್ಯದ ಡಿವಿಜಿ ಕಗ್ಗ ಬಳಗದ ಭವಾನಿ ಲೋಕೇಶ್ ಕಾರ್ಯಕ್ರಮ ನಿರೂಪಿಸಿದರು.



Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com



ವಿದ್ಯುತ್ ದೀಪಾಲಂಕಾರದಲ್ಲಿ ಕಂಗೊಳಿಸುತ್ತಿರುವ ಹೈವೇ ಸರ್ಕಲ್‌ನ ವಿಹಂಗಮ ನೋಟ.



ರಾಮಸ್ವಾಮಿ ವೃತ್ತದಲ್ಲಿ ಚಂದ್ರಯಾನ–3 ಪ್ರತಿರೂಪ ದೀಪಾಲಂಕಾರದಲ್ಲಿ ಜನರ ಆಕರ್ಷಿಸುತ್ತಿದೆ.


ಶ್ವಾನ ಪ್ರದರ್ಶನ ಸ್ಥಳ ಬದಲಾವಣೆ



ಮೈಸೂರು, ಅ. 20– ಮೈಸೂರು ದಸರಾ 2023ರ ರೈತ ದಸರಾ ಅಂಗವಾಗಿ ಅಕ್ಟೋಬರ್ 22ರ ಭಾನುವಾರ ಕುಕ್ಕರಹಳ್ಳಿಕೆರೆ ರೈಲ್ವೆ ಗೇಟ್ ಬಳಿಯ ಮೈಸೂರು ವಿಶ್ವವಿದ್ಯಾನಿಲಯದ ಹಾಕಿ ಮೈದಾನದಲ್ಲಿ ಶ್ವಾನ ಪ್ರದರ್ಶನ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು, ಈ ಬಾರಿ ಕಾರಣಾಂತರಗಳಿಂದ ಶ್ವಾನ ಪ್ರದರ್ಶನ ಕಾರ್ಯಕ್ರಮವನ್ನು ನಗರದ ಜೆ.ಕೆ ಮೈದಾನದಲ್ಲಿ ಆಯೋಜಿಸಲಾಗಿದೆ ಎಂದು ರೈತ ದಸರಾ ಉಪಸಮಿತಿ ಹಾಗೂ ಉಪ ಕಾರ್ಯದರ್ಶಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.


ಸಮಾಜಕ್ಕೆ ನಾನಾ ರೀತಿಯ ಉಪಯುಕ್ತ ಸಂದೇಶ ನೀಡುವ ಕಿರುಚಿತ್ರಗಳಿಗೆ ಬಹುಮಾನ ವಿತರಣೆ

ಈ ಬಾರಿಯ ದಸರಾದ ಯಶಸ್ವಿ ಪ್ರಯೋಗಕ್ಕೆ ಅಪಾರ ಮನ್ನಣೆ



ಕಿರುಚಿತ್ರಗಳಿಗೆ ಬಹುಮಾನ

ಪ್ರಥಮ	ಲಾಕ್
ದ್ವಿತೀಯ	ಹತ್ತು ನಿಮಿಷ
ತೃತೀಯ	ಅಮ್ಮ
ಅತ್ಯುತ್ತಮ ಸಂಕಲನ	ನೀ ಯಾರು?
ಅತ್ಯುತ್ತಮ ಛಾಯಾಗ್ರಹಣ	ಪರ್ಸ್ಪೆಕ್ಟಿವ್





ಮೈಸೂರು, ಅ.20(ಎಸ್‌ಬಿಡಿ)– ದಸರಾ ಚಲನಚಿತ್ರೋತ್ಸವದ ಕಿರುಚಿತ್ರ ಸ್ಪರ್ಧೆಯಲ್ಲಿ ಸಾಮಾಜಿಕ ಜಾಲತಾಣಗಳ ಬಳಕೆ ಬಗ್ಗೆ ಎಚ್ಚರಿಕೆ ನೀಡುವ 'ಲಾಕ್' ಪ್ರಥಮ ಬಹುಮಾನ ಪಡೆದಿದೆ.


ಹುಡುಗಿಯರ ಹೆಸರಲ್ಲಿ ಫೇಸ್ಬುಕ್, ಇನ್‌ಸ್ಟಾಗ್ರಾಮ್‌ನಲ್ಲಿ ಸಂಪರ್ಕ ಸಾಧಿಸಿ, ಬಳಿಕ ತಂತ್ರಜ್ಞಾನ ದುರ್ಬಳಕೆಯಿಂದ ಹಣ ಸುಲಿಗೆ ಮಾಡಿ, ವಂಚಿಸುವ ನೈಜ ಘಟನೆ ಆಧಾರಿತ 'ಲಾಕ್' ಚಿತ್ರವನ್ನು ಎಸ್.ಪಿ.ಪ್ರಶಾಂತ್ ನಿರ್ದೇಶಿಸಿದ್ದಾರೆ. ಈ ಚಿತ್ರವನ್ನು ಸಂಪೂರ್ಣವಾಗಿ ಮೊಬೈಲ್‌ನಲ್ಲೇ ಚಿತ್ರೀಕರಿಸಿರುವುದು ವಿಶೇಷ. ಸಾಮಾಜಿಕ ಜಾಲತಾಣಗಳಲ್ಲಿ ಯಾಮಾರಿ ಮೋಸ ಹೋಗಬೇಡಿ ಎಂಬ ಸಂದೇಶ ಸಾರುವ ಈ ಚಿತ್ರ 10 ಸಾವಿರ ರೂ. ನಗದು ಸಹಿತ ಪ್ರಥಮ ಬಹುಮಾನಕ್ಕೆ ಬಾಜನವಾಗಿದೆ.


ಕತೆ, ಚಿತ್ರಕತೆಯೊಂದಿಗೆ ಹೆಚ್.ಎಂ. ಶಿವುಮನ ನಿರ್ದೇಶಿಸಿರುವ 'ಹತ್ತು ನಿಮಿಷ' ಕಿರುಚಿತ್ರ ದ್ವಿತೀಯ ಬಹುಮಾನ ಗಳಿಸಿದೆ. ಅಪಘಾತ, ಅವಘಡ, ಹಲ್ಲೆಯಿಂದ ಗಂಭೀರವಾಗಿ ಗಾಯಗೊಂಡವರನ್ನು ತಕ್ಷಣ ಆಸ್ಪತ್ರೆಗೆ ಸಾಗಿಸದೆ ಮೊಬೈಲ್‌ನಲ್ಲಿ ಸೆರೆ ಹಿಡಿಯುವಲ್ಲಿ ಜನ ಮಗ್ನರಾಗುತ್ತಾರೆ. ಆ ವಿಡಿಯೋ ಪೊಲೀಸರ ತನಿಖೆಗೆ ಸಹಕಾರಿಯಾಗಬಹುದು. ಆದರೆ ಗಾಯಗೊಂಡವರ ಪ್ರಾಣ ಉಳಿಸುವುದು ಮುಖ್ಯ. ಅದೆಷ್ಟೋ ಜನ ಆಸ್ಪತ್ರೆಗೆ ಕರೆದೊಯ್ಯುವ ಮಾರ್ಗಮಧ್ಯೆ ಸಾವನ್ನಪ್ಪುತ್ತಾರೆ. ಆಗ ವೈದ್ಯರು ಹೇಳುವುದು '10 ನಿಮಿಷ' ಮುಂಚೆ ಬಂದಿದ್ದರೆ ಉಳಿಸಬಹುದಿತ್ತು. ಇದನ್ನೇ ಶೀರ್ಷಿಕೆಯಾಗಿಟ್ಟು ದುಷ್ಕರ್ಮಿಗಳ ಹಲ್ಲೆಯಿಂದ ನಿರಾಶ್ರಿತ ಸಾವನ್ನಪ್ಪುವ ಕಥಾಹಂದರವುಳ್ಳ ಈ ಚಿತ್ರ, 5 ಸಾವಿರ ನಗದು ಸಹಿತ ದ್ವಿತೀಯ ಬಹುಮಾನ ಪಡೆದುಕೊಂಡಿದೆ.

ಇನ್ನು ಯುವ ಸಮೂಹದಲ್ಲಿ ಮಾತೃಪ್ರೇಮದ ಮಹತ್ವವನ್ನು ಜಾಗೃತಗೊಳಿಸುವ ಕೃತಿಕಾ ಗೌಡ ನಿರ್ದೇಶನದ 'ಅಮ್ಮ' ಕಿರುಚಿತ್ರ ಮೂರನೇ ಬಹುಮಾನ(3 ಸಾವಿರ ರೂ.) ಗಳಿಸಿದೆ. ಅತ್ಯುತ್ತಮ ಸಂಕಲನಕ್ಕೆ ಎಂ.ಸುಹಾಸ್ ನಿರ್ದೇಶನದ 'ನೀ ಯಾರು' ಹಾಗೂ ಅತ್ಯುತ್ತಮ ಛಾಯಾಗ್ರಹಣಕ್ಕೆ ಜೋಯಿಲ್ ಶಮನ್ ಡಿಸೋಜಾ ನಿರ್ದೇಶನದ 'ಪರ್ಸ್ಪೆಕ್ಟಿವ್' ಕಿರುಚಿತ್ರ ತಲಾ 5 ಸಾವಿರ ಬಹುಮಾನ ಪಡೆದುಕೊಂಡಿವೆ.

ಬಹುಮಾನ ವಿತರಿಸಿದ ಪ್ರಥಮ್: ದಸರಾ ಚಲನಚಿತ್ರೋತ್ಸವ ಉಪ ಸಮಿತಿಯಿಂದ ಮಾಲ್ ಆಫ್ ಮೈಸೂರಿನ ಐನಾಕ್ಸ್ ಮಲ್ಟಿಪ್ಲೆಕ್ಸ್‌ನಲ್ಲಿ ಶುಕ್ರವಾರ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ನಟ ಪ್ರಥಮ್ ಇನ್ನಿತರ ಗಣ್ಯರೊಂದಿಗೆ ಸ್ಪರ್ಧಾ ವಿಜೇತ ಕಿರುಚಿತ್ರಗಳ ಪ್ರತಿನಿಧಿಗಳಿಗೆ ಬಹುಮಾನ ವಿತರಿಸಿದರು. ಈ ವೇಳೆ ಮಾತನಾಡಿದ ಅವರು, ಕಮರ್ಷಿಯಲ್ ಚಿತ್ರವನ್ನು ತೆಗೆಯುವುದು ಸುಲಭವಲ್ಲ. ಅದರಂತೆ ಕಿರುಚಿತ್ರಗಳನ್ನು ನಿರ್ಮಿಸುವುದೂ ಕಷ್ಟಸಾಧ್ಯ. ಪ್ರತಿಯೊಬ್ಬ ಕಲಾವಿದನ ಬದುಕು ಕೂಡ ಬೇರೆ ಬೇರೆ ರೀತಿಯ ಆಯಾಮಗಳನ್ನು ಪಡೆದುಕೊಂಡಿರುತ್ತದೆ. ತೆರೆಯ ಮೇಲೆ ಕಾಣಿಸಿಕೊಂಡಂತೆ ಕಲಾವಿದರ ಬದುಕು ಇರುವುದಿಲ್ಲ. ದಸರಾ ಸಂದರ್ಭದಲ್ಲಿ ಈ ರೀತಿಯ ಕಿರುಚಿತ್ರಗಳ ಪ್ರದರ್ಶನ ಆಯೋಜಿಸುವ ಮೂಲಕ ಕಲಾವಿದರಿಗೆ ಪ್ರೋತ್ಸಾಹ ನೀಡುತ್ತಿರುವುದು ಖುಷಿಯ ಸಂಗತಿ. ಇದರಿಂದ ನಿರ್ದೇಶಕರು, ಕಲಾವಿದರಿಗೆ ಕಮರ್ಷಿಯಲ್ ಚಿತ್ರಗಳ ನಿರ್ಮಾಣದತ್ತ ಉತ್ಸಾಹ ಹೆಚ್ಚುತ್ತದೆ. ಇನ್ನೂ ಹೆಚ್ಚೆಚ್ಚು ಚಲನಚಿತ್ರಗಳು ಕನ್ನಡ ಚಿತ್ರರಂಗದಲ್ಲಿ ಮೂಡಿಬರಲು ಪ್ರೇಕ್ಷಕರ ಪ್ರೋತ್ಸಾಹ ಬಹಳ ಮುಖ್ಯ ಎಂದರು.

ಬಳಿಕ ಉಪ ಸಮಿತಿಯ ಉಪವಿಶೇಷಾಧಿಕಾರಿ ಎಂ.ಕೆ.ಸವಿತಾ, ಕಾರ್ಯಾಧ್ಯಕ್ಷೆ ಪ್ರಿಯದರ್ಶಿನಿ, ಸಹ ಕಾರ್ಯದರ್ಶಿ ಟಿ.ಕೆ.ಹರೀಶ್ ಮಾತನಾಡಿದರು. ಚಲನಚಿತ್ರೋತ್ಸವದ ಕಾರ್ಯಕಾರಿಣಿ ಅಧ್ಯಕ್ಷ ರಮೇಶ್, ಉಪಾಧ್ಯಕ್ಷ ಕುಮಾರ್ ಹಾಗೂ ಸದಸ್ಯರು ಉಪಸ್ಥಿತರಿದ್ದರು.







ದಸರಾ ಚಲನಚಿತ್ರೋತ್ಸವದ ಕಿರುಚಿತ್ರ ಸ್ಪರ್ಧೆಯಲ್ಲಿ ಪ್ರಶಸ್ತಿ ವಿಜೇತ ಕಿರುಚಿತ್ರಗಳ ನಿರ್ದೇಶಕರಿಗೆ ಐನಾಕ್ಸ್ ಮಲ್ಟಿಪ್ಲೆಕ್ಸ್‌ನಲ್ಲಿ ಬಹುಮಾನ ನೀಡಿ, ಅಭಿನಂದಿಸಲಾಯಿತು. ನಟ ಪ್ರಥಮ್, ಚಲನಚಿತ್ರ ಉಪ ಸಮಿತಿಯ ಉಪವಿಶೇಷಾಧಿಕಾರಿ ಎಂ.ಕೆ.ಸವಿತಾ, ಕಾರ್ಯಾಧ್ಯಕ್ಷೆ ಪ್ರಿಯದರ್ಶಿನಿ, ಸಹ ಕಾರ್ಯದರ್ಶಿ ಟಿ.ಕೆ.ಹರೀಶ್, ಕಾರ್ಯಕಾರಿಣಿ ಅಧ್ಯಕ್ಷ ರಮೇಶ್, ಉಪಾಧ್ಯಕ್ಷ ಕುಮಾರ್ ಇದ್ದರು.

ದಸರಾ ವಸ್ತು ಪ್ರದರ್ಶನದಲ್ಲಿ ಕೈಮಗ್ಗ ನೇಕಾರಿಕೆ ನೈಪುಣ್ಯತೆ ಪ್ರದರ್ಶನ

ಮೈಸೂರು, ಅ.20(ಜಿಎ)–ದಸರಾ ವಸ್ತುಪ್ರದರ್ಶನದಲ್ಲಿ ಸುಧೀರ್ಘ 36 ಗಂಟೆಗಳ ನಿರಂತರ ಕೈಮಗ್ಗ ನೇಯುವ ಕೌಶಲ್ಯಕರವಾದ ನೈಪುಣ್ಯತೆಂಯು ಸವಾಲಿನ ಕಾರ್ಯವೂ ದಸರಾದ ಮತ್ತೊಂದು ಆಕರ್ಷಣೆಯಾಗಲಿದೆ.

ಕರ್ನಾಟಕ ಸರ್ಕಾರ ಕೈಮಗ್ಗ ಮತ್ತು ಜವಳಿ ಇಲಾಖೆ, ಕಾವೇರಿ ಹ್ಯಾಂಡ್ ಲೂಮ್ಸ್ ಬೆಂಗಳೂರು ಇವರ ವತಿಯಿಂದ ಕೈಮುಗ್ಗ ಹಾಗೂ ಕೈಮಗ್ಗದ ಉತ್ಪನ್ನಗಳನ್ನು ಪ್ರದರ್ಶನ ಮತ್ತು ಮಾರಾಟ ಮಾಡಲು ನೇಕಾರರಿಗೆ, ನೇಕಾರ ಸಹಕಾರ ಸಂಘಗಳಿಗೆ ಮೈಸೂರು ದಸರಾ ವಸ್ತು ಪ್ರದರ್ಶನದಲ್ಲಿ ಅವಕಾಶ ನೀಡಲಾಗಿದ್ದು, ಈ ನಾಡಹಬ್ಬ ದಸರಾದ ವಿಶೇಷವಾಗಿ ಬೆಂಗಳೂರಿನ ಅನುಭವಿ ನೇಕಾರರಾದ ನಾಗರಾಜು ತಮ್ಮ ನೇಕಾರಿಕೆ ನೈಪುಣ್ಯತೆಯ ಪ್ರದರ್ಶನಕ್ಕಾಗಿ 36 ಗಂಟೆಗಳ ಕಾಲ ನಿರಂತರವಾಗಿ ಕೈಮಗ್ಗದಲ್ಲಿ ಸೀರೆ ನೇಯುವುದು ಎಂಬ ಒಂದು ವಿಶೇಷ ಸವಾಲಿಗೆ ಸಿದ್ಧರಾಗುತ್ತಿದ್ದು, ಅದರಂತೆ ಅ.23ರ ಆಯುಧ ಪೂಜೆಯ ಹಬ್ಬದ ದಿನ ಬೆಳಗ್ಗೆ 6 ಗಂಟೆಯಿಂದ ಅ.24 ರ ಸಂಜೆ 6 ಗಂಟೆಯವರೆಗೆ ಸರಿ ಸುಮಾರು 36 ಗಂಟೆಗಳ ನಿರಂತರ ಸೀರೆ ತಯಾರಿಕೆಯಲ್ಲಿ ತಮ್ಮನ್ನು ತೊಡಗಿಸಿಕೊಳ್ಳಲಿದ್ದಾರೆ.



ಅದರಲ್ಲಿಯೂ ನೇಕಾರಿಕೆಯ ನೈಪ್ರಣ್ಯತೆಯಲ್ಲಿ ಮೈಸೂರು ಸಂಸ್ಥಾನದ ಗಂಡುಭೇರುಂಡ ಲಾಂಛನವನ್ನು ತಿರುವುಬುಟ್ಟಿ ಕೌಶಲ್ಯವನ್ನು ಬಳಸಿ ಕೈಮಗ್ಗವನ್ನು ಮತ್ತಷ್ಟು ಉತ್ತುಂಗಕ್ಕೇರಿಸಲಿದ್ದಾರೆ. ಈ ನೇಕಾರನಿಗೆ ತಂತ್ರಜ್ಞಾನದ ಸದ್ಬಳಕೆಯ ಮಾರ್ಗದರ್ಶನವನ್ನು ಎಲೆಕ್ಟ್ರಾನಿಕ್ ಜಕಾರ್ಡ್ (electronic jacquard) ಸಂಶೋಧಕರಾದ ಡಾ. ಎಚ್.ಟಿ.ಪಾಂಡುರಂಗ ಉಪನ್ಯಾಸಕರು ಸರ್ಕಾರಿ ಪಾಲಿಟೆಕ್ನಿಕ್ ಬೇಲೂರು ಇವರು ನೀಡುತ್ತಿದ್ದಾರೆ. ಇವರ ಮಾರ್ಗದರ್ಶನದ ಒಂದು ತಂಡ ಕೈಮಗ್ಗ ಮತ್ತು ಎಲೆಕ್ಟ್ರಾನಿಕ್ ಜಕಾರ್ಡ್ ಸರಳವಾಗಿ ಸ್ಥಳಾಂತರಿಸಬಲ್ಲ ಹಾಗೂ ಬಹುಮಹಡಿ ಕಟ್ಟಡಗಳಲ್ಲೂ ಅಳವಡಿಸಿಕೊಳ್ಳಬಲ್ಲ ತಂತ್ರಜ್ಞಾನವನ್ನು ಸಿದ್ಧಪಡಿಸಿದ್ದಾರೆ. ಇವರ ತಂತ್ರಜ್ಞಾನವು ಯುವಕರನ್ನು ನೇಕಾರಿಕೆಗೆ ಮರಳಿ ಆಕರ್ಷಿಸುವುದಕ್ಕಾಗಿ ಈಗಿನ ಕಾಲಘಟ್ಟಕ್ಕೆ ತಕ್ಕಂತೆ mobile app, Google drive, IOT ತಂತ್ರಜ್ಞಾನವನ್ನು ಬಳಸಿಕೊಳ್ಳಲಾಗಿದೆ. ಈ ತಂತ್ರಜ್ಞಾನ ಸಿದ್ಧಪಡಿಸಲು ಸಿಜ್ಲಿಂಗ್ ಟೆಕ್ ಬೆಂಗಳೂರು, ಸಾಯಿ ಎಲೆಕ್ಟ್ರಾನಿಕ್ ಜಕಾರ್ಡ್ ಹಿಂದೂಪುರ, ಮತ್ತು ನೇಕಾರ ಮಿತ್ರ ಹ್ಯಾಪ್ ಹಿಂದುಪುರ ಇವರು ಕೈಜೋಡಿಸಿದ್ದಾರೆ. ಈ ತಂಡದ ಪರಿಶ್ರಮವನ್ನು ಗುರುತಿಸಿ ಕರ್ನಾಟಕ ಸರ್ಕಾರದ ಜವಳಿ ಇಲಾಖೆಯು ಈ ನೇಕಾರನ ಕೌಶಲ್ಯದ ಸವಾಲನ್ನು ಹಾಗೂ ತಂತ್ರಜ್ಞಾನದ ಉಪಯೋಗಗಳನ್ನು ನೇಕಾರ ಬಂಧುಗಳಿಗೆ ತಿಳಿಸಲು ಮೈಸೂರು ದಸರಾ ವಸ್ತು ಪ್ರದರ್ಶನದಲ್ಲಿ ಪ್ರದರ್ಶಿಸಲಾಗುತ್ತಿದೆ.



ಮೈಸೂರು ವಿಶ್ವವಿದ್ಯಾನಿಲಂಯದ ಗೌರವ ಡಾಕ್ಟರೇಟ್ ಪುರಸ್ಕೃತ 'ಮೈಸೂರು ಮಿತ್ರ' ಹಾಗೂ 'ಸ್ಟಾರ್ ಆಫ್ ಮೈಸೂರ್' ಸಂಸ್ಥಾಪಕ ಸಂಪಾದಕರಾದ ಕೆ.ಬಿ. ಗಣಪತಿ ಅವರನ್ನು ಶಾಸಕ ಟಿ.ಎಸ್. ಶ್ರೀವತ್ಸ, ಬಿಜೆಪಿ ಮುಖಂಡರಾದ ಮೋಹನ್, ಸೋಮಸುಂದರ್, ವಾಣೀಶ್‌ಕುಮಾರ್, ಗಿರಿಧರ್ ಶುಕ್ರವಾರದಂದು ಆತ್ಮೀಯವಾಗಿ ಅಭಿನಂದಿಸಿದರು.



ಮರದ ಅಂಬಾರಿಯನ್ನು ಸುರಕ್ಷಿತವಾಗಿ ಕ್ರೇನ್ ಮೂಲಕ ಆನೆ ಮೇಲೆ ಇಡಲು ಪ್ರಾಯೋಗಿಕ ಪರೀಕ್ಷೆ ಮಾಡಲಾಗಿದ್ದು, ಹೆಚ್ಚು ಭಾರ ಎತ್ತುವ ಸಾಮರ್ಥ್ಯವುಳ್ಳ ಬೆಲ್ಟ್ ಬಳಸಿ ಪ್ರಾಯೋಗಿಕವಾಗಿ ಪರಿಶೀಲನೆ ಮಾಡಲಾಯಿತು. ಈ ವೇಳೆ ಡಿಸಿಎಫ್ ಸೌರಭ್ ಕುಮಾರ್, ಆರ್‌ಎಫ್‌ಓ ಸಂತೋಷ್ ಹೂಗಾರ್ ಹಾಗೂ ಮತ್ತಿತರರು ಉಪಸ್ಥಿತರಿದ್ದರು.

ಇಂದು ಯುವತಿಯರು, ಮಹಿಳೆಯರು, ಮಕ್ಕಳಿಗೆ ದಸರಾ ವೇಷಭೂಷಣ ಸ್ಪರ್ಧೆ

ಮೈಸೂರು, ಅ. 20–ಶ್ರೀ ದುರ್ಗಾ ಫೌಂಡೇಷನ್ ಹಾಗೂ ಮೇಕ್ ಸೊಸೈಟಿ ಸ್ಮೈಲ್ ಫೌಂಡೇಷನ್ ಆಶ್ರಯದಲ್ಲಿ ಅ. 21ರ ಶನಿವಾರ ಬೆಳಗ್ಗೆ 10.30ಕ್ಕೆ ವಿಶ್ವೇಶ್ವರ ನಗರದಲ್ಲಿರುವ ಮಹರ್ಷಿ ಪಬ್ಲಿಕ್ ಶಾಲೆಯ ಆವರಣದಲ್ಲಿ ದಸರಾ ಅಂಗವಾಗಿ ಯುವತಿಯರು, ಮಹಿಳೆಯರು ಮತ್ತು ಮಕ್ಕಳಿಗೆ ದಸರಾ ವೇಷಭೂಷಣ ಸ್ಪರ್ಧೆ ಆಯೋಜಿಸಲಾಗಿದೆ. ಮುಖ್ಯ ಅತಿಥಿಗಳಾಗಿ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯದ ಅರ್ಥಶಾಸ್ತ್ರ ವಿಭಾಗದ ಪ್ರಾಧ್ಯಾಪಕರಾದ ಡಾ.ಆರ್.ಎಚ್. ಪವಿತ್ರ, ಮೈಸೂರು ನಗರ ಬಿಜೆಪಿ ಮಹಿಳಾ ಮೋರ್ಚಾ ಅಧ್ಯಕ್ಷೆ ಹೇಮಾ ನಂದೀಶ್, ಸೆಂಟ್ ಮೈಕಲ್ ಪದವಿ ಪೂರ್ವ ಕಾಲೇಜಿನ ವ್ಯವಸ್ಥಾಪಕ ನಿರ್ದೇಶಕರಾದ ಡಾ.ಸಾಜೀಯಾ ಸುಲ್ತಾನ್ ಎನ್.ಎಸ್., ಮಹರ್ಷಿ ಪಬ್ಲಿಕ್ ಶಾಲೆಯ ಭವಾನಿ ಶಂಕರ್, ಚಾಮುಂಡಿಬೆಟ್ಟದ ಶ್ರೀ ಮಹಾಬಲಾದ್ರಿ ವಿವಿಧೋದ್ದೇಶ ಸಹಕಾರ ಸಂಘದ ನಿರ್ದೇಶಕರಾದ ಮಂಜುಳಾ ಸೋಮ್ಮಣ್ಣ, ಜೀವಧಾರ ರಕ್ತನಿಧಿ ಕೇಂದ್ರದ ನಿರ್ದೇಶಕರಾದ ಗಿರೀಶ್ ಹಾಗೂ ಮುತ್ತಣ್ಣ, ಎನ್‌ಐಇ ಕಾಲೇಜು ಪ್ರೊಫೇಸರ್ ಹಾಗೂ ಸಮಷ್ಟಂ ಫೌಂಡೇಷನ್ ಅಧ್ಯಕ್ಷೆ ಡಾ.ವನಮಾಲ ಸಿ.ಕೆ, ರೂಪದರ್ಶಿ ಶೋಭ ರಾಣಿ, ನಗರ ಪಾಲಿಕಾ ಸದಸ್ಯೆ ಪ್ರಮೀಳಾ ಭರತ್, ಶ್ರೀ ದುರ್ಗಾ ಫೌಂಡೇಷನ್ ಅಧ್ಯಕ್ಷೆ ರೇಖಾ ಶ್ರೀನಿವಾಸ್, ಮೇಕ್ ಸೊಸೈಟಿ ಸ್ಮೈಲ್ ಫೌಂಡೇಷನ್ ಅಧ್ಯಕ್ಷೆ ರಂಜಿತಾ ಸುಬ್ರಹ್ಮಣ್ಯ, ಶಿವಮೊಗ್ಗ, ಬ್ಯೂಟಿಷಿಯನ್ ಅಸೋಸಿಯೇಷನ್ ಅಧ್ಯಕ್ಷೆ ಅಶ್ವಿನಿ ಪಿ. ಗೌಡ ಹಾಗೂ ಇನ್ನಿತರರು ಆಗಮಿಸಲಿದ್ದಾರೆ.



ಜಂಬೂಸವಾರಿ ಸಾಗುವ ರಾಜಮಾರ್ಗದಲ್ಲಿ ಜನರ ನಿಯಂತ್ರಣಕ್ಕೆ ತಾತ್ಕಾಲಿಕ ಮರದ ಬ್ಯಾರಿಕೇಡ್ ಅಳವಡಿಸಿರುವುದು.





ಅರಮನೆ ಮುಂಭಾಗ ಮತ್ತು ಸಯ್ಯಾಜಿರಾವ್ ರಸ್ತೆಯಲ್ಲಿ ವ್ಯಾಪಾರಿಗಳ ಭರಾಟೆ ಹಾಗೂ ಮೈಸೂರಿನ ಎಲ್ಲಾ ಪ್ರಮುಖ ರಸ್ತೆಯಲ್ಲಿ ವ್ಯಾಪಾರ ಜೋರು



ಅರಮನೆ ಮುಂಭಾಗ ಪಾದಚಾರಿ ರಸ್ತೆಯೇ ತಂಗುದಾಣವಾಗಿದೆ.

ಮೈಸೂರು ಮಿತ್ರ

ಜಲ ವಿವಾದಗಳ ಸಂಘರ್ಷ ಪರಿಹಾರಕ್ಕೆ

ಕೇಂದ್ರ ಸರ್ಕಾರ ರಾಷ್ಟ್ರೀಯ ಜಲ ನೀತಿ ಜಾರಿಗೊಳಿಸಲಿ

ಕಾವೇರಿ ಹೋರಾಟದಲ್ಲಿ ಬಸವ ಜಯಮೃತ್ಯುಂಜಯ ಸ್ವಾಮೀಜಿ ಆಗ್ರಹ



ಮಂಡ್ಯ, ಅ.20– ಜಲ ವಿವಾದಗಳ ಸಂಘರ್ಷ ಪರಿಹಾರಕ್ಕೆ ಕೇಂದ್ರ ಸರ್ಕಾರ ರಾಷ್ಟ್ರೀಯ ಜಲ ನೀತಿ ಜಾರಿಗೊಳಿಸುವ ಮೂಲಕ ಕಾವೇರಿ ಸಂಕಷ್ಟ ಸೂತ್ರ ರೂಪಿಸಬೇಕು ಎಂದು ಕೂಡಲ ಸಂಗಮ ಪಂಚಮಸಾಲಿ ಪೀಠದ ಪೀಠಾಧ್ಯಕ್ಷ ಬಸವ ಜಯ ಮೃತ್ಯುಂಜಯ ಸ್ವಾಮೀಜಿ ಆಗ್ರಹಿಸಿದರು.

ನಗರದ ಸರ್‌ಎಂವಿ ಪ್ರತಿಮೆ ಬಳಿ ಜಿಲ್ಲಾ ರೈತ ಹಿತರಕ್ಷಣಾ ಸಮಿತಿ ನಡೆಸುತ್ತಿರುವ ಧರಣಿಯಲ್ಲಿ ಮಾತನಾಡಿದ ಅವರು, ಪ್ರಧಾನಿ ನರೇಂದ್ರ ಮೋದಿ ಮಧ್ಯಪ್ರವೇಶಿಸಿ ಜಲ ಸಂಘರ್ಷ ಪರಿಹಾರಕ್ಕೆ ಮುಂದಾಗಬೇಕು. ಕಾವೇರಿ ಸಂಕಷ್ಟ ಸನ್ನಿವೇಶದಲ್ಲಿ ಪಾಲಿಸಬೇಕಾದ ಸಂಕಷ್ಟ ಸೂತ್ರ ರಚಿಸಬೇಕು. ಆ ನಿಟ್ಟಿನಲ್ಲಿ ದೇಶದ ಜಲವಿವಾದಗಳಿಗೆ ಪರಿಹಾರ ರೂಪಿಸಲು ರಾಷ್ಟ್ರೀಯ ಜಲ ನೀತಿ ರೂಪಿಸಬೇಕು ಎಂದು ಒತ್ತಾಯಿಸಿದರು.

ಕಾವೇರಿ ವಿಚಾರದಲ್ಲಿ ಇದುವರೆಗೆ ಯಾವುದೇ ಸ್ಪಷ್ಟ ನಿಲುವು ತಾಳಲು ರಾಜ್ಯ ಸರ್ಕಾರ ವಿಫಲವಾಗಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಮೌನ ವಹಿಸಿ ಕಾವೇರಿ ವಿಚಾರವನ್ನು ನಿರ್ಲಕ್ಷಿಸಿದ್ದಾರೆ. ನ.1 ರೊಳಗೆ ವಿಧಾನ ಮಂಡಲದ ಜಂಟಿ ಅಧಿವೇಶನ ಕರೆದು ನೀರು ಬಿಡುವುದಿಲ್ಲ ಎಂಬ ಒಂದು ಸಾಲಿನ ನಿರ್ಣಯ ಕೈಗೊಂಡು ಸುಗ್ರೀವಾಜ್ಞೆ ಹೊರಡಿಸಬೇಕು. ಬಿಕ್ಕಟ್ಟು ಸೃಷ್ಟಿಯಾದರೆ ಅದೇ ಕಾನೂನಾಗಿ ಪರಿವರ್ತನೆಗೊಳ್ಳಲಿದೆ. ಹಾಗಾಗಿ ದೃಢ ಹೆಜ್ಜೆ ಇಡಬೇಕೆಂದು ತಿಳಿಸಿದರು.

ದಕ್ಷಿಣದ ಕಾವೇರಿ, ಉತ್ತರದ ಕೃಷ್ಣ ನದಿಗಳು ಕನ್ನಡಿಗರಿಗೆ 2 ಕಣ್ಣು ಇದ್ದಂತೆ. ಬೆಂಗಳೂರಿನ ಜನತೆಗೆ ನೀರುಣಿಸುವ ಕಾವೇರಿಯ ಋಣ ಮುಖ್ಯಮಂತ್ರಿ ಸೇರಿ ಚುನಾಯಿತ ಜನಪ್ರತಿನಿಧಿಗಳಿಂದ ಹಿಡಿದು ಸಾಮಾನ್ಯ ಜನರ ಮೇಲಿದೆ. ಇದನ್ನು ಆಳುವವರು ಅರಿಯಬೇಕಿತ್ತು. ಕಾವೇರಿ ಮಾತೆಗೆ ಅನ್ಯಾಯ ಆದರೆ ಕರುನಾಡಿಗೆ ಅನ್ಯಾಯ ಆದಂತೆ. ಇಂತಹ ವಿಚಾರದಲ್ಲಿ ಮುನ್ನೆಚ್ಚರಿಕೆ ವಹಿಸಬೇಕಾದದ್ದು ಸರ್ಕಾರದ ಜವಾಬ್ದಾರಿ. ಆದರೆ ಬರಗಾಲದ ಪರಿಸ್ಥಿತಿಯಲ್ಲಿ ಕದ್ದು ಮುಚ್ಚಿ ತಮಿಳುನಾಡಿಗೆ ನೀರು ಹರಿಸುತ್ತಿರುವುದು ನಾಡಿನ ಜನತೆಗೆ ಮಾಡಿದ ದ್ರೋಹ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಕಾವೇರಿ ವಿಚಾರದಲ್ಲಿ ರಾಜಕೀಯ ಮೇಲಾಟದಿಂದ ನಾಡಿನ ಜನತೆಗೆ ದೊಡ್ಡ ಅನ್ಯಾಯವಾಗಿದೆ. ಕುಡಿಯುವ ನೀರಿಗೂ ಆದ್ಯತೆ ನೀಡದೆ ನೆರೆ ರಾಜ್ಯದ ಮೂರನೇ ಬೆಳೆಗೆ ನಿರಂತರ ನೀರು ಹರಿಸಲಾಗುತ್ತಿದೆ. ಆಳುವ ಸರ್ಕಾರಕ್ಕೆ ಜನಪರ ಕಾಳಜಿ ಇಲ್ಲವಾಗಿದೆ. ಇಚ್ಛಾ ಶಕ್ತಿ ಪ್ರದರ್ಶಿಸದ ಸರ್ಕಾರದ ಜಾಣ ನಡೆ ಪ್ರದರ್ಶನಕ್ಕೆ ಮುಂದಾಗಿರುವುದು ಖಂಡನೀಯ ಎಂದರು.

ರಾಜ್ಯದಲ್ಲಿ ಕುಡಿಯುವ ನೀರಿಗಾಗಿ ನೀರು ಉಳಿಸಿಕೊಳ್ಳಲು ಹೋರಾಟ ಮಾಡಲಾಗುತ್ತಿದೆ. ಆದರೆ ತಮಿಳುನಾಡು ಮೂರನೇ ಬೆಳೆ ಬೆಳೆಯಲು ನೀರು ಬಿಡುವಂತೆ ಒತ್ತಡ ಹಾಕುತ್ತಿದೆ. ನೆರೆ ರಾಜ್ಯಕ್ಕೆ ಮನುಷ್ಯತ್ವವೇ ಇಲ್ಲವಾಗಿದೆ. ಕಾವೇರಿ ನದಿ ನೀರು ಪ್ರಾಧಿಕಾರ ದೆಹಲಿಯಲ್ಲಿ ಕುಳಿತು ಪೆನ್ನು ಹಿಡಿದು ಆದೇಶ ಮಾಡುತ್ತಿದೆ. ಕಾವೇರಿ ಕೊಳ್ಳದ ಜಲಾಶಯಗಳ ವಸ್ತು ಸ್ಥಿತಿ ಅಧ್ಯಯನ ಮಾಡಲು ಮುಂದಾಗದೆ ನೀರು ಬಿಡಿ ಎಂದು ಹೇಳುತ್ತಿರುವುದು ಅಮಾನವೀಯ ಎಂದು ಪ್ರಾಧಿಕಾರದ ವಿರುದ್ಧ ಕಿಡಿಕಾರಿದರು.

ಕೇಂದ್ರ ಸರ್ಕಾರ ಕರ್ನಾಟಕದ ವಿಚಾರದಲ್ಲಿ ಮಲತಾಯಿ ಧೋರಣೆ ಅನುಸರಿಸುತ್ತಿದೆ. ಕಾವೇರಿ ವಿಚಾರವನ್ನು ಗಂಭೀರವಾಗಿ ಪರಿಗಣಿಸಿಲ್ಲ. ಕರ್ನಾಟಕ ಸಹ ರೈತರ ಹಿತ ಕಾಪಾಡಲು ಮುಂದಾಗಿಲ್ಲ. ರೈತರ ಸಹನೆಯ ಕಟ್ಟೆ ಒಡೆದಿದೆ. ಸಂಕಷ್ಟದ ಸನ್ನಿವೇಶದಲ್ಲಿ ಕಾವೇರಿ ಗ್ಯಾರಂಟಿ ಕಡೆ ಗಮನಹರಿಸಬೇಕು ಎಂದರು.

ರೈತರಿಂದ ಎತ್ತಿನಗಾಡಿ, ಟ್ರಾಕ್ಟರ್ ಮೆರವಣಿಗೆ



ಮಂಡ್ಯ, ಅ.20– ಕಾವೇರಿ ಕೊಳ್ಳದ ಜಲಾಶಯಗಳಿಂದ ತಮಿಳುನಾಡಿಗೆ ನೀರು ಹರಿಸುತ್ತಿರುವ ರಾಜ್ಯ ಸರ್ಕಾರದ ವಿರುದ್ಧ ನಡೆಯುತ್ತಿರುವ ಕಾವೇರಿ ಹೋರಾಟ ಕಾವೇರಿದ್ದು, ಮಂಡ್ಯದಲ್ಲಿ ರೈತರು ಎತ್ತಿನ ಗಾಡಿ, ಟ್ರಾಕ್ಟರ್ ಮೆರವಣಿಗೆ ನಡೆಸಿದರು.

ಇಂಡುವಾಳು, ಸಿದ್ದಯ್ಯನ ಕೊಪ್ಪಲು, ಸುಂಡಹಳ್ಳಿ, ಕಿರಗಂದೂರು ಹಾಗೂ ಮೊಳೆಕೊಪ್ಪಲು ಗ್ರಾಮದ ರೈತರು ಎತ್ತಿನ ಗಾಡಿ, ಟ್ರಾಕ್ಟರ್, ಬೈಕ್‌ಗಳಲ್ಲಿ ಮೆರವಣಿಗೆಯಲ್ಲಿ ಆಗಮಿಸಿ ನಗರದ ಜಯಚಾಮರಾಜೇಂದ್ರ ಒಡೆಯರ್ ವೃತ್ತದಲ್ಲಿ ಮಾನವ ಸರಪಳಿ ನಿರ್ಮಿಸಿ ವಾಹನ ಸಂಚಾರಕ್ಕೆ ಅಡ್ಡಿಪಡಿಸಿ ಕೇಂದ್ರ, ರಾಜ್ಯ ಸರ್ಕಾರದ ವಿರುದ್ಧ ಧಿಕ್ಕಾರ ಕೂಗಿ ಆಕ್ರೋಶ ವ್ಯಕ್ತಪಡಿಸಿದರು. ಬಳಿಕ ಜಿಲ್ಲಾ ರೈತ ಹಿತರಕ್ಷಣಾ ಸಮಿತಿ ಧರಣಿ ಸ್ಥಳಕ್ಕೆ ತೆರಳಿ ಧರಣಿಯಲ್ಲಿ ಭಾಗವಹಿಸಿದ ರೈತ ಸಮೂಹ ಜಲಾಶಯಗಳಿಂದ ನೆರೆ ರಾಜ್ಯಕ್ಕೆ ನಿರಂತರ ನೀರು ಹರಿಸುವ ಮೂಲಕ ಅಣೆಕಟ್ಟೆ ಬರಿದು ಮಾಡಲಾಗುತ್ತಿದೆ. ಕೂಡಲೇ ನೆರೆ ರಾಜ್ಯಕ್ಕೆ ಹರಿಸುತ್ತಿರುವ ನೀರು ಸ್ಥಗಿತ ಮಾಡಬೇಕು. ಕೇಂದ್ರ ಸರ್ಕಾರ ಮಧ್ಯಪ್ರವೇಶಿಸಿ ಪರಿಹಾರ ರೂಪಿಸಬೇಕು. ಸಂಕಷ್ಟ ಸನ್ನಿವೇಶದಲ್ಲಿ ಅನುಕೂಲವಾಗುವಂತೆ ಸಂಕಷ್ಟ ಸೂತ್ರ ರೂಪಿಸಬೇಕು ಎಂದು ಒತ್ತಾಯಿಸಿದರು.

ಈ ವೇಳೆ ಇಂಡುವಾಳು ಗ್ರಾಮದ ರೈತ ಮುಖಂಡ ಚಂದ್ರಶೇಖರ್, ಇ.ಬಸವರಾಜು, ಕೃಷ್ಣೇಗೌಡ, ಉಮಾ ಶಂಕರ್, ದೇವೇಗೌಡ, ಸಿದ್ದಯ್ಯನ ಕೊಪ್ಪಲು ಗ್ರಾಮದ ರಮೇಶ್ ರಾಜು, ನಟೇಶ್, ತಮ್ಮೇಗೌಡ, ತಮ್ಮಣ್ಣ, ಶಿವಣ್ಣ, ನಾಗರಾಜು, ಸಿದ್ದರಾಮು, ನಂಜೇಗೌಡ, ಸುಂಡಹಳ್ಳಿ ಗ್ರಾಮದ ಶಿವಸ್ವಾಮಿ, ಸಿದ್ದಲಿಂಗಯ್ಯ, ದೇವರಾಜು, ಮೊಳೆಕೊಪ್ಪಲು ಗ್ರಾಮದ ಅಂದಾನಿ, ಬೆಟ್ಟೇಗೌಡ, ಶಂಕರ್, ಶಿವರಾಮ, ಹೊನ್ನಪ್ಪ, ಕಿರಗಂದೂರು ಗ್ರಾಮದ ಸಿದ್ದಯ್ಯ, ಕರಿಯಪ್ಪ, ಚಿಕ್ಕಯ್ಯ ಹಾಜರಿದ್ದರು.

ಬಸವ ಜಯ ಮೃತ್ಯುಂಜಯಸ್ವಾಮಿ ಬೆಂಬಲ: ತಮಿಳುನಾಡಿಗೆ ನೀರು ಹರಿಸುತ್ತಿರುವ ರಾಜ್ಯ ಸರ್ಕಾರದ ವಿರುದ್ಧ ಸಕ್ಕರೆ ನಗರಿಯಲ್ಲಿ ನಡೆಯುತ್ತಿರುವ ಕಾವೇರಿ ಹೋರಾಟಕ್ಕೆ ಕೂಡಲ ಸಂಗಮ ಪಂಚಮಸಾಲಿ ಮಠದ ಪೀಠಾಧ್ಯಕ್ಷ ಬಸವ ಜಯ ಮೃತ್ಯುಂಜಯ ಸ್ವಾಮಿ ಬೆಂಬಲ ಸೂಚಿಸಿದರು.

ಮಂಡಕ್ಕೆ ಆಗಮಿಸಿದ ಸ್ವಾಮೀಜಿ ನಗರದ ಜಯಚಾಮರಾಜೇಂದ್ರ ಒಡೆಯರ್ ವೃತದಿಂದ ರೈತರ ಜೊತೆಗೂಡಿ ಎತ್ತಿನಗಾಡಿ ಏರಿ ಮೆರವಣಿಗೆಯಲ್ಲಿ ಸಾಗಿದರು. ಮೆರವಣಿಗೆಯಲ್ಲಿ ಕನ್ನಡಪರ ಸಂಘಟನೆ ಹೋರಾಟಗಾರರು ಕೇಂದ್ರ, ರಾಜ್ಯ, ಸರ್ಕಾರ, ಶಾಸಕ, ಸಂಸದರು ಹಾಗೂ ಕಾವೇರಿ ನದಿ ನೀರು ನಿರ್ವಹಣಾ ಪ್ರಾಧಿಕಾರದ ವಿರುದ್ಧ ಧಿಕ್ಕಾರ ಕೂಗಿ ಸ್ವಾಮೀಜಿಗಳ ಹೋರಾಟಕ್ಕೆ ಬೆಂಬಲವಾಗಿ ನಿಂತರು.

ಪತ್ನಿ, ಪುತ್ರನಿಂದ ಕೊಲೆಯಾದ ಮನೆ ಯಜಮಾನ



ಮದ್ದೂರು, ಅ.20– ಕೌಟುಂಬಿಕ ಕಲಹದಲ್ಲಿ ವ್ಯಕ್ತಿಯೋರ್ವನನ್ನು ಆತನ ಪತ್ನಿ ಹಾಗೂ ಪುತ್ರನೇ ಕೊಲೆ ಮಾಡಿರುವ ಘಟನೆ ಚಾಮರ ದೊಡ್ಡಿ ಗ್ರಾಮದಲ್ಲಿ ಗುರುವಾರ ತಡರಾತ್ರಿ ನಡೆದಿದೆ.

ಗ್ರಾಮದ ನಿವಾಸಿ ಉಮೇಶ್(50), ತನ್ನ ಪತ್ನಿ ಸವಿತಾ, ಪುತ್ರ ಶಶಾಂಕನಿಂದ ಹತ್ಯೆಯಾಗಿದ್ದಾರೆ. ಕೌಟುಂಬಿಕ ಕಲಹದ ಹಿನ್ನೆಲೆಯಲ್ಲಿ ಹಲವು ವರ್ಷಗಳಿಂದ ಉಮೇಶ್ ಹಾಗೂ ಆತನ ಪತ್ನಿ ಸವಿತಾ ನಡುವೆ ಜಗಳ ನಡೆಯುತ್ತಿತ್ತು ಎನ್ನಲಾಗಿದೆ. ಕಳೆದ ಐದಾರು ತಿಂಗಳ ಹಿಂದೆ ಜಗಳ ನಡೆದು ಪತ್ನಿ ಸವಿತಾ ಹಾಗೂ ಪುತ್ರ ಶಶಾಂಕ್, ಉಮೇಶ್ ಮೇಲೆ ಹಲ್ಲೆ ನಡೆಸಿ ಗಂಭೀರವಾಗಿ ಗಾಯಗೊಳಿಸಿದ್ದರು. ಈ ವೇಳೆ ಉಮೇಶ್ ಸಂಬಂಧಿಕರ ಸಹಾಯದಿಂದ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದು ಚೇತರಿಸಿಕೊಂಡಿದ್ದರು.

ಬೆಂಗಳೂರಿನಲ್ಲಿ ವಾಸವಾಗಿದ್ದ ಸವಿತಾ ಶನಿವಾರ ಪಿತೃಪಕ್ಷ ಹಬ್ಬ ಇದ್ದಿದ್ದರಿಂದ ಗುರುವಾರ ಮಗನೊಂದಿಗೆ ಚಾಮರದೊಡ್ಡಿಗೆ ಆಗಮಿಸಿದ್ದರು. ರಾತ್ರಿ 11.30ರಲ್ಲಿ ಮತ್ತೆ ಸವಿತಾ ಹಾಗೂ ಉಮೇಶ್ ನಡುವೆ ಜಗಳ ನಡೆದಿದೆ. ಈ ವೇಳೆ ಸವಿತಾ ಮತ್ತು ಆಕೆಯ ಪುತ್ರ ದೊಣ್ಣೆ ಹಾಗೂ ಮಚ್ಚಿನಿಂದ ಉಮೇಶ್ ಮೇಲೆ ಮಾರಣಾಂತಿಕ ಹಲ್ಲೆ ನಡೆಸಿ, ಪರಾರಿಯಾಗಿದ್ದರು. ತೀವ್ರವಾಗಿ ಗಾಯಗೊಂಡ ಉಮೇಶ್ ಸ್ಥಳದಲ್ಲೇ ಸಾವನ್ನಪ್ಪಿದ್ದರು. ಅಕ್ಕಪಕ್ಕದ ಮನೆಯವರು ಉಮೇಶ್ ಅವರ ಮನೆಗೆ ಹೋಗಿ ನೋಡಲಾಗಿ ಪ್ರಕರಣ ಬೆಳಕಿಗೆ ಬಂದಿದೆ.

ವಿಷಯ ತಿಳಿದು ಸ್ಥಳಕ್ಕೆ ಎಎಸ್ಪಿ ತಿಮ್ಮಯ್ಯ, ಡಿವೈಎಸ್ಪಿ ಕೃಷ್ಣಪ್ಪ, ಮದ್ದೂರು ಗ್ರಾಮಾಂತರ ಸಿಪಿಐ ವೆಂಕಟೇಗೌಡ, ಬೆಸಗರಹಳ್ಳಿ ಪೊಲೀಸ್ ಠಾಣೆ ಎಸ್‌ಐ ಮಲ್ಲಪ್ಪ ಹಾಗೂ ಸಿಬ್ಬಂದಿ ಭೇಟಿ ನೀಡಿ ಪರಿಶೀಲಿಸಿ, ಪ್ರಕರಣ ದಾಖಲಿಸಿಕೊಂಡಿದ್ದರು. ತಲೆಮರೆಸಿ ಕೊಂಡಿದ್ದ ಸವಿತಾ ಹಾಗೂ ಶಶಾಂಕ್‌ನನ್ನು ಶುಕ್ರವಾರ ಮುಂಜಾನೆ ಬೆಂಗಳೂರಿನ ಚಾಮ ರಾಜಪೇಟೆಯಲ್ಲಿ ಬಂಧಿಸಿ, ತನಿಖೆ ಕೈಗೊಂಡಿದ್ದಾರೆ. ಈ ಸಂಬಂಧ ಬೆಸಗರಹಳ್ಳಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಕೆ.ಆರ್.ಪೇಟೆ ಪುರಸಭೆ ಸ್ಥಾಯಿ ಸಮಿತಿಗೆ ಲೋಕೇಶ್ ಅಧ್ಯಕ್ಷ



ಕೆ.ಆರ್.ಪೇಟೆ, ಅ.20– ಪಟ್ಟಣದ ಪುರಸಭೆ ಸ್ಥಾಯಿ ಸಮಿತಿ ನೂತನ ಅಧ್ಯಕ್ಷರಾಗಿ ಹೆಚ್.ಆರ್.ಲೋಕೇಶ್ ಆಯ್ಕೆಯಾಗಿದ್ದಾರೆ.

ಒಟ್ಟು 23 ಸದಸ್ಯ ಬಲದ ಪುರಸಭೆಯಲ್ಲಿ ಶುಕ್ರವಾರ ನಡೆದ ಚುನಾವಣೆಯಲ್ಲಿ ಹೆಚ್.ಆರ್. ಲೋಕೇಶ್ ಹಾಗೂ ಶಾಮಿಯಾನ ತಿಮ್ಮೇಗೌಡ ಸ್ಪರ್ಧಿಸಿದ್ದರು. ಚುನಾವಣೆಗೆ ಸದಸ್ಯರಾದ ಕೆ.ಆರ್. ರವೀಂದ್ರಬಾಬು ಮತ್ತು ಹೆಚ್.ಡಿ.ಅಶೋಕ್ ಗೈರು ಹಾಜರಾಗಿದ್ದರೆ, ಮತ್ತೋರ್ವ ಪುರಸಭಾ ಸದಸ್ಯೆ ಕಲ್ಪನಾ ಅವರು ತಿಮ್ಮೇಗೌಡ, ಲೋಕೇಶ್ ಅವರನ್ನು ಬೆಂಬಲಿಸಿ ಪತ್ರ ನೀಡಿದ್ದರಿಂದ ಅವರ ಮತವನ್ನು ಅಧ್ಯಕ್ಷ ನಟರಾಜು ಅಸಿಂಧುಗೊಳಿಸಿ, ಮತದಾನ ಪ್ರಕ್ರಿಯೆಯಿಂದ ಹೊರಗಿಟ್ಟರು. ಬಳಿಕ ಮುಖ್ಯಾಧಿಕಾರಿ ಜಗರೆಡ್ಡಿ ಮತದಾನಕ್ಕೆ ಅನುವು ಮಾಡಿಕೊಟ್ಟರು. ಈ ವೇಳೆ 12 ಮಂದಿ ಸದಸ್ಯರು ಕೈ ಎತ್ತುವ ಮೂಲಕ ಮತ ನೀಡಿ ಲೋಕೇಶ್ ಅವರಿಗೆ ಬೆಂಬಲ ಸೂಚಿಸಿದ್ದರಿಂದ ಅವರು ಅಧ್ಯಕ್ಷರಾಗಿ ಆಯ್ಕೆಯಾದರು. ಪ್ರತಿಸ್ಪರ್ಧಿ ತಿಮ್ಮೇಗೌಡ 8 ಮತ ಪಡೆದುಪರಾಭವಗೊಂಡರು. ಉಳಿದಂತೆ ಸ್ಥಾಯಿ ಸಮಿತಿ ಸದಸ್ಯರಾಗಿ ಸಂತೋಷ್ ಕುಮಾರ್, ಕೆ.ಸಿ.ಮಂಜುನಾಥ್, ಡಿ.ಪ್ರೇಮಕುಮಾರ್, ಕೆ.ಎಸ್.ಪ್ರಮೋದ್‌ಕುಮಾರ್, ಪದ್ಮಮ್ಮ ರಾಜಣ್ಣ ಹಾಗೂ ಶುಭ ಗಿರೀಶ್ ಅವರನ್ನು ಆಯ್ಕೆ ಮಾಡಲಾಯಿತು.

ಸಾಮಾನ್ಯ ಸಭೆ: ಪುರಸಭೆ ಸಾಮಾನ್ಯ ಸಭೆ ಅಧ್ಯಕ್ಷತೆ ವಹಿಸಿದ್ದ ಪುರಸಭಾಧ್ಯಕ್ಷ ನಟರಾಜು ಹಲವು ಮಹತ್ವದ ನಿರ್ಧಾರಗಳನ್ನು ಕೈಗೊಂಡರು. ಪಟ್ಟಣದ ಡಿಸಿಸಿ ಬ್ಯಾಂಕ್ ಹಿಂಭಾಗದ ಮುಸ್ಲಿಂ ಬ್ಲಾಕ್ ಸೇರಿದಂತೆ ಉಳಿದ ಬಡಾವಣೆಗೆ ವಿನಾಯಕ ನಗರ ಎಂದು ನಾಮಕರಣ ಮಾಡಲು ನಿರ್ಧರಿಸಲಾಯಿತು. ಪುರಸಭೆ ವ್ಯಾಪ್ತಿಯ ವಿವಿಧ ಬಡಾವಣೆಗಳಲ್ಲಿ ಅವಶ್ಯವಿರುವ ಕಾಮಗಾರಿ ಗಳನ್ನು ಮೊದಲ ಆದ್ಯತೆಯಲ್ಲಿ ಕೈಗೆತ್ತಿಕೊಂಡು ಕೆಲಸ ಮಾಡಲು ಸಭೆಯಲ್ಲಿ ಸರ್ವಾನುಮತದಿಂದ ನಿರ್ಧರಿಸಲಾಯಿತು.

ಪಟ್ಟಣದ ಹೇಮಾವತಿ ಬಡಾವಣೆಯ 649 ಸೇರಿದಂತೆ ಉಳಿದ ಸಾವಿರಕ್ಕೂ ಹೆಚ್ಚು ನಿವೇಶನಗಳನ್ನು ಸಕ್ರಮಗೊಳಿಸುವ ಬಗ್ಗೆ ಜಿಲ್ಲಾಧಿಕಾರಿಗಳ ಮೂಲಕ ರಾಜ್ಯ ಸರ್ಕಾರಕ್ಕೆ ಮನವಿ ಸಲ್ಲಿಸಲು ನಿರ್ಧರಿಸಲಾಯಿತು. ಪಟ್ಟಣದ ಕುಡಿಯುವ ನೀರಿನ ದರವನ್ನು ಮಾಹೆಯಾನ 110 ರೂ.ಗಳಿಂದ 140ಕ್ಕೆ ಹೆಚ್ಚಿಸಲು ಸಭೆ ಸಮ್ಮತಿ ಸೂಚಿಸಿತು. ಕೆ.ಆರ್.ಪೇಟೆ ಮತ್ತು ಹೊಸಹೊಳಲು ಗ್ರಾಮದ ಹಿಂದೂ ರುದ್ರಭೂಮಿಗಳಲ್ಲಿ ವಿದ್ಯುತ್ ಚಿತಾಗಾರ ನಿರ್ಮಿಸಲು ಸಭೆಯಲ್ಲಿದ್ದ ಎಲ್ಲಾ ಸದಸ್ಯರು ಸಮ್ಮತಿ ಸೂಚಿಸಿದರು.

ಪಟ್ಟಣದ ಹೊಸಹೊಳಲು ರಸ್ತೆಯಲ್ಲಿರುವ ಸರ್ಕಾರಿ ಪದವಿ ಪೂರ್ವ ಕಾಲೇಜಿನ ಮುಂಭಾಗ ಮುಖ್ಯರಸ್ತೆಗೆ ಹೊಂದಿಕೊಂಡಂತೆ ಬಸ್ ನಿಲ್ದಾಣ ಸ್ಥಾಪಿಸಿ ವಿದ್ಯಾರ್ಥಿಗಳು ಹಾಗೂ ಸಾರ್ವಜನಿಕರಿಗೆ ಅನುಕೂಲ ಕಲ್ಪಿಸಲು ಸದಸ್ಯರು ಒಪ್ಪಿಗೆ ನೀಡಿದರು. ಕೆ.ಆರ್.ಪೇಟೆ ಪುರಸಭೆ ಕಾರ್ಯಾಲಯ ಹಾಗೂ ಸಭೆ ನಡೆಯುವ ಮೀಟಿಂಗ್ ಹಾಲ್‌ಗೆ ಅಗತ್ಯವಿರುವ ಪೀಠೋಪಕರಣಗಳನ್ನು ಖರೀದಿಸಲು ಸಭೆಯು ನಿರ್ಧರಿಸಿತು.

ಪುರಸಭೆಯ ಮೊದಲ ಎರಡೂವರೆ ವರ್ಷದ ಅವಧಿಯ ಅಂತಿಮ ಸಭೆಯಾದ್ದರಿಂದ ಅಧ್ಯಕ್ಷರು ಹಾಗೂ ಉಪಾಧ್ಯಕ್ಷರು ಸಭೆಯಲ್ಲಿ ಭಾಗವಹಿಸಿದ್ದ ಸದಸ್ಯರಿಗೆ ಕೃತಜ್ಞತೆ ಸಲ್ಲಿಸಿದರು. ಸಭೆಯಲ್ಲಿ ಪುರಸಭೆಯ ಎಲ್ಲಾ ಸದಸ್ಯರು, ಸಿಬ್ಬಂದಿ ಭಾಗವಹಿಸಿದ್ದರು.

ಹರೀಶ್ ಮೊಗಣ್ಣ ದಸರಾ ಸಾಂಸ್ಕೃತಿಕ ಕಾರ್ಯಕ್ರಮದ ಉಪಾಧ್ಯಕ್ಷ

ಮೈಸೂರು, ಅ.20– ಪ್ರದೇಶ ಕಾಂಗ್ರೆಸ್ ಓಬಿಸಿ ರಾಜ್ಯ ಕಾರ್ಯದರ್ಶಿ ಹರೀಶ್ ಮೊಗಣ್ಣ ಅವರನ್ನು ಮೈಸೂರು ದಸರಾ ಸಾಂಸ್ಕೃತಿಕ ಕಾರ್ಯಕ್ರಮದ ಉಪಾಧ್ಯಕ್ಷರಾಗಿ ಜಿಲ್ಲಾಧಿಕಾರಿ ಹಾಗೂ ದಸರಾ ವಿಶೇಷಾಧಿಕಾರಿಗಳೂ ಆದ ಡಾ. ರಾಜೇಂದ್ರ ನೇಮಕ ಮಾಡಿದ್ದಾರೆ.



ಅ.21ರಂದು ಶಾಲಾ ಶಿಕ್ಷಕರ ನೇಮಕಾತಿಯ ಕೌನ್ಸಿಲಿಂಗ್ ಪ್ರಕ್ರಿಯೆ

ಮೈಸೂರು, ಅ. 20– ಸಾರ್ವಜನಿಕ ಶಿಕ್ಷಣ ಇಲಾಖೆಯ ವತಿಯಿಂದ ಪದವೀಧರ ಪ್ರಾಥಮಿಕ ಶಾಲಾ ಶಿಕ್ಷಕರ ನೇಮಕಾತಿಗೆ ಸಂಬಂಧಿಸಿದಂತೆ ಅಭ್ಯರ್ಥಿಗಳ ಕೌನ್ಸಲಿಂಗ್ ಅನ್ನು ಅಕ್ಟೋಬರ್ 21ರಂದು ಬೆಳಗ್ಗೆ 10.30ಕ್ಕೆ ಮೈಸೂರಿನ ಡಿ.ಸುಬ್ಬಯ್ಯ ರಸ್ತೆಯಲ್ಲಿರುವ ಶಾಲಾ ಶಿಕ್ಷಣ ಇಲಾಖೆಯ ಉಪನಿರ್ದೇಶಕರ ಕಛೇರಿಯಲ್ಲಿ ನಡೆಸಲಾಗುವುದು.

ಆಯ್ಕೆಯಾದ ಅಭ್ಯರ್ಥಿಗಳು ನೇಮ ಕಾತಿಗೆ ಸಂಬಂಧಿತ ದಾಖಲೆಗಳೊಂದಿಗೆ ಹಾಜರಾಗುವಂತೆ ಸಾರ್ವಜನಿಕ ಶಿಕ್ಷಣ ಇಲಾಖೆಯ ಉಪ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಶ್ರೀಮತಿ ಶಾರದಮ್ಮ ನಿಧನ



ಮೈಸೂರು, ಅ. 20– ನ್ಯಾಯಾಂಗ ಇಲಾಖೆಯ ನಿವೃತ್ತ ಸಿಬ್ಬಂದಿ ಹಾಗೂ ರಾಜೀವ್‌ನಗರ ನಿವಾಸಿ ಶ್ರೀಮತಿ ಶಾರದಮ್ಮ(73) ಇಂದು ನಿಧನರಾದರು. ಮೃತರು ಪತಿ ಎಸ್. ಮಾದಯ್ಯ, ಮಕ್ಕಳಾದ ಎಂ. ತೇಜಸ್, ಎಂ. ಪ್ರಭು, ಎಂ. ಚಂಪಾ, ಎಂ. ರವಿಪ್ರಸಾದ್, ಮೊಮ್ಮಕ್ಕಳು ಹಾಗೂ ಅಪಾರ ಸಂಬಂಧಿ ಗಳನ್ನು ಅಗಲಿದ್ದಾರೆ. ಇವರ ಅಂತ್ಯಕ್ರಿಯೆ ನಾಳೆ (ಶನಿವಾರ) ಮಧ್ಯಾಹ್ನ 12 ಗಂಟೆಗೆ ಚಾಮುಂಡಿಬೆಟ್ಟದ ತಪ್ಪಲಿನಲ್ಲಿರುವ ರುದ್ರಭೂಮಿಯಲ್ಲಿ ನೆರವೇರಲಿದೆ.

ಕಿತ್ತೂರು ರಾಣಿ ಚೆನ್ನಮ್ಮ ಸಮಸ್ತ ಕನ್ನಡಿಗರ ಹೆಮ್ಮೆ

ಶ್ರೀ ಜಯ ಮೃತ್ಯುಂಜಯ ಸ್ವಾಮೀಜಿ ಅಭಿಮತ



ಮೈಸೂರು, ಅ.20(ಎಸ್‌ಪಿಎನ್)– ಶತ್ರುವಿನ ಮಕ್ಕಳು ಎಂದಿಗೂ ಶತ್ರು ಆಗಲಾರರು ಎಂದಿದ್ದ ಚೆನ್ನಮ್ಮಾಜಿ ಅವರ ನುಡಿಯನ್ನು ಅಮೇರಿಕಾ ತನ್ನ ಸಂಸತ್ ಹಾಲ್‌ನಲ್ಲಿ ಉಲ್ಲೇಖಿಸಿದೆ. ಹಾಗಾಗಿ ವೀರರಾಣಿ ಕಿತ್ತೂರು ಚೆನ್ನಮ್ಮ ಸಮಸ್ತ ಕನ್ನಡಿಗರ ಹೆಮ್ಮೆಯ ಸಂಕೇತ ಎಂದು ಕೂಡಲ ಸಂಗಮ ಪಂಚಮಸಾಲಿ ಪೀಠದ ಶ್ರೀ ಜಯ ಮೃತ್ಯುಂಜಯ ಸ್ವಾಮೀಜಿ ಅಭಿಪ್ರಾಯಪಟ್ಟರು.

ಮೈಸೂರು ವಿಜಯನಗರ ಒಂದನೇ ಹಂತದಲ್ಲಿರುವ ಜಿಲ್ಲಾ ಸಾಹಿತ್ಯ ಭವನದಲ್ಲಿ ಲಿಂಗಾಯತ ಗೌಡ ಮಹಾಸಭಾ ಮತ್ತು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಸಹಯೋಗದೊಂದಿಗೆ ನಡೆದ ಕಿತ್ತೂರು ರಾಣಿಚೆನ್ನಮ್ಮ ಜಯಂತಿ ಹಾಗೂ 'ಕಿತ್ತೂರು ರಾಣಿ ಚೆನ್ನಮ್ಮ ಸದ್ಭಾವನಾ ಪ್ರಶಸ್ತಿ' ಸಮಾರಂಭದಲ್ಲಿ ಐವರು ಸಾಧಕರನ್ನು ಸನ್ಮಾನಿಸಿ ಮಾತನಾಡಿದರು.

ಆಯುಧಪೂಜೆ ದಿನದಂದು ಬ್ರಿಟಿಷರಿಗೆ ಕಪ್ಪ ನೀಡದ ವಿಚಾರದಲ್ಲಿ ಕಿತ್ತೂರು ಸಂಸ್ಥಾನ ಮತ್ತು ಬ್ರಿಟಿಷರ ನಡುವೆ ವೈಮನಸ್ಸು ಉಂಟಾಗಿ, ಬ್ರಿಟಿಷರು ಏಕಾಏಕಿ ಕಿತ್ತೂರು ಸಂಸ್ಥಾನದ ಮೇಲೆ ಯುದ್ಧ ಸಾರಿದರು. ಕಿತ್ತೂರು ಆಳುತ್ತಿದ್ದ ರಾಣಿ ಚೆನ್ನಮ್ಮ ಮತ್ತು ಬ್ರಿಟಿಷರ ನಡುವಿನ ಘೋರ ಯುದ್ಧದಲ್ಲಿ ಬ್ರಿಟಿಷ್ ಅಧಿಕಾರಿಯ ರುಂಡ ಚೆಂಡಾಡಿ, ಯುದ್ಧ ಗೆದ್ದ ಪ್ರಸಂಗ ಹಾಗೂ ರಾಣಿ ಚೆನ್ನಮ್ಮ ಅವರ ಹುಟ್ಟಿದ್ದ ದಿನವನ್ನು ಇಂದಿಗೂ ಉತ್ತರ ಕರ್ನಾಟಕ ಮಂದಿ ಬಹಳ ಸಂಭ್ರಮದಿಂದ ಆಚರಿಸುತ್ತಾರೆ. ಕಿತ್ತೂರು ಚೆನ್ನಮ್ಮ ಜಯಂತಿಯನ್ನು ದಕ್ಷಿಣ ಕರ್ನಾಟಕದ ಮಂದಿಯೂ ಆಚರಣೆ ಮಾಡುವಂತೆ ಮನವಿ ಮಾಡಿದರು.

ದಕ್ಷಿಣ ಕರ್ನಾಟಕದ ಜನತೆ ಪುರಾಣದ ಪ್ರಕಾರ ಮಹಿಷಾಸುರನನ್ನು ಸಂಹರಿಸಿದ್ದಕ್ಕೆ ಈ ಭಾಗದಲ್ಲಿ ದಸರಾ ಆಚರಿಸಿದರೆ, ಉತ್ತರ ಕರ್ನಾಟಕದಲ್ಲಿ ಇತಿಹಾಸದ ಪ್ರಕಾರ ವೀರರಾಣಿ ಕಿತ್ತೂರು ಚೆನ್ನಮ್ಮ, ಬ್ರಿಟಿಷರು ವಿರುದ್ಧ ಹೋರಾಡಿ ಜಯಗಳಿಸಿದ ದಿನ ದಸರಾ ಸಂದರ್ಭ ಆದ್ದರಿಂದ ಪ್ರತಿ ವರ್ಷ ಅಂದೇ ವಿಜಯೋತ್ಸವ ಆಚರಿಸಲಾಗುತ್ತದೆ ಈ ವೇಳೆ ರಾಣಿ ಚೆನ್ನಮ್ಮನನ್ನು ದುರ್ಗೆ, ಚಂಡಿ–ಚಾಮುಂಡಿ ಸೇರಿದಂತೆ ಇತರೆ ಹೆಸರಿನಿಂದಲೂ ಕರೆಯುವ ಪ್ರಸಂಗವನ್ನು ಎಳೆಎಳೆಯಾಗಿ ವಿವರಿಸಿದರು.

ಎರಡು ಕಣ್ಣು: ಕಾವೇರಿ ನೀರಿಗಾಗಿ ಮಂಡ್ಯ ಜಿಲ್ಲೆಯಲ್ಲಿ ಹೋರಾಟ ನಡೆಸುತ್ತಿರುವ ಹೋರಾಟಗಾರರು, ಕಾವೇರಿ ಹೋರಾಟಕ್ಕೆ ಮಂಡ್ಯಕ್ಕೆ ಬಂದು ಬೆಂಬಲ ಸೂಚಿಸುವಂತೆ ಹೋರಾಟಗಾರರು ಮನವಿ ಮಾಡಿದ್ದಾರೆ. ಆದರೆ, ಈಗಾಗಲೇ ಪಂಚಮಸಾಲಿಗೆ 2ಎ ಮೀಸಲಾತಿ ಹೋರಾಟ ಆರಂಭಿಸಿರುವುದರಿಂದ ಈ ಹೋರಾಟಕ್ಕೆ ನೈತಿಕ ಬೆಂಬಲ ನೀಡುವುದಾಗಿ ತಿಳಿಸಿದ್ದೇನೆ ಎಂದರು.

ಈ ವೇಳೆ ವಿವಿಧ ಕ್ಷೇತ್ರದ ಮಹಿಳಾ ಸಾಧಕರಾದ ಡಾ.ಪೂರ್ಣಿಮಾ (ವೈದ್ಯಕೀಯ ಕ್ಷೇತ್ರ), ಡಾ.ಎಸ್.ಶ್ಯಾಮಲ (ಶಿಕ್ಷಣ ಕ್ಷೇತ್ರ), ಡಾ.ಸಂಗೀತ ಮಹೇಶ್ (ವಿಶೇಷ ಶಿಕ್ಷಣ ಕ್ಷೇತ್ರ), ವಿಜಯ ಸುದರ್ಶನ್ (ಸಂಗೀತ–ಆಧ್ಯಾತ್ಮಿಕ ಕ್ಷೇತ್ರ), ಡಾ. ಜಮುನಾರಾಣಿ ಮಿರ್ಲೆ(ಸಮಾಜ ಸೇವೆ) ಅವರಿಗೆ ಕಿತ್ತೂರು ರಾಣಿ ಚೆನ್ನಮ್ಮ ಸದ್ಭಾವನಾ ಪ್ರಶಸ್ತಿ ನೀಡಿ, ಗೌರವಿಸಲಾಯಿತು.

ವೇದಿಕೆಯಲ್ಲಿ ಹೊಸಮಠದ ಶ್ರೀ ಚಿದಾನಂದ ಸ್ವಾಮೀಜಿ, ಲಿಂಗಾಯತಗೌಡ ಮಹಾಸಭಾದ ರಾಜ್ಯಾಧ್ಯಕ್ಷ ಆಲನಹಳ್ಳಿ ಪುಟ್ಟಸ್ವಾಮಿ, ಲಿಂಗಾಯತ ಗೌಡ ಹಾಗೂ ಪಂಚಮ ಸಾಲಿ ಸಮಾಜದ ಸಮನ್ವಯ ಸಮಿತಿ ಸಂಚಾಲಕ ಅಮ್ಮನಪುರ ಮಲ್ಲೇಶ್, ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್, ಮುಖಂಡರಾದ ಎ.ಸಿ.ಜಗದೀಶ್, ವಿರೂಪಾಕ್ಷಮ್ಮ, ಸೋಮಶೇಖರ್, ಅಭಿನವ್, ತಳೂರು ರಾಜು, ಶಂಭುಪಟೇಲ್, ರುದ್ರಮೂರ್ತಿ, ಕಸಾಪ ಮಾಜಿ ಅಧ್ಯಕ್ಷ ಎಂ.ಚಂದ್ರಶೇಖರ್, ವಕೀಲರಾದ ಎಂ.ಪೂರ್ಣಿಮಾ, ಬಿ.ಬಿ.ರಾಜಶೇಖರ, ಬಸವರಾಜೇಂದ್ರ ಸ್ವಾಮಿ, ಬೀಲೂರು ಚಂದ್ರಶೇಖರ್, ಕೆಂಪಣ್ಣ, ಜಿ.ಪ್ರಕಾಶ್, ಕಣೇನೂರು ಜಗದೀಶ್ ಉಪಸ್ಥಿತರಿದ್ದರು.

ಜೆಡಿಎಸ್–ಬಿಜೆಪಿ ಮೈತ್ರಿ ಕುರಿತು ದೇವೇಗೌಡರ ಹೇಳಿಕೆ ಸಂಪೂರ್ಣ ಅಸಂಬದ್ಧ

ಕೇರಳ ಮುಖ್ಯಮಂತ್ರಿ ಪಿಣರಾಯಿ



ತಿರುವನಂತಪುರಂ: ಕರ್ನಾಟಕದಲ್ಲಿ ಜೆಡಿಎಸ್–ಬಿಜೆಪಿ ಮೈತ್ರಿಗೆ ಪಿಣರಾಯಿ ವಿಜಯನ್ ಅವರು ಸಂಪೂರ್ಣ ಒಪ್ಪಿಗೆ ನೀಡಿದ್ದಾರೆ ಎಂಬ ಜನತಾ ದಳ(ಎಸ್) ವರಿಷ್ಠ ಎಚ್.ಡಿ. ದೇವೇಗೌಡರ ಹೇಳಿಕೆಗೆ ತೀವ್ರ ಆಕ್ಷೇಪ ವ್ಯಕ್ತಪಡಿಸಿದ ಕೇರಳ ಸಿಎಂ ಪಿಣರಾಯಿ ವಿಜಯನ್ ಅವರು, ಗೌಡರ ಹೇಳಿಕೆ ಸಂಪೂರ್ಣ ಅಸಂಬದ್ಧ ಎಂದಿದ್ದಾರೆ. ಈ ಸಂಬಂಧ ದೇವೇಗೌಡರ ವಿರುದ್ಧ ತೀವ್ರ ವಾಗ್ದಾಳಿ ನಡೆಸಿದ ಪಿಣರಾಯಿ, ದೇವೇಗೌಡರಂತಹ ಹಿರಿಯ ರಾಜಕಾರಣಿ ಈ ರೀತಿ ಆಧಾರ ರಹಿತ ಸುಳ್ಳುಗಳನ್ನು ಹೇಳುತ್ತಿರುವುದು ನಾಚಿಕೆಗೇಡಿನ ಸಂಗತಿ ಎಂದು ಕಿಡಿಕಾರಿದ್ದಾರೆ.

ಇಂದು ನಡೆದ ಸಿಪಿಎಂ ಸೆಕ್ರೆಟರಿಯೇಟ್ ಸಭೆಯಲ್ಲಿ ಈ ವಿಷಯ ಪ್ರಸ್ತಾಪವಾಯಿತು. ಅಲ್ಲಿ ಗೌಡರು ಹೇಳಿಕೊಂಡಂತೆ ನಾನು ಜೆಡಿಎಸ್–ಬಿಜೆಪಿ ಮೈತ್ರಿಗೆ ಒಪ್ಪಿಗೆ ನೀಡಿಲ್ಲ ಎಂದು ಪಿಣರಾಯಿ ವಿವರಿಸಿದರು.

ನಾನು ಇತ್ತೀಚಿಗೆ ದೇವೇಗೌಡರನ್ನು ಭೇಟಿಯೂ ಮಾಡಿಲ್ಲ ಮತ್ತು ಮಾತೂ ಆಡಿಲ್ಲ ಎಂದು ಕೇರಳ ಸಿಎಂ ಪಕ್ಷದ ನಾಯಕರಿಗೆ ತಿಳಿಸಿದರು. ನಂತರ ಕಠಿಣ ಪದಗಳಲ್ಲಿ ದೇವೇಗೌಡರ ಹೇಳಿಕೆಯನ್ನು ಖಂಡಿಸಿದ ಪಿಣರಾಯಿ, ಗೌಡರ ಹೇಳಿಕೆ ಅಸಂಬದ್ಧ ಮತ್ತು ರಾಜಕೀಯ ಸಭ್ಯತೆಯ ಭಾಗವಾಗಿ ಅದನ್ನು ಅವರು ಸರಿಪಡಿಸಿಕೊಳ್ಳಬೇಕು ಎಂದು ಹೇಳಿದ್ದಾರೆ.


ಕೇರಳದಲ್ಲಿ ಜನತಾ ದಳ(ಎಸ್) ದೀರ್ಘಕಾಲದಿಂದ ಎಲ್‌ಡಿಎಫ್‌ನ ಭಾಗವಾಗಿದೆ. ಹೀಗಾಗಿ ಎನ್‌ಡಿಎ ಮೈತ್ರಿಕೂಟಕ್ಕೆ ಕೇರಳದ ರಾಜ್ಯ ಘಟಕ ಸಮ್ಮತಿ ನೀಡಿದೆ ಮತ್ತು ಪಿಣರಾಯಿ ವಿಜಯನ್ ಅವರು ಒಪ್ಪಿಗೆ ನೀಡಿದ್ದಾರೆ ಎಂದು ದೇವೇಗೌಡರು ಹೇಳಿದ್ದರು.

ಮಾಜಿ ಪ್ರಧಾನಿ ದೇವೇಗೌಡರ ಸ್ಪಷ್ಟನೆ



ಬೆಂಗಳೂರು: ರಾಜ್ಯದಲ್ಲಿ ಜೆಡಿಎಸ್–ಬಿಜೆಪಿ ಮೈತ್ರಿಯನ್ನು ಕೇರಳದ ಸಿಪಿಎಂ ಬೆಂಬಲಿಸುತ್ತದೆ ಎಂದು ನಾನು ಹೇಳಿಯೇ ಇಲ್ಲ ಎಂದು ಜೆಡಿಎಸ್ ವರಿಷ್ಠ ಮಾಜಿ ಪ್ರಧಾನಿ ಎಚ್.ಡಿ.ದೇವೇಗೌಡ ಅವರು ಶುಕ್ರವಾರ ಸ್ಪಷ್ಟಪಡಿಸಿದ್ದಾರೆ. ಈ ಕುರಿತು ಎಕ್ಸ್‌ನಲ್ಲಿ ಪೋಸ್ಟ್ ಮಾಡಿರುವ ಮಾಜಿ ಪ್ರಧಾನಿ, ಸಿಪಿಎಂ ಬಗ್ಗೆ ನನ್ನ ಹೇಳಿಕೆಯ ಬಗ್ಗೆ ಕೆಲವು ಗೊಂದಲಗಳಿವೆ. ನನ್ನ ಕಮ್ಯುನಿಸ್ಟ್ ಸ್ನೇಹಿತರು ನಾನು ಹೇಳಿದ್ದನ್ನು ಅಥವಾ ನಾನು ಹೇಳಿದ ಸಂದರ್ಭವನ್ನು ತಪ್ಪಾಗಿ ಗ್ರಹಿಸಿದ್ದಾರೆ. ಕೇರಳದ ಸಿಪಿಎಂ ಬಿಜೆಪಿ–ಜೆಡಿಎಸ್ ಮೈತ್ರಿಯನ್ನು ಬೆಂಬಲಿಸುತ್ತದೆ ಎಂದು ನಾನು ಹೇಳಿಲ್ಲ. ಕೇರಳದಲ್ಲಿ ನನ್ನ ಪಕ್ಷದ ಘಟಕವು 1/2 ರೊಂದಿಗೆ ಒಪ್ಪಿಕೊಂಡಿದೆ ಎಂದು ಹೇಳಿರುವುದಾಗಿ ತಿಳಿಸಿದ್ದಾರೆ.

ಪ್ರೊ.ಭಗವಾನ್ ವಿರುದ್ಧ ಎಫ್‌ಐಆರ್?



ಮೈಸೂರು, ಅ.20– ಪ್ರೊ.ಕೆ.ಎಸ್. ಭಗವಾನ್ ವಿರುದ್ಧ ಮೈಸೂರಿನ ದೇವರಾಜ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ ಎಂದು ಹೇಳಲಾಗಿದೆ.

ನಗರ ಪುರಭವನದಲ್ಲಿ ನಡೆದ ಮಹಿಷ ಉತ್ಸವ ಕಾರ್ಯಕ್ರಮದಲ್ಲಿ ಒಕ್ಕಲಿಗ ಸಮುದಾಯದ ವಿರುದ್ಧ ಅವಹೇಳನಕಾರಿ ಹೇಳಿಕೆ ನೀಡಿದ್ದು, ಈ ಮೂಲಕ ಧಾರ್ಮಿಕ ಭಾವನೆಗೆ ದಕ್ಕೆ ತಂದಿದ್ದಾರೆ ಎಂದು ಅಖಿಲ ಕರ್ನಾಟಕ ಒಕ್ಕಲಿಗರ ಸಂಘದ ರಾಜ್ಯಾಧ್ಯಕ್ಷ ಸಿ.ಜಿ.ಗಂಗಾಧರ್, ಜಿಲ್ಲಾಧ್ಯಕ್ಷ ತೇಜಸ್ ಲೋಕೇಶ್‌ಗೌಡ ಕೆಲ ದಿನಗಳ ಹಿಂದೆ ದೂರು ನೀಡಿದ್ದರು. ಈ ದೂರಿನನ್ವಯ ಪೊಲೀಸರು ಐಪಿಸಿ ಕಲಂ 156(ಎ) ಅಡಿ ಎಫ್‌ಐಆರ್ ದಾಖಲಿಸಿ, ಮುಂದಿನ ಕ್ರಮ ಕೈಗೊಂಡಿದ್ದಾರೆ ಎಂದು ತಿಳಿದುಬಂದಿದೆ.

ಅಂತಿಮ ಘಟ್ಟಕ್ಕೆ ದಸರಾ ಕುಸ್ತಿ; ಬಿರುದುಗಾಗಿ ತೊಡೆ ತಟ್ಟುತ್ತಿರುವ ಮಲ್ಲರು!



ಮೈಸೂರು, ಅ.20(ಎಂಕೆ)– ನಾಡಹಬ್ಬ ದಸರಾ ಕುಸ್ತಿ ಪಂದ್ಯಾವಳಿ ಫೈನಲ್ ಹಂತಕ್ಕೆ ತಲುಪಿದ್ದು, ನಾಳೆ(ಅ.21) ಟೈಟಲ್ ಪ್ರಶಸ್ತಿ ಪಂದ್ಯಗಳ ಹಣಾಹಣಿಗೆ ವೇದಿಕೆ ಸಿದ್ಧವಾಗಿದೆ.

ನಗರದ ದಸರಾ ವಸ್ತು ಪ್ರದರ್ಶನ ಪ್ರಾಧಿಕಾರದ ಶ್ರೀ ದೇವರಾಜ ಅರಸು ವಿವಿಧೋದ್ದೇಶ ಕ್ರೀಡಾಂಗಣದಲ್ಲಿ ಶುಕ್ರವಾರ ಟೈಟಲ್ ಪ್ರಶಸ್ತಿಗೆ ಜಿದ್ದಾಜಿದ್ದಿನ ಹೋರಾಟ ನಡೆಸಿದ ಪೈಲ್ವಾನರು ಕ್ರೀಡಾಭಿಮಾನಿಗಳಿಗೆ ರೋಮಾಂಚನ ಉಂಟು ಮಾಡಿತು. 'ದಸರಾ ಕಿಶೋರ', 'ದಸರಾ ಕೇಸರಿ', 'ದಸರಾ ಕಂಠೀರವ', 'ದಸರಾ ಕಿಶೋರಿ' ಹಾಗೂ ಮೈಸೂರು ವಿಭಾಗ ಮಟ್ಟದ ಮೈಸೂರು 'ದಸರಾ ಕುಮಾರ್' ಪ್ರಶಸ್ತಿ ಪಡೆಯುವ ಜಿದ್ದಾ ಜಿದ್ದಿಯಲ್ಲಿ ಒಂದೊಂದು ಪಾಯಿಂಟ್ ಪಡೆಯಲು ತಮ್ಮದೇ ತಂತ್ರ–ಪ್ರತಿ ತಂತ್ರದ ಜೊತೆಗೆ ಶಕ್ತಿ ಪ್ರದರ್ಶನ ತೋರಿದ ಪೈಲ್ವಾನರ ರೋಚಕ ಹಣಾಹಣಿ ನೋಡುಗರ ಮೈನವಿರೇಳಿಸಿತು.



ನಾಡಕುಸ್ತಿ ವೈಭವ: ಎಂದಿನಂತೆ ಸಂಜೆ ವೇಳೆ ನಡೆದ ನಾಡಕುಸ್ತಿ ಪಂದ್ಯಾವಳಿಯಲ್ಲಿ ದೂಳೆಬ್ಬಿಸಿದ ಪೈಲ್ವಾನರು, ನಾಡಕುಸ್ತಿಯ ಹಿರಿಮೆ–ಗರಿಮೆ ಸಾರಿದರು. 50 ಜೋಡಿ ನಡುವೆ ನಡೆದ ಹಣಾಹಣಿಯಲ್ಲಿ ಬಹುತೇಕ ಪಂದ್ಯಗಳು ಸಮಬಲದಲ್ಲಿ ಅಂತ್ಯವಾದವು.

ತಾಯೂರು ಪೈ.ಮಾದೇಶ್ ಕೇವಲ 10 ಸೆಕೆಂಡ್‌ನಲ್ಲಿ ಎದುರಾಳಿ ಮೈಸೂರು ಪೈ.ಮೊಹಮ್ಮದ್ ಫೈಜಾನ್‌ಗೆ ಸೋಲುಣಿಸಿದರೆ, ಲಾಲಮಿಯಾ ಗರಡಿ ಪೈ.ಸೈಯದ್ ಸಮೀರ್ ವಿರುದ್ಧ ರಮ್ಮನಹಳ್ಳಿ ಪೈಲ್ವಾನ್ ಚೇತನ್ 14 ಸೆಕೆಂಡ್‌ಗಳು ಜಯ ಗಳಿಸಿದರು. ಹಾಗೆಯೇ ಮಳವಳ್ಳಿ ಪೈ.ವಂಸತ್ ವಿರುದ್ಧ ಬೀರಿಹುಂಡಿ ಪೈ.ಮನು 15 ಸೆಕೆಂಡ್‌ಗಳಲ್ಲಿ, ಗೋಳೂರು ಪೈ. ಆರ್.ವಿಕಾಸ್ ವಿರುದ್ಧ ಲಕ್ಷ್ಮಿಪುರಂ ಪೈ.ಯಶ್ವಂತ್ 30 ಸೆಕೆಂಡ್‌ಗಳಲ್ಲಿ ಗೆದ್ದು ಬೀಗಿದರು.

ಇಂದು ರೋಚಕ ಫೈನಲ್ ಪಂದ್ಯಗಳು...!

'ದಸರಾ ಕಂಠೀರವ' ಪ್ರಶಸ್ತಿಗೆ ಬೆಳಗಾಂನ ಮುದೋಳ್ ಪೈಲ್ವಾನ್ ಸುನೀಲ್ ಪಡತಾರೆ ಹಾಗೂ ಜಮಕಂಡಿ ಪೈಲ್ವಾನ್ ಗೋಪಾಲ್ ಕೋಳಿ ಸೆಣಸಾಡಿದರೆ, 'ದಸರಾ ಕೇಸರಿ' ಪ್ರಶಸ್ತಿಗೆ ಬೆಳಗಾಂ ರೋಷನ್ ನಾರಾಯಣ್ ಹಾಗೂ ಹಳಿಯಾಳದ ಎಂ.ಜಿ.ಮಂಜುನಾಥ್ ಬಲಾಬಲ ಪ್ರದರ್ಶಿಸಲಿದ್ದಾರೆ. ಹಾಗೆಯೇ 'ದಸರಾ ಕಿಶೋರ' ಪ್ರಶಸ್ತಿಗೆ ದಾವಣಗೆರೆ ಮಹೇಶ್ ಪಿ.ಗೌಡ ಹಾಗೂ ಕೊರವರ ಸಂಜೀವ್ ಜಿದ್ದಿಗಿಳಿದರೆ, ಮೈಸೂರು ವಿಭಾಗ ಮಟ್ಟದ ಮೈಸೂರು 'ದಸರಾ ಕುಮಾರ್' ಪ್ರಶಸ್ತಿಗೆ ಮೈಸೂರಿನ ಉದಯೋನ್ಮುಖ ಕುಸ್ತಿ ಪಟು ಪೈಲ್ವಾನ್ ದೀಕ್ಷಿತ್ ಹಾಗೂ ಮಹದೇವಪುರ ವಿಕಾಸ್ ತೊಡೆ ತಟ್ಟಲಿದ್ದಾರೆ. ಮಹಿಳಾ ವಿಭಾಗದ 'ದಸರಾ ಕಿಶೋರಿ' ಪ್ರಶಸ್ತಿಗೆ ಬೆಳಗಾಂ ಪೈಲ್ವಾನ್ ಸ್ವಾತಿ ಪಾಟೀಲ್ ಹಾಗೂ ಹಳಿಯಾಳದ ಲಕ್ಷ್ಮಿ ಪಾಟೀಲ್ ಸೆಣಸಲಿದ್ದಾರೆ. ಫೈನಲ್ ಪಂದ್ಯಗಳು ಸಂಜೆ 3 ಗಂಟೆಗೆ ಆರಂಭವಾಗಲಿವೆ.

ಮೈಸೂರು ಮಿತ್ರ

ಅನ್ನದಾತನ ಬದುಕು ಅನಾವರಣಗೊಳಿಸುವ 'ರೈತ ದಸರಾ'







ಮೈಸೂರು, ಅ.20(ಜಿಎ)–ಕಲಾತಂಡಗಳ ಮತ್ತು ರೈತ ಪರಂಪರೆಯನ್ನು ಬಿಂಬಿಸುವ ವೈಭವದ ಮೆರವಣಿಗೆಯ ರೈತ ದಸರಾ ಜನರನ್ನೂ ಆಕರ್ಷಿಸಿತು.

ಅರಮನೆ ಕೋಟೆ ಆಂಜನೇಯಸ್ವಾಮಿ ದೇವಸ್ಥಾನದ ಬಳಿ ತಳಿರು ತೋರಣ, ಹಸಿರಿನಿಂದ ಕೂಡಿದ ಅಲಂಕೃತ ಎತ್ತಿನ ಗಾಡಿಯನ್ನು ಏರಿದ ಕೃಷಿ ಸಚಿವ ಎನ್.ಚಲುವರಾಯಸ್ವಾಮಿ ಹಸಿರು ರುಮಾಲು ಧರಿಸಿಕೊಂಡು ಓಡಿಸುವ ಮೂಲಕ ಮೆರವಣಿಗೆಗೆ ಚಾಲನೆ ನೀಡಿದರು. ಈ ವೇಳೆ ರೈತರು, ರೈತ ಮಹಿಳೆಯರು ನೂರಾರು ಸಂಖ್ಯೆಯಲ್ಲಿ ಪಾಲ್ಗೊಂಡು ಮೆರವಣಿಗೆಗೆ ಗ್ರಾಮೀಣ ಮೆರಗು ನೀಡಿದರು.

ಮೆರವಣಿಗೆಯಲ್ಲಿ ನಂದಿ ಕಂಬ, ಡೊಳ್ಳು ಕುಣಿತ, ಪೂಜಾ ಕುಣಿತ, ವೀರಭದ್ರ ಕುಣಿತ, ಕಂಸಾಳೆ, ಯಕ್ಷಗಾನ, ಹುಲಿವೇಷ ಸೇರಿದಂತೆ ವಿವಿಧ ಜಾನಪದ ಕಲಾತಂಡಗಳು ಭಾಗವಹಿಸಿದ್ದವು. ಕೃಷಿ, ತೋಟಗಾರಿಕೆ, ರೇಷ್ಮೆ ಬೆಳೆಗೆ ಸಂಬಂಧಿಸಿದ ಮಾಹಿತಿ ನೀಡುವ ಸ್ತಬ್ಧ ಚಿತ್ರಗಳು ಮೆರವಣಿಗೆಯಲ್ಲಿ ಪಾಲ್ಗೊಂಡಿದ್ದವು. ಬಂಡೂರು ಕುರಿ ತಳಿಗಳು ಮೆರವಣಿಗೆಯ ಪ್ರಮುಖ ಆಕರ್ಷಣೆಯಾಗಿತ್ತು.

ಕೋಟೆ ಆಂಜನೇಯಸ್ವಾಮಿ ದೇವಸ್ಥಾನದಿಂದ ಹೊರಟ ರೈತ ದಸರಾ ಮೆರವಣಿಗೆ ಕೆ.ಆರ್. ವೃತ್ತ, ದೇವರಾಜ ಅರಸು ರಸ್ತೆ ಮೂಲಕ ಜೆ.ಕೆ.ಮೈದಾನ ತಲುಪಿತು. ಮೆರವಣಿಗೆಯಲ್ಲಿ ಶಾಸಕರಾದ ಕೆ.ಹರೀಶ್‌ಗೌಡ, ರಮೇಶ್ ಬಂಡಿಸಿದ್ದೇಗೌಡ, ಜಿಲ್ಲಾಧಿಕಾರಿ ಕೆ.ವಿ.ರಾಜೇಂದ್ರ ಸೇರಿದಂತೆ ರೈತ ದಸರಾ ಉಪಸಮಿತಿ ಪದಾಧಿಕಾರಿಗಳು ಭಾಗವಹಿಸಿದ್ದರು.

ಕೃಷಿ ವಸ್ತು ಪ್ರದರ್ಶನ ಉದ್ಘಾಟನೆ : ರೈತ ದಸರಾದ ಮೆರವಣಿಗೆ ಜೆ.ಕೆ.ಮೈದಾನ ತಲುಪಿದ ನಂತರ ಪಶುಸಂಗೋಪನಾ ಹಾಗೂ ರೇಷ್ಮೆ ಸಚಿವ ಕೆ.ವೆಂಕಟೇಶ್ ಕೃಷಿ ವಸ್ತು ಪ್ರದರ್ಶನವನ್ನು ಉದ್ಘಾಟಿಸಿದರು.

ರಾಜ್ಯದಲ್ಲಿ ಬರವಿರುವ ಕಾರಣ ಈ ಬಾರಿಯ ಕೃಷಿ ವಸ್ತು ಪ್ರದರ್ಶನದಲ್ಲಿ ರೈತರಿಗೆ ಕೃಷಿಗೆ ಅಗತ್ಯವಾದ ಭರಪೂರ ಮಾಹಿತಿ ನೀಡುವ ಮಳಿಗೆಗಳು ರೈತ ದಸರಾದ ವಿಶೇಷವಾಗಿದೆ. ವಸ್ತು ಪ್ರದರ್ಶನ ಮಳಿಗೆಗಳಲ್ಲಿ ಕೃಷಿ, ತೋಟಗಾರಿಕೆ, ರೇಷ್ಮೆ ಕೃಷಿ ಮತ್ತು ಪಶುಸಂಗೋಪನೆಗೆ ಸಂಬಂಧಿಸಿದ ಮಾಹಿತಿ ದೊರೆಯುವಂತೆ ವ್ಯವಸ್ಥೆ ಮಾಡಲಾಗಿದೆ

ಉದ್ದ ಕಿವಿ ಮೇಕೆ : ಪಶುಪಾಲನಾ ಮತ್ತು ಪಶು ವೈದ್ಯಕೀಯ ಸೇವಾ ಇಲಾಖೆ ವತಿಯಿಂದ ಸಾಕಷ್ಟು ಮಳಿಗೆಗಳನ್ನು ಸ್ಥಾಪಿಸಿದ್ದು, ಅವುಗಳ ಪೈಕಿ ಕಂದು ಬಣ್ಣದ ಉದ್ದ ಕಿವಿ ಮೇಕೆಗಳು ಹೆಚ್ಚು ಗಮನ ಸೆಳೆಯಿತು. ಇವುಗಳ ಕಿವಿಯೂ 9 ಇಂಚು ಅಗಲ, 31 ಇಂಚು ಉದ್ದವಿದ್ದು, ಇದರ ಬೆಲೆ 10 ಸಾವಿರದಿಂದ 10 ಲಕ್ಷ ರೂ. ಇದೆ. ಮಂಡ್ಯ ಜಿಲ್ಲೆಯ ಮಳವಳ್ಳಿ ತಾಲೂಕಿನ ಬಂಡೂರು ಕುರಿಗಳ ಹಿಂಡು ವಸ್ತು ಪ್ರದರ್ಶನದ ಆಕರ್ಷಣೆಯ ಕೇಂದ್ರ ಬಿಂದುವಾಗಿದೆ.

ಉಳಿದಂತೆ ವಿವಿಧ ತಳಿಯ ಟಗರು, ಮಲೆನಾಡ್ ಗಿಡ್ಡ, ಒಂಗೋಲಾ, ಗಿರ್‌ಹಳ್ಳಿಕಾರ್ ಹಸುಗಳು ಮತ್ತು ಮೈಸೂರು ಕೋಳಿ, ಗಿನಿ ಕೋಳಿ, ಅಸೀಲ್, ಖಡಕ್ನಾತ್, ಗೌಜಹಕ್ಕಿ ಪ್ರದರ್ಶನದಲ್ಲಿ ಗಮನ ಸೆಳೆಯುತ್ತಿವೆ.

ಸಗಣಿ ಉತ್ಪನ್ನಗಳು : ಮೈಸೂರಿನ ಕೆ.ಆರ್. ನಗರ ತಾಲೂಕಿನ ಹಂಪಾಪುರ ಗ್ರಾಮದ ಮಧುಸೂಧನ್ ರಾವ್ ಎಂಬ ರೈತರೊಬ್ಬರು ಗೋವಿನ ಸಗಣಿಯನ್ನು ಬಳಸಿಕೊಂಡು ಸಗಣಿ ದೀಪ, ಸಗಣಿ ಸೌದೆ, ಸಗಣಿ ಸಾಬೂನು, ಸಗಣಿ ಧೂಪ ಸೇರಿದಂತೆ ಅನೇಕ ಉತ್ಪನ್ನಗಳನ್ನು ಮಾಡಿದ್ದು, ವಸ್ತುಪ್ರದರ್ಶನದಲ್ಲಿ ಗಮನ ಸೆಳೆಯುತ್ತಿದೆ. ಗೋವು ಹುಟ್ಟಿನಿಂದ ಸಾವಿನ ವರೆಗೂ ಹಾಗೇ ಸಾವಿನ ನಂತರ ಉಪಯುಕ್ತವಾಗಿದ್ದು, ಈ ಹಿಂದೆ ಹಿರಿಯರು ಸಗಣಿಯ ಬೆರಣಿ ಬಳಸಿ ಅಡುಗೆ ಮಾಡುತ್ತಿದ್ದರು. ಋಷಿ ಮುನಿಗಳು ಅದನ್ನು ಆರೋಗ್ಯ ಮತ್ತು ಸೌಂದರ್ಯವರ್ಧಕವಾಗಿ ಬಳಕೆ ಮಾಡುತ್ತಿದ್ದರು. ಈ ಹಿನ್ನೆಲೆಯಲ್ಲಿ ಸಗಣಿಯಿಂದ ಉತ್ಪನಗಳನ್ನು ಮಾಡಲಾಗುತ್ತಿದೆ. ಇದಕ್ಕೆ ಉತ್ತಮ ಬೇಡಿಕೆ ಇದೆ ಎಂದು ಮಾಲೀಕರು 'ಮೈಸೂರು ಮಿತ್ರ'ನಿಗೆ ತಿಳಿಸಿದರು.

ಇಂದು ಹಾಲು ಕರೆಯುವ ಸ್ಪರ್ಧೆ

ರೈತ ದಸರಾ ಅಂಗವಾಗಿ ನಗರದ ಜೆ.ಕೆ. ಮೈದಾನದಲ್ಲಿ ಅ.21ರಂದು ಬೆಳಗ್ಗೆ 6.30ಕ್ಕೆ ರಾಜ್ಯಮಟ್ಟದ ಹಾಲು ಕರೆಯುವ ಸ್ಪರ್ಧೆ ಮತ್ತು ಬಹುಮಾನ ವಿತರಣಾ ಕಾರ್ಯಕ್ರಮ ಆಯೋಜಿಸಲಾಗಿದ್ದು, ಪಶುಸಂಗೋಪನಾ ಮತ್ತು ರೇಷ್ಮೆ ಸಚಿವ ಕೆ.ವೆಂಕಟೇಶ್ ಬಹುಮಾನ ವಿತರಿಸಲಿದ್ದಾರೆ. ಶಾಸಕ ಕೆ.ಹರೀಶ್‌ಗೌಡ ಅಧ್ಯಕ್ಷತೆ ವಹಿಸಲಿದ್ದಾರೆ.



ಉದ್ದ ಕಿವಿಯ ಮೇಕೆ

ಪ್ರಗತಿ ಪರ ರೈತರಿಗೆ ಸನ್ಮಾನ

ರೈತ ದಸರಾದಲ್ಲಿ ಜಿಲ್ಲೆಯ ಪ್ರಗತಿಪರ ರೈತ, ರೈತ ಮಹಿಳೆಯರನ್ನು ಸನ್ಮಾನಿಸಲಾಯಿತು.

ಕೃಷಿ ವಿಭಾಗ : ನಂಜನಗೂಡು ತಾಲೂಕಿನ ಎನ್.ಸುನೀಲ್‌ಕುಮಾರ್, ಕೆ.ಆರ್.ನಗರ ತಾಲೂಕಿನ ಕನ್ನಿಕ ಪರಮೇಶ್ವರಿ, ಟಿ.ನರಸೀಪುರ ತಾಲೂಕಿನ ಬಿ.ಸುಂದರಸ್ವಾಮಿ

ತೋಟಗಾರಿಕೆ : ಹುಣಸೂರಿನ ಹೆಚ್.ಎಸ್.ಶಿವಣ್ಣ, ವರುಣಾ ಹೋಬಳಿಯ ಬಿ.ಸಿ. ವಸಂತ, ನಂಜನಗೂಡಿನ ಸಿ.ಪಿ. ಚಿಕ್ಕಬುದ್ದಿ

ಪಶುಸಂಗೋಪನೆ : ಮೈಸೂರು ತಾಲೂಕಿನ ಜಗದೀಶ್, ಪಿರಿಯಾಪಟ್ಟಣ ತಾಲೂಕಿನ ದೀಪಕ್ ನಾರಾಯಣ್, ಹೆಚ್.ಡಿ.ಕೋಟೆಯ ರಾಯಪ್ಪ

ರೇಷ್ಮೆ : ಕೆ.ಆರ್.ನಗರ ತಾಲೂಕಿನ ಕಾಂತರಾಜು, ಮೈಸೂರು ತಾಲೂಕಿನ ರಾಮು, ಪಿರಿಯಾಪಟ್ಟಣ ತಾಲೂಕಿನ ಭಾಗ್ಯ

ಮೀನುಗಾರಿಕೆ : ಹೆಚ್.ಡಿ.ಕೋಟೆ ತಾಲೂಕಿನ ಚಿಕ್ಕಣ್ಣ, ಬಸವೇಗೌಡ, ಕೆ.ಎಂ.ಚಂದ್ರು

ಅರಣ್ಯ : ಹೆಚ್.ಬಿ.ಗಣೇಶ್ ಪ್ರಸಾದ್, ಕೆ.ಜಿ.ಗೋಪಾಲಯ್ಯ, ಕರಿಯಪ್ಪ,

ಕಾರ್ಪೊರೇಟ್ ಕಂಪನಿಗಳು ನಮ್ಮ ಅಡುಗೆ ಮನೆಗೆ ಬೀಗ ಹಾಕಿಸುತ್ತಿದ್ದಾರೆ

ರೈತ ದಸರಾದಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಸಿರಿಧಾನ್ಯ ತಜ್ಞ ಖಾದರ್ ಮಾತನಾಡಿ, ಕಾರ್ಪೊರೇಟ್ ಕಂಪನಿಗಳು ನಮ್ಮ ಅಡುಗೆ ಮನೆಗೆ ಬೀಗ ಹಾಕಿಸುತ್ತಿದ್ದಾರೆ. ಆಹಾರದ ವೈಜ್ಞಾನಿಕ ವ್ಯವಸ್ಥೆಯನ್ನು ಈ ಕಾರ್ಪೊರೇಟ್ ಕಂಪನಿಗಳು ನಿರ್ಮೂಲನೆ ಮಾಡುತ್ತಿವೆ. ಹೋಟೆಲ್ ಊಟ ಮಾಡುತ್ತಿರುವುದರಿಂದ ರೋಗಿಗಳ ಸಂಖ್ಯೆ ಹೆಚ್ಚಾಗುತ್ತಿದ್ದು, ಇದರಿಂದ ಆಸ್ಪತ್ರೆಗಳ ಸಂಖ್ಯೆ ದ್ವಿಗುಣಗೊಳ್ಳುತ್ತಿದೆ ಎಂದು ವಿಷಾದ ವ್ಯಕ್ತಪಡಿಸಿದರು.

ಸಮಾಜ ರೋಗಮುಕ್ತವಾಗಬೇಕಾದರೆ ಸಿರಿದಾನ್ಯಗಳನ್ನು ಸೇವಿಸಬೇಕು. ಸಿರಿಧಾನ್ಯವನ್ನು ಸೇವಿಸುತ್ತಾ ಬಂದರೆ ದೇಹದ ಕಲ್ಮಶಗಳು ಹೊರಬಂದು ಸದೃಢ ಆರೋಗ್ಯವಂತ ವ್ಯಕ್ತಿಯನ್ನಾಗಿ ಮಾಡುತ್ತದೆ.

ಸಿರಿಧಾನ್ಯ ಯಾವುದೇ ಕಾರಣಕ್ಕೂ ಆರೋಗ್ಯದ ಮೇಲೆ ಕೆಟ್ಟ ಪರಿಣಾಮ ಬೀರಲ್ಲ. ಸಿರಿದಾನ್ಯಗಳನ್ನು ಮನುಷ್ಯರು ಸಾವಿರಾರು ವರ್ಷಗಳಿಂದ ಸೇವಿಸುತ್ತ ಬರುತ್ತಿದ್ದೆವು. ಆದರೆ ಇಂದಿನ ಕೆಲವು ಕಾರ್ಪೊರೇಟ್ ಕಂಪನಿಗಳು ಇಂತಹ ಸಿರಿಧಾನ್ಯಗಳ ಮಹತ್ವವನ್ನು ಜನರಿಗೆ ತಿಳಿಸುವ ಪ್ರಯತ್ನ ಮಾಡುತ್ತಿಲ್ಲ. ಸಿರಿಧಾನ್ಯ ಸೇವಿಸುತ್ತಾ ಬರುತ್ತಿರುವ ಸಾವಿರಾರು ಬುದ್ಧಿಮಾಂದ್ಯ ಮಕ್ಕಳು ಗುಣಮುಖರಾಗಿ ಬರುತ್ತಿದ್ದಾರೆ. ಇದು ಸಿರಿಧಾನ್ಯದ ಶಕ್ತಿ ಎಂದು ತಿಳಿಸಿದರು.

ನೂರು ಮಂದಿಗೆ ಉದ್ಯೋಗ ನೀಡುವ ಶಕ್ತಿ ರೈತರಿಗಿದೆ

ಒಬ್ಬ ರೈತನನ್ನು ಪ್ರೋತ್ಸಾಹಿಸಿದರೆ, ನೂರಾರು ಮಂದಿಗೆ ಉದ್ಯೋಗ ನೀಡುವ ಶಕ್ತಿ ಆತನಿಗಿದೆ ಎಂದು ಕೃಷಿ ಸಚಿವ ಎನ್.ಚಲುವರಾಯ ಸ್ವಾಮಿ ತಿಳಿಸಿದರು.

ರೈತ ದಸರಾ ಅಂಗವಾಗಿ ನಗರದ ಜೆಕೆಮೈದಾನದ ಐಎಂಎಂಸಿಆರ್ ಸಭಾಂಗಣದಲ್ಲಿ ಆಯೋಜಿಸಿದ್ದ ಪ್ರಗತಿ ಪರ ರೈತರ ಸನ್ಮಾನ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಕೃಷಿ ವಿವಿ ಮತ್ತು ಸರ್ಕಾರಕ್ಕಿಂತಲೂ ರೈತರು ತಂತ್ರಜ್ಞಾನದಲ್ಲಿ ಮುಂದಿದ್ದಾರೆ. ಅದನ್ನು ನೋಡಿದರೆ ಸಂತಸವಾಗುತ್ತಿದೆ. ದೇಶದಲ್ಲಿ ಶೇ.80ಕ್ಕೂ ಅಧಿಕ ಮಂದಿ ಕೃಷಿಯನ್ನು ನಂಬಿ ಜೀವನ ನಡೆಸುತ್ತಿದ್ದಾರೆ. ಆದರೆ, ಅದಕ್ಕೆ ಪ್ರಾಮುಖ್ಯತೆ ನೀಡುತ್ತಿಲ್ಲ. ಒಬ್ಬ ರೈತನಿಗೆ ಪ್ರೋತ್ಸಾಹ ನೀಡಿದರೆ, ನೂರು ಮಂದಿಗೆ ಉದ್ಯೋಗ ನೀಡುತ್ತಾನೆ, ಆ ಶಕ್ತಿ ರೈತನಿಗಿದೆ. ರೈತರಿಗೆ ಯಾವುದೇ ಸಹಕಾರ ಬೇಕಾದರೂ ನೀಡುತ್ತೇವೆ ಎಂದು ಮುಖ್ಯಮಂತ್ರಿಗಳು ಈಗಾಗಲೇ ಭರವಸೆ ನೀಡಿದ್ದಾರೆ ಎಂದರು.

ಕೇಂದ್ರದ ತಾತ್ಸಾರ : ಕರ್ನಾಟಕದ ವಿರುದ್ಧ ಕೇಂದ್ರ ಸರ್ಕಾರ ತಾರತಮ್ಯ ತೋರುತ್ತಿದ್ದರೂ, ನಮ್ಮ ಸರ್ಕಾರ ಕಾವೇರಿ ವಿಚಾರದಲ್ಲಿ ರೈತರ ಪರ ನಿಂತಿದ್ದೇವೆ. ನ್ಯಾಯಾಲಯ ಮತ್ತು ಕಾವೇರಿ ಮಂಡಳಿಗೆ ಗೌರವ ನೀಡಿದ್ದೇವೆ. ಹಾಗೇ ಕುಡಿಯುವ ನೀರಿನ ಬಗ್ಗೆ ಬದ್ಧತೆ ತೋರಿದ್ದೇವೆ. ಆದರೆ, ಅವರಂತೆ ನಾವು ತಾತ್ಸಾರ ತೋರಿದ್ದರೆ. ರಾಜ್ಯ ಮತ್ತಷ್ಟು ಸಂಕಷ್ಟಕ್ಕೆ ತುತ್ತಾಗುತ್ತಿತು ಎಂದರು.

ರಾಜ್ಯದಲ್ಲಿ 216 ತಾಲೂಕುಗಳು ಬರಗಾಲವನ್ನು ಎದುರಿಸುತ್ತಿದೆ. ಈ ನಡುವೇ ರಾಜ್ಯ ಸರ್ಕಾರವು ಎರಡು ಹಂತದಲ್ಲಿ ಕೇಂದ್ರ ಸರ್ಕಾರಕ್ಕೆ 5020 ಕೋಟಿ ರೂ. ವಿಶೇಷ ಪರಿಹಾರ ನೀಡುವಂತೆ ಮನವಿ ಮಾಡಲಾಗಿದೆ ಎಂದರು.

ಕಾವೇರಿ ಗಲಾಟೆ ವಿಚಾರದಲ್ಲಿ ಮೂರು ಬಾರಿ ಸರ್ವಪಕ್ಷಗಳ ಸಭೆಯನ್ನು ನಡೆಸಲಾಗಿದೆ. ಕಳೆದ ಎರಡು ತಿಂಗಳಿನಿಂದ ಪ್ರಧಾನಮಂತ್ರಿಗಳ ಭೇಟಿಗೆ ಅವಕಾಶ ಕೇಳುತ್ತಿದ್ದು, ಈವರೆಗೂ ಅವರಿಂದ ಯಾವುದೇ ಪ್ರತಿಕ್ರಿಯೆ ಬರುತ್ತಿಲ್ಲ. ರಾಜ್ಯದಲ್ಲಿ 27 ಮಂದಿ ಸಂಸದರಿದ್ದು, ಕಾವೇರಿ ವಿಚಾರದಲ್ಲಿ ಆಸಕ್ತಿ ಇಲ್ಲ. ಕೇವಲ ಬಿಜೆಪಿ–ಜೆಡಿಎಸ್ ಮೈತ್ರಿ ಮಾಡಿಕೊಳ್ಳಲು ಆಸಕ್ತಿ ತೋರುತ್ತಿದ್ದಾರೆ ಎಂದು ಬೇಸರಿಸಿದರು.

ಪಶುಸಂಗೋಪನಾ ಹಾಗೂ ರೇಷ್ಮೆ ಇಲಾಖೆಯ ಸಚಿವ ಕೆ.ವೆಂಕಟೇಶ್ ಮಾತನಾಡಿ ಸರ್ಕಾರ ಹೈನುಗಾರಿಗೆ ಪ್ರೋತ್ಸಾಹ ನೀಡುತ್ತಾ ಬಂದಿದೆ ಹಳೆ ಪದ್ಧತಿಯನ್ನೇ ಅನುಸರಿಸುತ್ತಿದ್ದರೆ ಹೈನುಗಾರಿಕೆಯಲ್ಲಾಗಲಿ, ಕೃಷಿಯಲ್ಲಾಗಲಿ ಪ್ರಗತಿ ಸಾಧಿಸುವುದು ಕಷ್ಟವಾಗುತ್ತದೆ. ಆಧುನಕತೆಗೆ ಬದಲಾಗಬೇಕು ಎಂದು ರೈತರಿಗೆ ಸಲಹೆ ನೀಡಿದರು.



ಸಗಣಿಯ ದೀಪ, ಸೌದೆ, ಸಾಬೂನು, ಧೂಪ ಸೇರಿದಂತೆ ಇನ್ನಿತರ ಸಗಣಿ ಉತ್ಪನ್ನಗಳು







ನಾಳೆ ದಸರಾ 'ವಿಶೇಷ' ಚಿತ್ರ ಪ್ರದರ್ಶನ



ಮೈಸೂರು, ಅ.20(ಜಿಎ)– ಮನಸ್ಸು ಮಾಡಿದರೆ ಮಗುವೊಂದು ಎಲ್ಲವನ್ನೂ ಸಾಧಿಸಬಹುದು ಎಂಬ ಸಂದೇಶ ನೀಡುವ 'ವಿಶೇಷ' ಎಂಬ ಶೀರ್ಷಿಕೆಯ ಸಿನಿಮಾ ದಸರಾ ಚಲಚಿತ್ರೋತ್ಸವದಲ್ಲಿ ಅ.22ರಂದು ಬೆಳಿಗ್ಗೆ 10.15ಕ್ಕೆ ಐನಾಕ್ಸ್ ಚಿತ್ರಮಂದಿರಲ್ಲಿ ಪ್ರದರ್ಶನಗೊಳಲಿದೆ ಎಂದು ಚಿತ್ರದ ನಿರ್ಮಾಪಕ ಬಿ.ಎಂ.ಶ್ರೀನಿವಾಸ್ ತಿಳಿಸಿದರು.

ನಗರದಲ್ಲಿ ಪತ್ರಕರ್ತರ ಭವನದಲ್ಲಿ ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮಕ್ಕಳಲ್ಲಿನ ಪ್ರತಿಭೆ ಅನಾವರಣಕ್ಕೆ ಸಮಾಜ ನೀಡಬೇಕಾದ ಸೂಕ್ತ ಅವಕಾಶದ ಕುರಿತು ಮಾತನಾಡುವ ಸದಭಿರುಚಿಯ ಚಿತ್ರ ಇದಾಗಿದ್ದು, ಪಿ.ಎಂ.ಸನ್ಸ್ ಪ್ರೊಡಕ್ಷನ್ಸ್‌ನಿಂದ ಚಿತ್ರ ನಿರ್ಮಿಸಿದ್ದೇವೆ. ಎನ್.ಜೆ.ಅಕ್ಷಯ್, ಶ್ರೀನಿವಾಸ ಎಸ್.ಗುರ್ಜಾಲ್ ಅವರ ನಿರ್ದೇಶನವಿದ್ದು, ನಾಲ್ಕು ಹಾಡುಗಳಿವೆ. ಬಾಲಕ ಶುಶ್ರುತ್ ಶ್ರೇಷ್ಠ ನಾಯಕನಾಗಿ ಅಭಿನಯಿಸಿದ್ದಾರೆ. ಎಲ್ಲರೂ ಪ್ರೋತ್ಸಾಹಿಸಿ ಎಂದರು.

ಸುದ್ದಿಗೋಷ್ಠಿಯಲ್ಲಿ ಚಿತ್ರದ ನಿರ್ಮಾಣ ನಿರ್ವಾಹಕ ಬೆ.ಎಂ.ವೆಂಕಟರಮಣ, ಸಾಹಿತ್ಯ ರಚನೆಕಾರ ನಾಗನಾಥ ಮಾಧವರಾವ್ ಜೋಶಿ, ನಟಿ ಯಶೋಧಾ ಉಪಸ್ಥಿತರಿದ್ದರು.

ತ.ನಾಡಿಗೆ ಕಾವೇರಿ ನೀರು ; ಖಾಲಿ ತಟ್ಟೆ, ಲೋಟ ಹಿಡಿದು ಪ್ರತಿಭಟನೆ



ಮೈಸೂರು, ಅ.20(ಜಿಎ)–ತಮಿಳುನಾಡಿಗೆ ಕಾವೇರಿ ನೀರಿ ಹರಿಸುತ್ತಿರುವುದನ್ನು ಖಂಡಿಸಿ, ಮೈಸೂರು ಜಿಲ್ಲಾ ಕನ್ನಡ ಚಳುವಳಿಗಾರರ ಸಂಘದ ಪದಾಧಿಕಾರಿಗಳು ನಗರ ಕಾಡಾ ಕಚೇರಿ ಮುಂಭಾಗ ಖಾಲಿ ತಟ್ಟೆ, ಲೋಟ ಹಿಡಿದು ವಿಭಿನ್ನವಾಗಿ ಪ್ರತಿಭಟನೆ ನಡೆಸಿದರು.

ಕಾವೇರಿ ಜಲಾನಯನ ಪ್ರದೇಶದಲ್ಲಿ ಮಳೆಯ ಕೊರತೆಯಿಂದ ಜಲಾಶಯಗಳಲ್ಲಿ ನೀರು ಖಾಲಿಯಾಗುತ್ತಿದ್ದು, ಈ ಸಂದರ್ಭದಲ್ಲಿ ತಮಿಳುನಾಡಿಗೆ ಕಾವೇರಿ, ಕಪಿಲಾದಿಂದ ಪ್ರತಿದಿನ 3 ಸಾವಿರ ಕ್ಯೂಸೆಕ್ಸ್ ನೀರನ್ನು ಅ.31ರವರೆಗೂ ನೀರು ಹರಿಸುವಂತೆ ಕಾವೇರಿ ಪ್ರಾಧಿಕಾರವು ಆದೇಶ ನೀಡಿರುವುದು ಖಂಡನೀಯ. ಮತ್ತೊಂದೆಡೆ ಕಬಿನಿ ಜಲಾಶಯದಿಂದ ನಿತ್ಯವೂ 500 ರಿಂದ 700 ಕ್ಯೂಸೆಕ್ಸ್ ನೀರು ತಮಿಳುನಾಡಿಗೆ ಹರಿಸಲಾಗುತ್ತಿದೆ ಕೂಡಲೇ ಅದನ್ನು ನಿಲ್ಲಿಸಬೇಕೆಂದು ಆಗ್ರಹಿಸಿದರು.

ಪ್ರತಿಭಟನೆಯಲ್ಲಿ ಸಂಘದ ಅಧ್ಯಕ್ಷ ಬಿ.ವಿ.ಶಿವಶಂಕರ್, ಹರದನಹಳ್ಳಿ ಬಸವರಾಜು, ಕೆಂಪೇಗೌಡ, ಸೋಗಳ್ಳಿ ತುಂಗಾ, ನಾಗಮ್ಮ, ಜಯಮ್ಮ, ಪೂರ್ಣಿಮಾ ಸೇರಿದಂತೆ ಮತ್ತಿತರರು ಪಾಲ್ಗೊಂಡಿದರು.

ಅ.25, ತೋಟಗಾರಿಕೆ ಪಿತಾಮಹ ಡಾ. ಮರೀಗೌಡರ ಪ್ರತಿಮೆ ಅನಾವರಣ

ಮೈಸೂರು, ಅ.20– ಜಿಲ್ಲಾ ಪಂಚಾಯತ್, ತೋಟಗಾರಿಕೆ ಇಲಾಖೆ ಮತ್ತು ಮೈಸೂರು ಹಾಗೂ ಜಿಲ್ಲಾ ತೋಟಗಾರಿಕೆ ಸಂಘದ ವತಿಯಿಂದ ಅಕ್ಟೋಬರ್ 25 ಮಧ್ಯಾಹ್ನ 1.30ಕ್ಕೆ ನಗರದ ಕರ್ಜನ್ ಪಾರ್ಕ್‌ನಲ್ಲಿ ತೋಟಗಾರಿಕೆ ಪಿತಾಮಹರಾದ ಡಾ. ಎಂ.ಹೆಚ್. ಮರೀಗೌಡರ ಪ್ರತಿಮೆ ಅನಾವರಣ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ.

ಪ್ರತಿಮೆಯ ಅನಾವರಣವನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ನೇರವೇರಿಸಲಿದ್ದು, ಸಮಾಜ ಕಲ್ಯಾಣ ಸಚಿವರೂ ಆದ ಜಿಲ್ಲಾ ಉಸ್ತುವಾರಿ ಸಚಿವ ಡಾ. ಹೆಚ್.ಸಿ. ಮಹದೇವಪ್ಪ, ಪಶುಸಂಗೋಪನೆ ಮತ್ತು ರೇಷ್ಮೆ ಸಚಿವ ವೆಂಕಟೇಶ್, ಗಣಿ ಮತ್ತು ಭೂವಿಜ್ಞಾನ ಹಾಗೂ ತೋಟಗಾರಿಕೆ ಸಚಿವ ಎಸ್.ಎಸ್.ಮಲ್ಲಿಕಾರ್ಜುನ ಕಾರ್ಯಕ್ರಮದಲ್ಲಿ ಭಾಗವಹಿಸುವರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಕೃಷ್ಣರಾಜ ಕ್ಷೇತ್ರದ ಶಾಸಕ ಟಿ.ಎಸ್.ಶ್ರೀವತ್ಸ ವಹಿಸಲಿದ್ದು, ಮುಖ್ಯ ಅತಿಥಿಗಳಾಗಿ ಮಹಾಪೌರ ಶಿವಕುಮಾರ್, ಸಂಸದರಾದ ಪ್ರತಾಪ್ ಸಿಂಹ, ಶ್ರೀನಿವಾಸ್ ಪ್ರಸಾದ್, ಸುಮಲತಾ ಅಂಬರೀಶ್ ಭಾಗವಹಿಸಲಿದ್ದಾರೆ.

ಸಮಾರಂಭದ ಅತಿಥಿಗಳಾಗಿ ವಿಧಾನಸಭಾ ಶಾಸಕರಾದ ತನ್ವೀರ್ ಸೇಠ್, ಹರೀಶ್ ಗೌಡ, ಜಿ.ಟಿ.ದೇವೇಗೌಡ, ಅನಿಲ್ ಕುಮಾರ್.ಸಿ., ರವಿಶಂಕರ್ ಡಿ, ಜಿ.ಡಿ.ಹರೀಶ್‌ಗೌಡ, ದರ್ಶನ್ ಧ್ರುವನಾರಾಯಣ, ವಿಧಾನ ಪರಿಷತ್ತಿನ ಶಾಸಕರಾದ ಮರಿತಿಬ್ಬೆಗೌಡ, ಹೆಚ್.ವಿಶ್ವನಾಥ್, ಡಾ. ಡಿ.ತಿಮ್ಮಯ್ಯ, ಮಧು ಜಿ ಮಾದೇಗೌಡ, ಸಿ.ಎನ್. ಮಂಜೇಗೌಡ, ಉಪ ಮಹಾಪೌರರಾದ ಡಾ.ಜಿ ರೂಪ ಮತ್ತು ಮೈಸೂರು ಮಹಾನಗರ ಪಾಲಿಕೆ ವಾರ್ಡ್ ನಂ–51ರ ಸದಸ್ಯರಾದ ಬಿ.ವಿ ಮಂಜುನಾಥ್ ಭಾಗವಹಿಸುವರು ಎಂದು ತೋಟಗಾರಿಕೆ ಇಲಾಖೆ ಪ್ರಕಟಣೆಯಲ್ಲಿ ತಿಳಿಸಿದೆ.

ಅಂಬೇಡ್ಕರ್ ಕೊಟ್ಟ ಸಂವಿಧಾನ ಉಳಿಸಲು ದೇಶದಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಬರಲೇಬೇಕು

ಮೈಸೂರಲ್ಲಿ ಕಾರ್ಮಿಕ ಸಚಿವ ಸಂತೋಷ್ ಲಾಡ್



ಮೈಸೂರು,ಅ.20(ಪಿಎಂ)– ಸಂವಿಧಾನ ಉಳಿಯಲೇಬೇಕಾದರೆ ದೇಶದಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಬರಬೇಕಿದ್ದು, ಹೀಗಾಗಿ ಮುಂದಿನ ಲೋಕಸಭಾ ಚುನಾವಣೆಯಲ್ಲಿ ಕರ್ನಾಟಕದಲ್ಲಿ ಹೆಚ್ಚಿನ ಸ್ಥಾನಗಳನ್ನು ಕಾಂಗ್ರೆಸ್ ಗೆಲ್ಲಬೇಕಿದೆ ಎಂದು ಕಾರ್ಮಿಕ ಸಚಿವ ಸಂತೋಷ್ ಲಾಡ್ ಹೇಳಿದರು.

ಕಾರ್ಮಿಕ ಕಲ್ಯಾಣ ಖಾತೆ ಸಚಿವರಾದ ಬಳಿಕ ಪ್ರಥಮ ಬಾರಿಗೆ ಮೈಸೂರಿನ ಕಾಂಗ್ರೆಸ್ ಕಚೇರಿಗೆ ಶುಕ್ರವಾರ ಭೇಟಿ ನೀಡಿದ ಅವರು, ಇದೇ ವೇಳೆ ಪಕ್ಷದ ಮುಖಂಡರು ಹಾಗೂ ಕಾರ್ಯಕರ್ತರನ್ನು ಉದ್ದೇಶಿಸಿ ಮಾತನಾಡಿದರು.

ಮುಂದಿನ ಲೋಕಸಭಾ ಚುನಾವಣೆಯಲ್ಲಿ ರಾಜ್ಯದಲ್ಲಿ ಹೆಚ್ಚು ಸ್ಥಾನಗಳಲ್ಲಿ ಕಾಂಗ್ರೆಸ್ ಗೆಲ್ಲಿಸುವ ನಿಟ್ಟಿನಲ್ಲಿ ಪಕ್ಷದ ಮುಖಂಡರು ಮತ್ತು ಕಾರ್ಯಕರ್ತರು ಸಂಪೂರ್ಣವಾಗಿ ತೊಡಗಿಸಿಕೊಳ್ಳಬೇಕಿದೆ.

ಈಗಾಗಲೇ ಲೋಕಸಭಾ ಚುನಾವಣೆ ಹಿನ್ನೆಲೆಯಲ್ಲಿ ಬಿಜೆಪಿ ಮತ್ತು ಆರ್‌ಎಸ್‌ಎಸ್ ಕುತಂತ್ರದ ಹೇಳಿಕೆಗಳನ್ನು ನೀಡಲು ಶುರು ಮಾಡಿವೆ ಎಂದು ದೂರಿದರು.

ಡಾ.ಬಿ.ಆರ್.ಅಂಬೇಡ್ಕರ್ ಕೊಟ್ಟ 'ಹಿಂದೂ ಕೋಡ್ ಬಿಲ್' ಬಗ್ಗೆ ನಾವು ಗಟ್ಟಿಯಾಗಿ ಮಾತನಾಡಬೇಕು. ಏಕೆಂದರೆ ಇಡೀ ದೇಶದಲ್ಲಿ ಹಿಂದೂ ಸಮುದಾಯದ ಎಲ್ಲಾ ವರ್ಗದ ಮಹಿಳೆಯರಿಗೆ ಪಿತ್ರಾರ್ಜಿತ ಆಸ್ತಿಯಲ್ಲಿ ಹಕ್ಕು ದೊರೆತಿರುವುದೂ ಸೇರಿದಂತೆ ಮಹತ್ವದ ಹಕ್ಕುಗಳನ್ನು ಇದು ಕಲ್ಪಿಸಿಕೊಟ್ಟಿದೆ. ಇಂತಹ ಒಂದು ಬಿಲ್ ಕಾಯ್ದೆಯಾಗಿ ಜಾರಿಯಾಗಲು ಅಂಬೇಡ್ಕರ್ ಮತ್ತು ನೆಹರು ಕಾರಣರಾಗಿದ್ದು, ಅವರನ್ನು ನಾವು ಸ್ಮರಿಸಬೇಕು ಎಂದು ಹೇಳಿದರು.

ರಾಜ್ಯ ಕಾಂಗ್ರೆಸ್ ಸರ್ಕಾರದ ನೇತೃತ್ವ ವಹಿಸಿರುವ ಮುಖ್ಯಮಂತ್ರಿ ಸಿದ್ದರಾಮಯ್ಯನವರು ರಾಜ್ಯ ಬೊಕ್ಕಸದ 56 ಸಾವಿರ ಕೋಟಿ ಹಣವನ್ನು ರಾಜ್ಯದ ಬಡ ಜನತೆಯ ಶ್ರೇಯೋಭಿವೃದ್ಧಿಗೆ ವಿನಿಯೋಗಿಸುತ್ತಿದ್ದಾರೆ. ಸಿದ್ದರಾಮಯ್ಯ ಅವರು 14 ಬಜೆಟ್‌ಗಳನ್ನು ಮಂಡನೆ ಮಾಡಿದ್ದು, ತಮ್ಮ 13ನೇ ಬಜೆಟ್‌ನಲ್ಲಿ ಮೌಲ್ಯವರ್ಧಿತ ತೆರಿಗೆ (ವ್ಯಾಟ್) ಪರಿಪೂರ್ಣವಾಗಿ ಅರ್ಥೈಸಿ ಕೊಂಡು ಉತ್ತಮ ಕಾರ್ಯಕ್ರಮ ಮತ್ತು ಯೋಜನೆಗಳನ್ನು ಜಾರಿಗೊಳಿಸಿದರು ಎಂದರು.

ಸಿದ್ದರಾಮಯ್ಯನವರು ಜಾರಿಗೊಳಿಸಿದ ಜನಪರ ಯೋಜನೆಗಳು ಕೇವಲ ಈ ರಾಜ್ಯಕ್ಕೆ ಮಾತ್ರ ಸೀಮಿತವಾಗಿಲ್ಲ. ಅನೇಕ ರಾಜ್ಯ ಸರ್ಕಾರಗಳು ತಮ್ಮ ರಾಜ್ಯದಲ್ಲಿ ಇದೇ ಮಾದರಿಯ ಯೋಜನೆಗಳನ್ನು ಜಾರಿಗೊಳಿಸಿವೆ. 3 ಲಕ್ಷದವರೆಗೆ ಬಡ್ಡಿ ರಹಿತ ಸಾಲ ಕೊಡುವ ಸಿದ್ದರಾಮಯ್ಯನವರ ಕಾರ್ಯಕ್ರಮವನ್ನು ಗುಜರಾತ್ ಸರ್ಕಾರವೂ ತನ್ನ ರಾಜ್ಯದಲ್ಲಿ ಅನುಷ್ಠಾನ ಗೊಳಿಸಿದೆ. ಅನ್ನಭಾಗ್ಯ ಇಡೀ ದೇಶದಲ್ಲೇ ಮಾದರಿ ಯೋಜನೆಯಾಗಿದೆ ಎಂದು ತಿಳಿಸಿದರು.

ಪರಿಶಿಷ್ಟರ ಶ್ರೇಯೋಭಿವೃದ್ಧಿಗಾಗಿ ಎಸ್‌ಸಿಎಸ್‌ಪಿ–ಟಿಎಸ್‌ಪಿ ಯೋಜನೆಯಡಿ ನಮ್ಮ ಸರ್ಕಾರ 1 ಲಕ್ಷ ಕೋಟಿಗೂ ಹೆಚ್ಚು ಹಣ ಖರ್ಚು ಮಾಡಿದೆ. ಇಂತಹ ಹಲವು ಕಾರ್ಯಕ್ರಮಗಳು ಇಡೀ ದೇಶಕ್ಕೆ ಮಾದರಿಯಾಗಿದೆ. ಲಕ್ಷಾಂತರ ಕೋಟಿಯ ಬಡ ಕುಟುಂಬಗಳಿಗೆ ಅನುಕೂಲವಾಗುವಂತೆ ಕಾರ್ಯಕ್ರಮಗಳನ್ನು ಸಿದ್ದರಾಮಯ್ಯ ನೇತೃತ್ವದ ರಾಜ್ಯ ಕಾಂಗ್ರೆಸ್ ಸರ್ಕಾರ ನೀಡುತ್ತಿದೆ ಎಂದು ಹೇಳಿದರು.

ಖಾಸಗಿ ಕಾರ್ಯಕ್ರಮ ನಿಮಿತ್ತ ಮೈಸೂರಿಗೆ ಭೇಟಿ ನೀಡಿದ್ದ ಕಾರ್ಮಿಕ ಸಚಿವರನ್ನು ಇದೇ ವೇಳೆ ಪಕ್ಷದ ಮುಖಂಡರು ಹಾಗೂ ಕಾರ್ಯಕರ್ತರು ಹೂಗುಚ್ಛ ನೀಡಿ ಸ್ವಾಗತಿಸಿದರು. ಕಾಂಗ್ರೆಸ್ ಜಿಲ್ಲಾಧ್ಯಕ್ಷ ಡಾ.ಬಿ.ಜೆ.ವಿಜಯಕುಮಾರ್, ನಗರಾಧ್ಯಕ್ಷ ಆರ್.ಮೂರ್ತಿ, ಮಾಜಿ ಮೇಯರ್‌ಗಳಾದ ಚಿಕ್ಕಣ್ಣ, ಪುಷ್ಪಲತಾ ಚಿಕ್ಕಣ್ಣ, ಕಾಂಗ್ರೆಸ್ ಹಿಂದುಳಿದ ವರ್ಗಗಳ ನಗರಾಧ್ಯಕ್ಷ ಎನ್.ಆರ್.ನಾಗೇಶ್, ಮಾಧ್ಯಮ ವಕ್ತಾರ ಕೆ.ಮಹೇಶ್, ಪಕ್ಷದ ಮುಖಂಡ ಈಶ್ವರಚಕ್ಕಡಿ ಮತ್ತಿತರರು ಹಾಜರಿದ್ದರು.

ಎಟಿಎಂ ಸರ್ಕಾರವೆಂದು ಸಾಬೀತುಪಡಿಸಲಿ: ಸಂತೋಷ್ ಲಾಡ್ ಸವಾಲು

ಮೈಸೂರು,ಅ.20(ಪಿಎಂ)– ರಾಜ್ಯ ಕಾಂಗ್ರೆಸ್ ಸರ್ಕಾರ, ಎಟಿಎಂ ಸರ್ಕಾರ ಎಂದು ಬಿಜೆಪಿ ಟೀಕಿಸಿರುವ ಸಂಬಂಧ ಪ್ರತಿಕ್ರಿಯಿಸಿದ ಕಾರ್ಮಿಕ ಸಚಿವ ಸಂತೋಷ್ ಲಾಡ್, ತನಿಖೆ ಮಾಡುವಂತಹ ಏಜೆನ್ಸಿಗಳು ಅವರ ಕೇಂದ್ರ ಸರ್ಕಾರದ ಅಧೀನದಲ್ಲೇ ಇವೆ. ಹಾಗಾಗಿ ತನಿಖೆ ಮೂಲಕ ಎಟಿಎಂ ಸರ್ಕಾರ ಎಂಬುದನ್ನು ಸಾಬೀತು ಮಾಡಲಿ ಎಂದು ಸವಾಲು ಹಾಕಿದರು. 10 ವರ್ಷಗಳಿಂದ ಕೇಂದ್ರದಲ್ಲಿ ಅವರೇ ಆಡಳಿತ ಮಾಡುತ್ತಿದ್ದಾರೆ. ಈಗ ದೇಶದಲ್ಲಿ ಭ್ರಷ್ಟಾಚಾರ ತಾಂಡವವಾಡುತ್ತಿದೆ. ಈ 10 ವರ್ಷಗಳ ಅವಧಿಯಲ್ಲಿ ತನ್ನ ಅಧೀನದ ಸ್ವಾಯತ್ತ ತನಿಖಾ ಸಂಸ್ಥೆಗಳು, ಯಾವುದೇ ಒಬ್ಬ ಬಿಜೆಪಿ ಮುಖಂಡರ ಮೇಲೆ ದಾಳಿ ನಡೆಸಿಲ್ಲ ಎಂಬುದು ಸ್ಪಷ್ಟವಾಗುತ್ತದೆ. ಮುಂದಿನ ಲೋಕಸಭಾ ಚುನಾವಣೆ ಹಿನ್ನೆಲೆಯಲ್ಲಿ ಹೀಗೆ ಕಾಂಗ್ರೆಸ್ ವಿರುದ್ಧ ಇಲ್ಲಸಲ್ಲದ ಆರೋಪ ಮಾಡುವುದರಲ್ಲಿ ನಿರತರಾಗಿದ್ದಾರೆ ಎಂದು ಕಿಡಿಕಾರಿದರು.

ಇತ್ತೀಚೆಗೆ ಬೆಂಗಳೂರಿನಲ್ಲಿ ನಡೆದ ಐಟಿ ದಾಳಿ ವೇಳೆ ಸಿಕ್ಕ ಹಣದ ಸಂಬಂಧ ಮಾಜಿ ಸಿಎಂ ಹೆಚ್.ಡಿ. ಕುಮಾರಸ್ವಾಮಿ ಅವರ ಎಸ್‌ಎಸ್‌ಟಿ ಟ್ಯಾಕ್ಸ್ ಆರೋಪ ಸಂಬಂಧ ಪ್ರತಿಕ್ರಿಯಿಸಿ, ಅಲ್ಲಿ ಸಿಕ್ಕಿರುವ ಹಣದ ಬಗ್ಗೆ ಐಟಿ ಅಧಿಕಾರಿಗಳು ಮಾಹಿತಿ ನೀಡಬೇಕು ಎಂದರು.

ವರ್ಗಾವಣೆ ವಿಚಾರದಲ್ಲಿ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ವಿರುದ್ಧ ಸಚಿವ ಸತೀಶ್ ಜಾರಕಿಹೊಳಿ ಅಸಮಾಧಾನ ಹೊಂದಿದ್ದಾರೆ ಎನ್ನಲಾಗಿರುವ ಬಗ್ಗೆ ಪ್ರತಿಕ್ರಿಯಿಸಿ, ಇದನ್ನು ರಾಜಕೀಯ ವಿಶ್ಲೇಷಣೆಗೆ ಒಳಪಡಿಸುವ ಅಗತ್ಯವಿಲ್ಲ. ಇಂತಹ ದೊಡ್ಡ ಆಡಳಿತ ವ್ಯವಸ್ಥೆಯಲ್ಲಿ ವ್ಯತ್ಯಾಸಗಳು ಇರುವುದು ಸಹಜ. ಹೈಕಮಾಂಡ್ ಎಲ್ಲವನ್ನು ಸರಿಪಡಿಸಲಿದೆ ಎಂದು ಹೇಳಿದರು.

ಸಂಪುಟ ಪುನಾರಚನೆ ಆಗುತ್ತದೆ ಎಂಬ ಶಾಸಕ ಅಶೋಕ್ ಪಟ್ಟಣರ ಹೇಳಿಕೆ ಸಂಬಂಧ ಪ್ರತಿಕ್ರಿಯಿಸಿ, ಇದು ಮುಖ್ಯಮಂತ್ರಿಗಳು ಹಾಗೂ ಹೈಕಮಾಂಡ್‌ಗೆ ಬಿಟ್ಟ ವಿಚಾರ ಎಂದರು. ಹಳೇ ಪಿಂಚಣಿ ಯೋಜನೆ ಪುನಃ ಜಾರಿಗೊಳಿಸಬೇಕೆಂಬ ಬೇಡಿಕೆ ಸಂಬಂಧ ಪ್ರತಿಕ್ರಿಯಿಸಿ, ಯಾವ ರೀತಿ ಜಾರಿಗೊಳಿಸಬೇಕೆಂಬ ಬಗ್ಗೆ ಚಿಂತನೆ ನಡೆಯುತ್ತಿದೆ ಎಂದು ತಿಳಿಸಿದರು.

ಮಕ್ಕಳ ದಸರಾದಲ್ಲಿ ಮಕ್ಕಳದೇ ಕಾರು-ಬಾರು...

ನೂರಾರು ಮಕ್ಕಳು ಬಾಗಿ, ಮಕ್ಕಳ ಸಂತೆಯಲ್ಲಿ ಭರ್ಜರಿ ವ್ಯಾಪಾರ



ಮಡಿಕೇರಿ,ಅ.20– ಪುಟಾಣಿ ಮಕ್ಕಳ ಸುಪ್ತ ಪ್ರತಿಭೆಯ ಅನಾವರಣದೊಂದಿಗೆ, ಸಾಮಾಜಿಕ ವ್ಯವಹಾರಗಳ ಕುರಿತು ಅವರಲ್ಲಿ ಅರಿವು ಮೂಡಿಸುವ ಮಕ್ಕಳ ಸಂತೆ ಸೇರಿದಂತೆ ವೈವಿಧ್ಯಮಯ ಕಾರ್ಯಕ್ರಮಗಳೊಂದಿಗೆ 'ಮಕ್ಕಳ ದಸರಾ ಉತ್ಸವ'ದ ಸಂಭ್ರಮ ಗಾಂಧಿ ಮೈದಾನದ ಉದ್ದಗಲಕ್ಕೂ ವ್ಯಾಪಿಸಿ ಸಂತಸ ಮೂಡಿಸಿತು.

ಮಡಿಕೇರಿ ದಸರಾ ಸಮಿತಿ ವತಿಯಿಂದ ಮಡಿಕೇರಿ ರೋಟರಿ ಮಿಸ್ಟಿ ಹಿಲ್ಸ್ ಸಹಯೋಗದಲ್ಲಿ ನಡೆಸಿದ 'ಮಕ್ಕಳ ದಸರಾ ಉತ್ಸವ'ಕ್ಕೆ ಜಿಲ್ಲಾ ಪಂಚಾಯ್ತಿ ಮುಖ್ಯ ಕಾರ್ಯನಿರ್ವಹಣಾಧಿಕಾರಿ ವರ್ಣಿತ್ ನೇಗಿ ಅವರು ಛದ್ಮವೇಷಧಾರಿ ಪುಟಾಣಿ ಮಕ್ಕಳೊಂದಿಗೆ ಜ್ಯೋತಿ ಬೆಳಗುವ ಮೂಲಕ ಚಾಲನೆ ನೀಡಿದರು.

ಈ ಸಂದರ್ಭ ಮಾತನಾಡಿದ ಅವರು, ಮಕ್ಕಳಲ್ಲಿ ಸುಪ್ತವಾಗಿ ಅಡಗಿರುವ ಪ್ರತಿಭೆಯನ್ನು ಹೊರ ತರುವ ನಿಟ್ಟಿನ ಅತ್ಯಂತ ರಚನಾತ್ಮಕ ಮತ್ತು ಕ್ರಿಯಾಶೀಲವಾದ ಮಕ್ಕಳ ದಸರಾ ಆಯೋಜನೆ ಶ್ಲಾಘನೀಯ. ದಸರಾ ಉತ್ಸವದ ಸಂದರ್ಭ ಮತ್ತೆಲ್ಲೂ ಕಂಡು ಬಾರದ ಮಕ್ಕಳ ದಸರಾವನ್ನು ಮಡಿಕೇರಿಯಲ್ಲಿ ಆಯೋಜಿಸುವ ಮೂಲಕ ಮಕ್ಕಳಿಗೆ ವೇದಿಕೆ ಕಲ್ಪಿಸಿಕೊಡುವುತ್ತಿರುವುದು ಉತ್ತಮವಾದ ಪ್ರಯತ್ನ. ತಾನು ತನ್ನ ಸರ್ಕಾರಿ ಸೇವೆಯಲ್ಲಿ ಇತರೆಡೆಗಳಿಗೆ ತೆರಳಿದಲ್ಲಿ ಅಲ್ಲಿಯೂ ಇಂತಹ ಕಾರ್ಯಕ್ರಮಗಳ ಆಯೋಜನೆಗೆ ಪ್ರಯತ್ನಿಸುವುದಾಗಿ ಹೇಳಿದರು.

ಮಡಿಕೇರಿ ದಸರಾ ಸಮಿತಿ ಅಧ್ಯಕ್ಷರು ಹಾಗೂ ನಗರಸಭೆ ಅಧ್ಯಕ್ಷೆ ನೆರವಂಡ ಅನಿತಾ ಪೂವಯ್ಯ ಮಾತನಾಡಿ, ಕಳೆದ ಒಂದು ದಶಕದಿಂದ ಮಕ್ಕಳ ದಸರಾ ಉತ್ಸವವನ್ನು ಆಚರಿಸಲಾಗುತ್ತಿದ್ದು, ವರ್ಷದಿಂದ ವರ್ಷಕ್ಕೆ ಈ ಉತ್ಸವದಲ್ಲಿ ಪಾಲ್ಗೊಳ್ಳುವ ಮಕ್ಕಳ ಸಂಖ್ಯೆ ಹೆಚ್ಚುತ್ತಲೆ ಇದೆ. ವೈವಿಧ್ಯಮಯ ಕಾರ್ಯಕ್ರಮಳನ್ನು ಒಳಗೊಂಡ ಮಕ್ಕಳ ದಸರಾ ಮಕ್ಕಳ ಪ್ರತಿಭೆ ಅನಾವರಣಕ್ಕೆ ಸುವರ್ಣ ಅವಕಾಶವಾಗಿದೆ ಎಂದು ಮೆಚ್ಚುಗೆಯ ನುಡಿಗಳನ್ನಾಡಿದರು.

ಮಡಿಕೇರಿ ದಸರಾ ಸಮಿತಿ ಕಾರ್ಯಾಧ್ಯಕ್ಷ ಪ್ರಕಾಶ್ ಆಚಾರ್ಯ ಮಾತನಾಡಿ, ಮಡಿಕೇರಿ ದಸರಾ ಉತ್ಸವದ ಹಿನ್ನೆಲೆ ಮಕ್ಕಳ ದಸರಾ, ಜಾನಪದ ದಸರಾ, ಮಹಿಳಾ ದಸರಾ, ಯುವ ದಸರಾ, ಕ್ರೀಡಾ ದಸರಾಗಳನ್ನು ಆಯೋಜಿಸುವ ಮೂಲಕ ನಿಜ ಅರ್ಥದಲ್ಲಿ ದಸರಾವನ್ನು ಜನೋತ್ಸವವನ್ನಾಗಿ ಆಚರಿಸಲಾಗುತ್ತಿದೆ. ಮಕ್ಕಳ ದಸರಾ ಆಯೋಜಿಸುತ್ತಿರುವ ಮಡಿಕೇರಿ ರೋಟರಿ ಮಿಸ್ಟಿ ಹಿಲ್ಸ್ ಸಂಸ್ಥೆ ಮುಂಬರುವ ವರ್ಷಗಳಲ್ಲಿ ಈ ಕಾರ್ಯಕ್ರಮವನ್ನು ಮುಂದುವರಿಸಿಕೊಂಡು ಹೋಗುವಂತಾಗಲೆಂದು ಹಾರೈಸಿದರು.

ಮಡಿಕೇರಿ ಮಿಸ್ಟಿ ಹಿಲ್ಸ್ ಅಧ್ಯಕ್ಷ ಪ್ರಮೋದ್ ಕುಮಾರ್ ರೈ ಮಾತನಾಡಿ, ದಶಕದ ಹಿಂದೆ ಮಡಿಕೇರಿ ದಸರಾ ಉತ್ಸವದ ಸಂದರ್ಭ ಮಕ್ಕಳಿಗೆ ವೇದಿಕೆ ಒದಗಿಸುವ 'ಮಕ್ಕಳ ದಸರಾ'ವನ್ನು ಈಗಿನ ಸಾಂಸ್ಕೃತಿಕ ಸಮಿತಿ ಅಧ್ಯಕ್ಷರಾದ ಅನಿಲ್ ಎಚ್.ಟಿ. ಅವರು ಪ್ರಪ್ರಥಮ ಬಾರಿಗೆ ರೂಪಿಸಿದ್ದನ್ನು ಸ್ಮರಿಸಿಕೊಂಡರು. ರೋಟರಿ ಸಹಾಯಕ ರಾಜ್ಯಪಾಲ ದೇವಣಿರ ತಿಲಕ್ ಕಾರ್ಯಕ್ರಮಕ್ಕೆ ಶುಭ ಹಾರೈಸಿದರು. ವೇದಿಕೆಯಲ್ಲಿ ರೋಟರಿ ವಲಯ ಸೇನಾನಿ ಎಸ್.ಎಸ್. ಸಂಪತ್ ಕುಮಾರ್, ಮಡಿಕೇರಿ ದಸರಾ ವೇದಿಕೆ ಸಮಿತಿ ಅಧ್ಯಕ್ಷೆ ಕನ್ನಂಡ ಕವಿತ, ದಸರಾ ಸಮಿತಿ ಖಜಾಂಜಿ ಅರುಣ್ ಶೆಟ್ಟಿ ಮೊದಲಾದವರಿದ್ದರು.



ದಸರಾದಲ್ಲಿ ಮಕ್ಕಳ ಕಲರವ: ಮಕ್ಕಳ ದಸರಾ ಅಂಗವಾಗಿ ಆಯೋಜಿತ ವಿವಿಧ ಕಾರ್ಯಕ್ರಮಗಳಲ್ಲಿ 600ಕ್ಕೂ ಹೆಚ್ಚು ಪುಟಾಣಿಗಳು ಪಾಲ್ಗೊಂಡು ತಮ್ಮ ಪ್ರತಿಭಾ ಪ್ರದರ್ಶನ ಮಾಡುವ ಮೂಲಕ ಗಮನ ಸೆಳೆದರು. ವಾರದ ಸಂತೆ ಮಾರುಕಟ್ಟೆಯನ್ನು ಮೀರಿಸುವಂತೆ ನಡೆದ ಮಕ್ಕಳ ಸಂತೆಯಲ್ಲಿ ವಿವಿಧ ಬಗೆಯ ಸೊಪ್ಪು ತರಕಾರಿ, ಹಣ್ಣು ಹಂಪಲನ್ನು ಮಕ್ಕಳು ವ್ಯಾಪಾರ ಮಾಡುವ ಮೂಲಕ ಗಮನ ಸೆಳೆದರು.

ಗ್ರಾಹಕರನ್ನು ಸೆಳೆಯುವ ಅವರ ಪ್ರಯತ್ನ, ಹಣ ಪಡೆದು ಲೆಕ್ಕವಿಡುವ ಧಾವಂತ ಎಲ್ಲವೂ ಮುದ ನೀಡಿತು. ಮಸಾಲೆ ಪೂರಿ, ಜ್ಯೂಸ್, ಕುರುಕಲು ತಿಂಡಿಗಳು ಏನುಂಟು ಏನಿಲ್ಲ ಎನ್ನುವ ಮಾತೆ ಇಲ್ಲದಂತೆ ಎಲ್ಲವೂ ಮಕ್ಕಳ ಸಂತೆಯ ಭಾಗವಾಗಿದ್ದುದು ವಿಶೇಷವಾಗಿತ್ತು. ಪೌರಾಣಿಕ ಪಾತ್ರಗಳು ಸೇರಿದಂತೆ ಯೋಧರು, ಮಹಾ ಪುರುಷರ ವೇಷ ತೊಟ್ಟ ಪುಟಾಣಿಗಳ ಛದ್ಮ ವೇಷ ಸ್ಪರ್ಧೆ ಅತ್ಯಂತ ಸೊಗಸಾಗಿ ಮೂಡಿಬಂತು. ಕ್ಲೇ ಮಾಡೆಲಿಂಗ್, ಮಕ್ಕಳ ಮಂಟಪ ಕುತೂಹಲಕಾರಿಯಾಗಿತ್ತಲ್ಲದೇ, ಭವಿಷ್ಯದ ದಶ ಮಂಟಪಗಳನ್ನು ಹೊರಡಿಸುವ ರೂವಾರಿಗಳು ನಾವೇ ಎಂಬಂತೆ ಮಕ್ಕಳು ಮಂಟಪಗಳನ್ನು ಸಿದ್ದಪಡಿಸಿ ಪ್ರದರ್ಶನ ನೀಡಿದರು.

ಕೆ.ಎಸ್.ಭಗವಾನ್ ವಿರುದ್ಧ ಒಕ್ಕಲಿಗ ಸಮಾಜದಿಂದ ಪ್ರತಿಭಟನೆ



ಮಡಿಕೇರಿ,ಅ.20– ಮಾನವ ಕುಲಕ್ಕೆ ಅನ್ನ ನೀಡುವ ಒಕ್ಕಲಿಗ ಸಮುದಾಯದ ಬಗ್ಗೆ ಪ್ರೊಫೆಸರ್ ಕೆ.ಎಸ್.ಭಗವಾನ್ ಅವರು ಆಕ್ಷೇಪಾರ್ಹ ಹೇಳಿಕೆ ನೀಡಿದ್ದಾರೆಂದು ಮಡಿಕೇರಿ ತಾಲೂಕು ಒಕ್ಕಲಿಗರ ಸಂಘದ ವತಿಯಿಂದ ನಗರದ ಜಿಲ್ಲಾಧಿಕಾರಿ ಕಚೇರಿ ಎದುರು ಪ್ರತಿಭಟನೆ ನಡೆಯಿತು.

ಪ್ರೊಫೆಸರ್ ಭಗವಾನ್ ವಿರುದ್ಧ ಘೋಷಣೆಗಳನ್ನು ಕೂಗಿ ಆಕ್ರೋಶ ವ್ಯಕ್ತಪಡಿಸಿದ ಪ್ರತಿಭಟನಾಕಾರರು, ಪ್ರೊಫೆಸರ್ ಭಗವಾನ್ ಅವರನ್ನು ಗಡಿಪಾರು ಮಾಡಬೇಕೆಂದು ಆಗ್ರಹಿಸಿದರು. ಈ ಸಂದರ್ಭ ಮಾತನಾಡಿದ ಜಿಲ್ಲಾ ಒಕ್ಕಲಿಗರ ಸಂಘದ ಕಾನೂನು ಸಲಹೆಗಾರರು, ವಕೀಲರು ಆಗಿರುವ ನಿರಂಜನ್ ಅವರು, ಸದಾ ವಿವಾದಾತ್ಮಕ ಹೇಳಿಕೆ ನೀಡುತ್ತಾ ಧರ್ಮಗಳು ಹಾಗೂ ಜಾತಿಗಳ ಮಧ್ಯೆ ವಿಷ ಬೀಜ ಬಿತ್ತುತ್ತ ಸಮಾಜದ ಸ್ವಾಸ್ಥ ಕೆಡಿಸುತ್ತಿರುವ ಇಂತಹ ವ್ಯಕ್ತಿಗಳನ್ನು ರಾಜ್ಯದಿಂದಲೇ ಗಡಿಪಾರು ಮಾಡಬೇಕೆಂದು ಆಗ್ರಹಿಸಿದರು. ಬಳಿಕ ಅಪರ ಜಿಲ್ಲಾಧಿಕಾರಿಗಳ ಮೂಲಕ ಸರ್ಕಾರಕ್ಕೆ ಪ್ರತಿಭಟನಾ ಮನವಿ ಸಲ್ಲಿಸಲಾಯಿತು. ಮಡಿಕೇರಿ ತಾಲೂಕು ಸಂಘದ ಅಧ್ಯಕ್ಷ ಮೋಹನ್, ಪದಾಧಿಕಾರಿಗಳಾದ ಕುಶಾಲಪ್ಪ, ರಮೇಶ್, ಬಸವರಾಜ್, ಮಂಜುನಾಥ್, ಮನು ಕುಮಾರ್, ಜಿಲ್ಲಾ ಪಂಚಾಯತ್ ಮಾಜಿ ಅಧ್ಯಕ್ಷೆ ದೀರ್ಘ ಕೇಶಿ ಶಿವಣ್ಣ, ಸಂಘದ ಮಾಜಿ ತಾಲೂಕು ಅಧ್ಯಕ್ಷ ಗೋಪಿನಾಥ್, ಮಾಜಿ ಉಪಾಧ್ಯಕ್ಷ ಬಿ.ಡಿ. ಮಂಜುನಾಥ್, ಮಾಜಿ ಜಿಲ್ಲಾ ಗೌರವ ಕಾರ್ಯದರ್ಶಿ ಉಮೇಶ್ ಕುಮಾರ್, ನಿರ್ದೇಶಕರುಗಳಾದ ವಿಜಯ್ ಕುಮಾರ್, ಧನಂಜಯ್, ಶಿವ ಕುಮಾರ್, ಚಂದ್ರಶೇಖರ್, ಧನಂಜಯ್, ಲಲಿತ, ದೇವೇಂದ್ರ ಮತ್ತಿತರರು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.

ಬಸ್ಸು-ಲಾರಿ ಡಿಕ್ಕಿ: ತಪ್ಪಿದ ಭಾರೀ ಅನಾಹುತ



ಗುಡ್ಡೆಹೊಸೂರು, ಅ.20– ಇಲ್ಲಿಗೆ ಸಮೀಪದ ನಿಸರ್ಗಧಾಮದ ಬಳಿ ಖಾಸಗಿ ಬಸ್ಸು ಮತ್ತು ಜಲ್ಲಿ ಕಲ್ಲು ತುಂಬಿದ ಮೀನಿನ ಲಾರಿ ನಡುವೆ ಅಪಘಾತ ಸಂಭವಿಸಿದ್ದು, ಭಾರೀ ಅನಾಹುತ ತಪ್ಪಿದೆ. ಲಾರಿ ಚಾಲಕನಿಗೆ ಸಣ್ಣಪುಟ್ಟ ಗಾಯವಾಗಿ ಪಾರಾಗಿದ್ದಾರೆ. ಲಾರಿಯ ಸ್ಟೀಯರಿಂಗ್ ತುಂಡಾಗಿ ಈ ಅಪಘಾತ ನಡೆದಿದೆ ಎಂದು ತಿಳಿದು ಬಂದಿದೆ. ಸ್ಥಳಕ್ಕೆ ಕುಶಾಲನಗರ ಸಂಚಾರಿ ಪೊಲೀಸ್ ಠಾಣೆಯ ಪೊಲೀಸರು ಭೇಟಿ ನೀಡಿ ಪ್ರಕರಣ ದಾಖಲಿಸಿಕೊಂಡಿದ್ದಾರೆ.

ಉತ್ತಮವಾಗಿ ಕರ್ತವ್ಯ ನಿರ್ವಹಿಸಿದ ಅಧಿಕಾರಿ, ಸಿಬ್ಬಂದಿಗೆ ಪ್ರಶಂಸನಾ ಪತ್ರ

ಮಡಿಕೇರಿ, ಅ.20– ಐಜಿಪಿ ಸಂದೀಪ್ ಪಾಟೀಲ್ ಕೊಡಗು ಜಿಲ್ಲಾ ಪೊಲೀಸ್ ಕಚೇರಿಗೆ ಭೇಟಿ ನೀಡಿದ್ದರು. ಪೊಲೀಸ್ ಕವಾಯತು ಪರಿವೀಕ್ಷಣೆ ನಡೆಸಿ, ಉತ್ತಮವಾಗಿ ಕರ್ತವ್ಯ ನಿರ್ವಹಿಸಿದ ಪೊಲೀಸ್ ಅಧಿಕಾರಿ ಮತ್ತು ಸಿಬ್ಬಂದಿಗಳಿಗೆ ಪ್ರಶಂಸನಾ ಪತ್ರಗಳನ್ನು ನೀಡಿದರು.



ಬಳಿಕ ಜಿಲ್ಲಾ ಪೊಲೀಸ್ ಕಚೇರಿಯಲ್ಲಿ ಪೊಲೀಸ್ ಅಧಿಕಾರಿಗಳೊಂದಿಗೆ ಅಪರಾಧ ಪರಾಮರ್ಶನ ಸಭೆ ನಡೆಸಿ ಸೂಕ್ತ ಸಲಹೆ ಸೂಚನೆಗಳನ್ನು ನೀಡಿದರು. ಈ ಸಂದರ್ಭ ದಕ್ಷಿಣ ವಲಯದ ಡಿಐಜಿಪಿ ಡಾ. ಎಂ.ಬಿ. ಬೋರಲಿಂಗಯ್ಯ, ಕೊಡಗು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕೆ.ರಾಮರಾಜನ್, ಹೆಚ್ಚುವರಿ ಪೊಲೀಸ್ ಅಧೀಕ್ಷ ಕೆ.ಎಸ್. ಸುಂದರ್ ರಾಜ್, ಹಾಗೂ ಜಿಲ್ಲೆಯ ಎಲ್ಲಾ ಪೊಲೀಸ್ ಅಧಿಕಾರಿಗಳು ಹಾಜರಿದ್ದರು.

ಕೊಡಗು ದಂತ ವೈದ್ಯಕೀಯ ಕಾಲೇಜಿನ 63 ವಿದ್ಯಾರ್ಥಿಗಳಿಗೆ ಪದವಿ ಪ್ರದಾನ

ವಿರಾಜಪೇಟೆ, ಅ.20– ದಂತ ವೈದ್ಯಕೀಯ ಕಾಲೇಜುಗಳು ವಿಶ್ವದ ಬೇರೆ ಬೇರೆ ದಂತ ವೈದ್ಯಕೀಯ ವಿದ್ಯಾಲಯಗಳ ಜೊತೆ ಒಡಂಬಡಿಕೆ ಮಾಡಿಕೊಳ್ಳುವುದರಿಂದ ಹೆಚ್ಚಿನ ಮಹತ್ವ ಪಡೆಯಲಿದೆ ಎಂದು ಇಂಟರ್‌ನ್ಯಾಷನಲ್ ಕಾಲೇಜ್ ಆಫ್ ಕ್ರಾನಿಯೊ ಮಂಡಿಬು ಲರ್ ಆರ್ಥೋಪೆಡಿಕ್ಸ್ ಅಧ್ಯಕ್ಷ ಡಾ.ರಾಜೇಶ್ ರವೀಂದ್ರನಾಥನ್ ಹೇಳಿದರು.

ವಿರಾಜಪೇಟೆ ಬಳಿಯ 'ಕೊಡಗು ದಂತ ವೈದ್ಯಕೀಯ ಕಾಲೇಜಿನ 2023ರ ಪದವಿ ಪ್ರದಾನ ಸಮಾರಂಭ'ದಲ್ಲಿ ಮುಖ್ಯ ಅತಿಥಿಯಾಗಿ ಭಾಗವಹಿಸಿ 39 ಪದವಿ ಹಾಗೂ 24 ಸ್ನಾತಕೋತ್ತರ ಪದವಿಗಳನ್ನು ಪ್ರಧಾನ ಮಾಡಿದ ಬಳಿಕ ಮಾತನಾಡಿ ಕೊಡಗು ದಂತ ವೈದ್ಯಕೀಯ ಕಾಲೇಜಿನ ಮುನ್ನಡೆಯ ಬಗ್ಗೆ ಪ್ರಶಂಸೆ ವ್ಯಕ್ತಪಡಿಸಿದರು.

ಕೊಡಗು ದಂತ ವೈದ್ಯಕೀಯ ಕಾಲೇಜಿನ ಡೀನ್ ಪ್ರೊ. ಡಾ. ಸುನಿಲ್ ಮುದ್ದಯ್ಯ ಅವರು ಸಮಾರಂಭದ ಅಧ್ಯಕ್ಷತೆ ವಹಿಸಿ ಮಾತನಾಡಿ ಕೊಡಗು ದಂತ ವೈದ್ಯಕೀಯ ಕಾಲೇಜು ಹಲವಾರು ಹೆಸರಾಂತ ದಂತ ವೈದ್ಯರುಗಳನ್ನು, ಉಪನ್ಯಾಸಕರುಗಳನ್ನು, ವಿಜ್ಞಾನಿಗಳನ್ನು ವಿಶ್ವಕ್ಕೆ ಕೊಡುಗೆಯಾಗಿ ನೀಡಿದೆ. ಕಾಲೇಜು ದಂತ ಆರೋಗ್ಯ ಕ್ಷೇತ್ರದ 9 ವಿಭಾಗಗಳಲ್ಲೂ ಸ್ನಾತಕೋತ್ತರ ತರಬೇತಿ ಲಭ್ಯವಿರುವುದಾಗಿ ತಿಳಿಸಿದರು.



ಯುರೋಪ್, ಉತ್ತರ ಅಮೇರಿಕಾ ಮತ್ತು ದಕ್ಷಿಣ ಪೂರ್ವ ಏಷ್ಯಾ ಖಂಡದಿಂದ 5 ಹೆಸರಾಂತ ವಿಶ್ವವಿದ್ಯಾನಿಲಯಗಳು ಕೊಡಗು ದಂತ ವೈದ್ಯಕೀಯ ಕಾಲೇಜಿನೊಂದಿಗೆ ಒಡಂಬಡಿಕೆ ಮಾಡಿಕೊಂಡಿರುವುದರಿಂದ ವಿಶ್ವವಿದ್ಯಾನಿಲಯಗಳ ಸಂಶೋಧಕರು ಹಾಗೂ ಹಿರಿಯ ಪ್ರಾಧ್ಯಪಕರುಗಳು ಆನ್ ಲೈನ್ ಮೂಲಕ ಭಾಗವಹಿಸುತ್ತಿರುವುದಾಗಿ ಹೇಳಿದರು.

ಡಾ.ಕೆ.ಸಿ.ಪೊನ್ನಪ್ಪ ಅವರು ವಿದ್ಯಾರ್ಥಿಗಳಿಗೆ ಪ್ರತಿಜ್ಞಾ ವಿಧಿ ಭೋದಿಸಿದರು, ಪ್ರೊಡಾ ಸುನಿಲ್ ಮುದ್ದಯ್ಯ ಅವರು ಸ್ನಾತಕೋತ್ತರ ವಿದ್ಯಾರ್ಥಿಗಳಿಗಾಗಿ ಮೀಸಲಿರಿಸಿದ್ದ ಚಿನ್ನದ ಪದಕವನ್ನು ಡಾ, ಎಸ್. ಪವಿತ್ರ ಹಾಗೂ ಕಂಜಿತಂಡ ಎಂ. ಕುಶಾಲಪ್ಪ ಚಿನ್ನದ ಪದಕವನ್ನು ಡಾ, ವಿ.ಪಿ.ಸುದರ್ಶನ್ ಅವರಿಗೆ, ಕೆ.ಪೊನ್ನವ್ವ ಕುಶಾಲಪ್ಪ ಪದಕವನ್ನು ಡಾ.ನಾಪಂಡ ಪ್ರತೀಕ್ಷಾ ಕಾಳಪ್ಪ ಅವರಿಗೆ ವಿತರಿಸಲಾಯಿತು.

ಡಾ.ಶಾಂತಲಾ, ಡಾ.ಗೌತಮ್, ಡಾ.ಹಮೀದ್, ಡಾ,ಬಸವರಾಜ್ ಉಪಸ್ಥಿತರಿದ್ದರು ಡಾ. ರೂಪೇಶ್ ಸ್ವಾಗತಿಸಿದರೆ, ಡಾ. ಲಿಯನಾ ವಂದಿಸಿದರು. ಕಾಲೇಜು ವಿದ್ಯಾರ್ಥಿಗಳಿಂದ ಸಾಂಸ್ಕೃತಿಕ ಕಾರ್ಯಕ್ರಮ ನಡೆಯಿತು. ಸಭೆಯಲ್ಲಿ ವಿದ್ಯಾರ್ಥಿಗಳ ಪೋಷಕರು ಹೊರ ರಾಜ್ಯದಿಂದ ಆಗಮಿಸಿದ್ದರು.



ಚಾ.ನಗರ ಜಿಲ್ಲಾ ದಸರಾಕ್ಕೆ ಸಂಭ್ರಮದ ತೆರೆ

ವಿದ್ಯಾರ್ಥಿಗಳ ನೃತ್ಯ, ಕೊನೆ ದಿನ ಹರಿದುಬಂದ ಜನಸಾಗರ



ಚಾಮರಾಜನಗರ, ಅ.20– ಜಿಲ್ಲಾ ಕೇಂದ್ರದಲ್ಲಿ 4 ದಿನಗಳ ಕಾಲ ನಡೆದ ದಸರಾ ಮಹೋತ್ಸವ ಶುಕ್ರವಾರ ಮುಕ್ತಾಯಗೊಂಡಿತು.

ಮಹೋತ್ಸವದ ಅಂತಿಮ ದಿನವಾದ ಶುಕ್ರವಾರ ಕೂಡ ಚಾಮರಾಜೇಶ್ವರಸ್ವಾಮಿ ದೇವಸ್ಥಾನದ ಆವರಣದಲ್ಲಿನ ಮುಖ್ಯ ವೇದಿಕೆಯಲ್ಲಿ ಸ್ಥಳೀಯ, ರಾಜ್ಯ ಮಟ್ಟದ ಕಲಾವಿದರು ಹಾಗೂ ಕಾಲೇಜು ವಿದ್ಯಾರ್ಥಿಗಳ ಸಾಂಸ್ಕೃತಿಕದ ಸೊಬಗು ಅನಾವರಣಗೊಂಡಿತು.

ಅಂತಿಮ ದಿನದ ಆಕರ್ಷಣೆಯಾಗಿದ್ದ ಖ್ಯಾತ ಗಾಯಕ ರಾಜೇಶ್ ಕೃಷ್ಣನ್ ಅವರ ಸಂಗೀತ ರಸ ಸಂಜೆ ಕಾರ್ಯಕ್ರಮ ನೆರೆದಿದ್ದ ಪ್ರೇಕ್ಷಕರ ಮನಸೆಳೆಯಿತು. ಜಿಲ್ಲೆಯ ವಿವಿಧ ಕಾಲೇಜು ವಿದ್ಯಾರ್ಥಿಗಳ ನೃತ್ಯ ರೂಪಕಕ್ಕೆ ನಗರದ ಜನತೆ ರೋಮಾಂಚನಗೊಂಡರು. ಪ್ರತಿದಿನ ಜಿಲ್ಲೆಯ ವಿವಿಧೆಡೆಯಿಂದ ಬಂದಿದ್ದ ಕಲಾವಿದರು ಜನರಿಗೆ ಸಾಂಸ್ಕೃತಿಕ ರಸದೌತಣ ನೀಡಿದರು. ಅಂತಿಮ ದಿನ ರಾಜ್ಯದ ಪ್ರಖ್ಯಾತ ಗಾಯಕರು ಹಾಗೂ ಸ್ಥಳೀಯ ಕಲಾವಿದರ ಕಾರ್ಯಕ್ರಮ ಸಂಗೀತದ ಹೊನಲು ಹರಿಸಿದರು.

ರಾಜೇಶ್ ಕೃಷ್ಣನ್ ಮೋಡಿ: ಅಂತಿಮ ದಿನ ನಡೆದ ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಖ್ಯಾತ ಗಾಯಕ ರಾಜೇಶ್ ಕೃಷ್ಣನ್ ಅವರ ಸಂಗೀತ ರಸಸಂಜೆ ಕಾರ್ಯಕ್ರಮ ಪ್ರೇಕ್ಷಕರ ಮನ ಸೆಳೆಯಿತು. ರಾಜೇಶ್ ಕೃಷ್ಣನ್ ಸಂಗೀತ ಹಾಗೂ ಜೊತೆಗಾರರ ಮೋಹಕ ನೃತ್ಯ ಕಂಡ ಯುವ ಪ್ರೇಕ್ಷಕರು ಕುಣಿದಾಡಿದರು.

4 ದಿನವೂ ಸಾಂಸ್ಕೃತಿಕ ಕಾರ್ಯಕ್ರಮ ಸುಗ್ಗಿ: ನಗರದ ಚಾಮರಾಜೇಶ್ವರ ಸ್ವಾಮಿ ದೇವಸ್ಥಾನದ ಆವರಣದ ಬೃಹತ್ ವೇದಿಕೆಯಲ್ಲಿ ಬರೋಬ್ಬರಿ 4 ದಿನಗಳ ಕಾಲ ಸಾಂಸ್ಕೃತಿಕ ಕಾರ್ಯಕ್ರಮಗಳ ಸುಗ್ಗಿ ನಡೆಯಿತು.

ಮೊದಲ ಮೂರು ದಿನ ಸ್ಥಳೀಯ ಕಲಾವಿದರ ಕಾರ್ಯಕ್ರಮಗಳು ಜನಮನವನ್ನು ಸೆಳೆಯುವಲ್ಲಿ ಯಶಸ್ವಿಯಾಯಿತು. ಮೂರನೇ ದಿನ ಜೂನಿಯರ್ ವಿಷ್ಣುವರ್ಧನ್, ಮಿಮಿಕ್ರಿ ಗೋಪಿ, ರಂಗಭೂಮಿ ಕಲಾವಿದೆ ಪಂಕಜಾ ಅವರ ಹ್ಯಾಸ ಕಾರ್ಯಕ್ರಮ ಪ್ರೇಕ್ಷಕರಿಗೆ ಭರ್ತಿ ಮನರಂಜನೆ ನೀಡಿತು.

ಅಲ್ಲದೇ ರೈತ ದಸರಾ, ಮಹಿಳಾ ದಸರಾ, ಮ್ಯಾರಥನ್, ಕವಿಗೋಷ್ಠಿ, ನಾಟಕೋತ್ಸವ ಹಾಗೂ ಕಾಲೇಜು ವಿದ್ಯಾರ್ಥಿಗಳ ಸಾಂಸ್ಕೃತಿಕ ಕಾರ್ಯಕ್ರಮಗಳು ಈ ಬಾರಿ ದಸರಾದ ಮೆರಗು ಹೆಚ್ಚಿಸಿತು. ಒಟ್ಟಾರೆ ಜಿಲ್ಲಾ ಕೇಂದ್ರದಲ್ಲಿ ಜಿಲ್ಲಾಡಳಿತ ಹಾಗೂ ಮೈಸೂರು ದಸರಾ ಮಹೋತ್ಸವ ಸಮಿತಿಯಿಂದ ಆಯೋಜಿಸಿದ್ದ ಚಾಮರಾಜನಗರ ದಸರಾ ಮಹೋತ್ಸವಕ್ಕೆ ವರ್ಣರಂಜಿತ ತೆರೆ ಬಿದ್ದಿತು.

ಕಂಗೊಳಿಸಿದ ಹೃದಯ ಭಾಗ: ನಗರದ ಹೃದಯ ಭಾಗವಾದ ಚಾಮರಾಜೇಶ್ವರ ದೇವಾಲಯ ಹಾಗೂ ಚಾಮರಾಜೇಶ್ವರ ಉದ್ಯಾನ ನಾಲ್ಕೈದು ದಿನಗಳ ಕಾಲ ವಿದ್ಯುತ್ ದೀಪಾಲಂಕಾರ ಕಂಗೊಳಿಸಿತು. ಈ ಅಲಂಕಾರದಿಂದಾಗಿ ನಗರದಲ್ಲಿ ಹಬ್ಬದ ಸಂಭ್ರಮ ಮನೆ ಮಾಡಿತ್ತು. ಕಳೆದ 10 ವರ್ಷಗಳಿಂದ ಜಿಲ್ಲೆಯಲ್ಲಿ ದಸರಾ ಆಚರಿಸಲಾಗುತ್ತಿದ್ದು, ಪ್ರತಿ ವರ್ಷವೂ ಚಾಮರಾಜೇಶ್ವರ ದೇವಾಲಯದ ಆವರಣದಲ್ಲೇ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಆಯೋಜಿಸಲಾಗುತ್ತಿದೆ.

ಕೊನೆ ದಿನ ಜನ ಸಾಗರ: ದಸರಾ ಕಾರ್ಯಕ್ರಮದ ಕೊನೆ ದಿನವಾದ ಮುಖ್ಯ ವೇದಿಕೆಯಿದ್ದ ಚಾಮರಾಜೇಶ್ವರ ದೇವಾಲಯದ ಆವರಣದತ್ತ ಜನ ಸಾಗರವೇ ಹರಿದು ಬಂದಿತ್ತು. ನಿರೀಕ್ಷೆಯನ್ನು ಮೀರಿ ಜನ ಸೇರಿದ್ದರಿಂದ ಕುರ್ಚಿಗಳು ಸಾಲದಂತಾಗಿತ್ತು. ಶಾಮಿಯಾನದೊಳಗೆ ಕುರ್ಚಿಗಳೆಲ್ಲವೂ ಭರ್ತಿಯಾಗಿ ಸುತ್ತಲೂ ಜನ ನಿಂತು ಕಾರ್ಯಕ್ರಮ ವೀಕ್ಷಿಸಿದರು. ಇಷ್ಟೊಂದು ಬಗೆಯಲ್ಲಿ ಜನ ಸೇರಲು ಹೆಸರಾಂತ ಗಾಯಕ ರಾಜೇಶ್‌ಕೃಷ್ಣನ್ ಕಾರಣ ಎಂಬುದನ್ನು ಪ್ರತ್ಯೇಕವಾಗಿ ಹೇಳಬೇಕಿಲ್ಲ.

ರಾಜೇಶ್ ಕೃಷ್ಣನ್ ಅವರ ಗಾನಸುಧೆಯನ್ನು ಸವಿಯಲು ನಗರದ ಉದ್ದಗಲದಿಂದಲೂ ಜನತೆ ತಂಡೋಪ ತಂಡವಾಗಿ ಆಗಮಿಸಿದ್ದರು. ಮೊದಲ ಮೂರು ದಿನ ಇಷ್ಟೊಂದು ಬಗೆಯ ಪ್ರೇಕ್ಷಕರು ಇರಲಿಲ್ಲ. ಆದರೆ, ಕೊನೆ ದಿನ ರಾಜೇಶ್ ಕೃಷ್ಣನ್ ಅವರ ಗಾನ ಸವಿಯಲು ಮೊದಲ ದಿನಕ್ಕಿಂತಲೂ ಹೆಚ್ಚಿನ ಜನ ಸಾಗರ ಹರಿದು ಬಂದಿತ್ತು.

ರಾಜೇಶ್ ಕೃಷ್ಣನ್ ಹಾಡಿನ ಮೋಡಿಗೆ ತಲೆ ತೂಗಿದ ಪ್ರೇಕ್ಷಕರು...

ಚಾಮರಾಜನಗರ, ಅ.20– ನಾಡಹಬ್ಬ ದಸರಾ ಅಂಗವಾಗಿ ನಗರದ ಶ್ರೀ ಚಾಮರಾಜೇಶ್ವರ ದೇವಾಲಯದ ಮುಂಭಾಗದ ವರ್ಣರಂಜಿತ ವೇದಿಕೆಯಲ್ಲಿ ಕೊನೇ ದಿನ ನಡೆದ ಖ್ಯಾತ ಗಾಯಕ ರಾಜೇಶ್ ಕೃಷ್ಣನ್ ಅವರ ಸಂಗೀತ ರಸ ಸಂಜೆ ಕಾರ್ಯಕ್ರಮ ನೆರೆದಿದ್ದ ಸಾವಿರಾರು ಪ್ರೇಕ್ಷಕರು ಹುಚ್ಚೆದ್ದು ಕುಣಿಯುವಂತೆ ಮೋಡಿ ಮಾಡಿತು.



ಈಗಾಗಲೇ ಕಿರುತೆರೆಯಲ್ಲಿ ಎದೆ ತುಂಬಿ ಹಾಡುವೆನು ಕಾರ್ಯಕ್ರಮದ ಮೂಲಕ ಕರ್ನಾಟಕದ ಜನರ ಮನ ಗೆದ್ದಿರುವ ರಾಜೇಶ್ ಕೃಷ್ಣನ್ ಅವರ ಹಾಡುಗಳನ್ನು ಆಲಿಸಲು ಸಂಜೆ 5 ಗಂಟೆಯಿಂದಲೇ ಜನರು ಕಾದು ಕುಳಿತಿದ್ದರು.

ಸಂಜೆ 8 ಗಂಟೆಗೆ ವೇದಿಕೆಗೆ ಸಿಪಾಯಿ ಚಿತ್ರದ ರುಕ್ಕಮ್ಮ ಗೀತೆಗೆ ಸಹ ಕಲಾವಿದರೊಂದಿಗೆ ಹೆಜ್ಜೆ ಹಾಕಿದ ರಾಜೇಶ್ ಕೃಷ್ಣನ್ ಪ್ರೇಕ್ಷಕರಲ್ಲಿ ಸಂಚಲನ ಮೂಡಿಸಿದರು. ಬಳಿಕ ಕಿಚ್ಚ ಸುದೀಪ್ ನಟನೆಯ ಹುಚ್ಚ ಚಿತ್ರವನ್ನು ಹಾಡಿ ರಂಜಿಸಿದರು. ಆ ನಂತರ ಕರಾಟೆ ಕಿಂಗ್ ಶಂಕರ್ ನಾಗ್ ನಟನೆಯ ಗೀತಾ ಚಿತ್ರದ ಗೀತಾಂಜಲಿ ಕಾಲು ಗೆಜ್ಜೆಗೆ ಮತ್ತು ರೆಬಲ್ ಸ್ಟಾರ್ ಅಭಿನಯದ ಕುಚುಕು, ಕುಚುಕು ಹಾಡಿನ ಮೂಲಕ ಮೋಡಿ ಮಾಡಿದರು.

ಪುನೀತ್ ರಾಜ್ ಕುಮಾರ್ ಹಾಡಿದ ಕಾಣದಂತೆ ಮಾಯವಾದನು ನಮ್ಮ ಶಿವ ಕೈಲಾಸ ಸೇರಿಕೊಂಡನು ಹಾಡಿಗೆ ನೃತ್ಯ ಮಾಡಿ ವೇದಿಕೆಯಲ್ಲಿ ದೂಳೆಬ್ಬಿಸಿದರು. ರಾಜೇಶ್ ಕೃಷ್ಣನ್ ಅವರ ಪ್ರತಿಯೊಂದು ಹಾಡಿಗೂ ಪ್ರೇಕ್ಷಕರ ಕಡೆಯಿಂದ ಉತ್ತಮ ರೆಸ್ಪಾನ್ಸ್ ಸಿಕ್ಕಿತ್ತಲ್ಲದೆ ನೆರೆದಿದ್ದ ಯುವಕ– ಯುವತಿಯರ ಸಾಲಿನಿಂದ ಶಿಳ್ಳೇ, ಚಪ್ಪಾಳೆ, ಕರತಾಡನ ಮುಖಾಂತರ ಗಾಯಕರಿಗೆ ಉತ್ತೇಜನ ನೀಡಿದರು. ಇದಕ್ಕೂ ಮೊದಲು ರಾಜೇಶ್ ಕೃಷ್ಣನ್ ತಂಡದ ಸಹ ಗಾಯಕಿಯರು ಕನ್ನಡ ಚಿತ್ರದ ಕೆಲವು ಗೀತೆಗಳನ್ನು ಹಾಡಿ ನೆರೆದಿದ್ದವರ ಮನ ಗೆದ್ದರು. ಕೊನೆಯ ದಿನವಾದ ಇಂದು ಚುನಾಯಿತ ಪ್ರತಿನಿಧಿಗಳು ಗಣ್ಯರು ಸೇರಿದಂತೆ ಅಸಂಖ್ಯಾತ ಜನರು ಸೇರಿದ್ದರು.

ಗೊಂಬೆ ಕೂರಿಸುವ ಪದ್ಧತಿ ಸಂಸ್ಕೃತಿ ಪ್ರತೀಕ



ಚಾಮರಾಜನಗರ, ಅ.20– ಗೊಂಬೆಗಳ ವೀಕ್ಷಣೆಯಿಂದ ಅಲಂಕಾರ ಪ್ರಜ್ಞೆ, ಸೌಂದರ್ಯ, ಧ್ಯಾನ ಸ್ಥಿತಿ ಹಾಗೂ ಮೌನದ ಪರಿಕಲ್ಪನೆಯನ್ನು ಮೂಡಿಸಿ ಮಾನವ ಹಸನ್ಮುಖಿಯಾಗಲು ಸಾಧ್ಯವಾಗುತ್ತದೆ ಎಂದು ತಾಲೂಕು ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಸುರೇಶ್ ಎನ್.ಋಗ್ವೇದಿ ತಿಳಿಸಿದರು.

ದಸರಾ ಅಂಗವಾಗಿ ನಗರದ ವಿವಿಧ ವಾರ್ಡ್‌ನಲ್ಲಿ ಗೊಂಬೆ ಕೂರಿಸಿರುವ ಮನೆಗಳಿಗೆ ಭೇಟಿ ನೀಡಿ ಪೂಜಾ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಮಾತನಾಡಿ, ಗೊಂಬೆ ಕೂರಿಸುವ ಪದ್ಧತಿ ಸಂಸ್ಕೃತಿಯ ಪ್ರತೀಕವಾಗಿದೆ. ದಸರಾ ನವರಾತ್ರಿಯ ಸಂದರ್ಭದಲ್ಲಿ ವಿಶೇಷವಾಗಿ 9 ದಿನಗಳ ಕಾಲ ಗೊಂಬೆ ಅಲಂಕಾರಯುತವಾಗಿ ವಿವಿಧ ಪರಿಕಲ್ಪನೆಯೊಂದಿಗೆ ಸ್ಥಾಪಿಸಿ ಅನೇಕ ಸಂದೇಶಗಳನ್ನು ನೀಡುವ ಪದ್ಧತಿಯಾಗಿದೆ ಎಂದು ತಿಳಿಸಿದರು.

ಪ್ರತಿ ಬೊಂಬೆಯಲ್ಲೂ ಮಾನವನಿಗೆ ಅಗತ್ಯವಾದ ಅಮೂಲ್ಯ ಮೌಲ್ಯಗಳು, ಗುಣ ಧರ್ಮಗಳು ಅರ್ಥ ಮಾಡಿಕೊಳ್ಳಲು ಸಾಧ್ಯವಿದೆ. ಆಧುನಿಕ ವ್ಯವಸ್ಥೆಯಲ್ಲಿ ದಸರಾ ಸಂದರ್ಭದಲ್ಲಿ ಪದ್ಧತಿ ವಿನಾಶದತ್ತ ತಲುಪುತ್ತಿರುವುದು ದುಃಖದ ವಿಷಯ. ಗೊಂಬೆಯನ್ನು ಕೂರಿಸುವ ಪದ್ಧತಿಯನ್ನು ಮಕ್ಕಳಲ್ಲಿ ಬೆಳೆಸಿ ಅವರು ಅರ್ಥಪೂರ್ಣವಾದ ಮಾರ್ಗದಲ್ಲಿ ಬದುಕಲು ಸಹಾಯವಾಗಲಿದೆ ಎಂದರು.

ನಂತರ ಶ್ರೀಶಾರದಾ ಭಜನಾ ಮಂಡಳಿಯ ಅಧ್ಯಕ್ಷರಾದ ವಿಜಯಲಕ್ಷ್ಮೀ ಮಾತನಾಡಿ, ನವರಾತ್ರಿ ದಸರಾ ಸಂಸ್ಕೃತಿ ಪರಂಪರೆಯ ಮೂಲಕ ಗೊಂಬೆಗಳನ್ನು ಹಲವಾರು ಮನೆಗಳಲ್ಲಿ ಶ್ರದ್ಧಾ ಭಕ್ತಿಯಿಂದ ಜೋಡಿಸಿ ಪೂಜಿಸುತ್ತಾರೆ. ಮಕ್ಕಳು ಆನಂದದಲ್ಲಿ ಸಾಗಲು ಕೊಂಬೆ ಕೂರಿಸುವ ಪದ್ಧತಿಯನ್ನು ಹೆಚ್ಚು ಜಾಗೃತಿ ಮಾಡಬೇಕಾಗಿದೆ ಎಂದರು. ಕಾರ್ಯಕ್ರಮದಲ್ಲಿ ಜೈ ಹಿಂದ್ ಪ್ರತಿಷ್ಠಾನದ ನಿರ್ದೇಶಕರಾದ ಕುಸುಮ ಋಗ್ವೇದಿ, ಓಂ ಶಾಂತಿ ಸತೀಶ್, ನಿವೃತ್ತ ಮುಖ್ಯ ಶಿಕ್ಷಕರಾದ ಚಂದ್ರಿಕಾ, ಝಾನ್ಸಿ ಮಕ್ಕಳ ಪರಿಷತ್ತಿನ ಶ್ರಾವ್ಯ ಋಗ್ವೇದಿ, ಪ್ರಜ್ವಲ್, ಕೀರ್ತಿ ಸೇರಿದಂತೆ ಇನ್ನಿತರರು ಇದ್ದರು.

ಇಂದು ನಗರದಲ್ಲಿ ಪೊಲೀಸ್ ಹುತಾತ್ಮರ ದಿನಾಚರಣೆ

ಚಾಮರಾಜನಗರ, ಅ.20– ಪೊಲೀಸ್ ಇಲಾಖೆ ವತಿಯಿಂದ ಪೊಲೀಸ್ ಹುತಾತ್ಮರ ದಿನಾಚರಣೆಯನ್ನು ಅಕ್ಟೋಬರ್ 21ರಂದು ಬೆಳಿಗ್ಗೆ 8 ಗಂಟೆಗೆ ನಗರದ ಜಿಲ್ಲಾ ಪೊಲೀಸ್ ಕವಾಯಿತು ಮೈದಾನದಲ್ಲಿ ಹಮ್ಮಿಕೊಳ್ಳಲಾಗಿದೆ.

ಜಿಲ್ಲಾಧಿಕಾರಿ ಶಿಲ್ಪಾ ನಾಗ್ ಅವರು ಗೌರವ ವಂದನೆ ಸ್ವೀಕರಿಸುವರು. ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಆನಂದ್ ಪ್ರಕಾಶ್ ಮೀನಾ, ಚಾಮರಾಜನಗರ ವೃತ್ತ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ಪ್ರಾದೇಶಿಕ) ಚಂದ್ರಶೇಖರ್ ನಾಯಕ್, ಬಂಡೀಪುರ ಹುಲಿ ಯೋಜನೆ ಅರಣ್ಯ ಸಂರಕ್ಷಣಾಧಿಕಾರಿ ಹಾಗೂ ನಿರ್ದೇಶಕ ಡಾ. ರಮೇಶ್ ಕುಮಾರ್.ಪಿ, ಬಿ.ಆರ್.ಟಿ ಹುಲಿ ಸಂರಕ್ಷಿತ ಪ್ರದೇಶದ ಉಪ ಅರಣ್ಯ ಸಂರಕ್ಷಣಾಧಿಕಾರಿ ಹಾಗೂ ನಿರ್ದೇಶಕ ದೀಪ. ಜೆ. ಕಂಟ್ರಾಕ್ಟರ್, ಮಲೆ ಮಹದೇಶ್ವರ ವನ್ಯಜೀವಿ ವಿಭಾಗದ ಉಪ ಅರಣ್ಯ ಸಂರಕ್ಷಣಾಧಿಕಾರಿ ಹಾಗೂ ನಿರ್ದೇಶಕ ಡಾ. ಜಿ. ಸಂತೋಷ್ ಕುಮಾರ್, ಕಾವೇರಿ ವನ್ಯಜೀವಿ ವಿಭಾಗದ ಉಪ ಅರಣ್ಯ ಸಂರಕ್ಷಣಾಧಿಕಾರಿ ಸುರೇಂದ್ರ ಎಂ.ಸಿ, ಹೆಚ್ಚುವರಿ ಜಿಲ್ಲಾಧಿಕಾರಿ ಗೀತಾ ಹುಡೇದ ಅವರು ಮುಖ್ಯ ಅತಿಥಿಗಳಾಗಿ ಭಾಗವಹಿಸುವರು ಎಂದು ಪ್ರಕಟಣೆ ತಿಳಿಸಿದೆ.

ಗುದ್ದಲಿ, ಪಿಕಾಸಿ ಪ್ರದರ್ಶಿಸಿ ವಿನೂತನ ಪ್ರತಿಭಟನೆ



ಚಾಮರಾಜನಗರ, ಅ.20– ರಾಜ್ಯ ಸರ್ಕಾರ ತಮಿಳುನಾಡಿಗೆ ಹರಿಸುತ್ತಿರುವ ಕಾವೇರಿ ನೀರನ್ನು ನಿಲ್ಲಿಸುವಂತೆ ಒತ್ತಾಯಿಸಿ ಕರ್ನಾಟಕ ಸೇನಾ ಪಡೆಯ ಕಾರ್ಯಕರ್ತರು ಗುದ್ದಲಿ, ಪಿಕಾಸಿ, ಮಾವಟಿ, ಬಾಣ್ಲಿ ಪ್ರದರ್ಶಿಸಿ ನಗರದಲ್ಲಿ ಶುಕ್ರವಾರ ವಿನೂತನ ಪ್ರತಿಭಟನೆ ನಡೆಸಿದರು.

ನಗರದ ಶ್ರೀಚಾಮರಾಜೇಶ್ವರ ಉದ್ಯಾನವನದ ಮುಂಭಾಗದಲ್ಲಿ ಕರ್ನಾಟಕ ಸೇನಾಪಡೆಯ ಅಧ್ಯಕ್ಷ ಚಾ.ರಂ. ಶ್ರೀನಿವಾಸಗೌಡ ಅವರ ನೇತೃತ್ವದಲ್ಲಿ ಜಮಾಯಿಸಿದ ಪ್ರತಿಭಟನಾನಿತರು ಮಾವಟಿ, ಗುದ್ದಲಿ, ಪಿಕಾಸಿ ಬಾಣ್ಲಿ ಹಿಡಿದು ಅಲ್ಲಿಂದ ಮೆರವಣಿಗೆ ಹೊರಟು ಭುವನೇಶ್ವರಿ ವೃತ್ತಕ್ಕೆ ತೆರಳಿ ರಾಷ್ಟ್ರೀಯ ಹೆದ್ದಾರಿಯಲ್ಲಿ ರಸ್ತೆತಡೆ ನಡೆಸಿ, ಕೇಂದ್ರ ಸರ್ಕಾರ, ತಮಿಳುನಾಡು ಸರ್ಕಾರ, ಕರ್ನಾಟಕ ಸರ್ಕಾರ, ಕಾವೇರಿ ನೀರು ನಿರ್ವಹಣಾ ಮಂಡಳಿ ವಿರುದ್ಧ ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು.

ಪ್ರತಿಭಟನೆಯಲ್ಲಿ ಮುಖಂಡರಾದ ಶಾ. ಮುರಳಿ, ಪಣ್ಯದಹುಂಡಿ ರಾಜು, ಚಾ.ವೆಂ. ರಾಜ್‌ಗೋಪಾಲ್, ನಿಜಧ್ವನಿ ಗೋವಿಂದರಾಜು, ಮಹೇಶ್‌ಗೌಡ, ನಂಜುಂಡಶೆಟ್ಟಿ, ಗು. ಪುರುಷೋತ್ತಮ್, ತಾಂಡವಮೂರ್ತಿ, ರಾಜಪ್ಪ, ಲಿಂಗರಾಜು, ವೀರಭದ್ರ ಇದ್ದರು.

ಇಂದು ಚಾ.ನಗರಕ್ಕೆ ಕಂದಾಯ ಸಚಿವರು

ಚಾಮರಾಜನಗರ, ಅ.20– ಕಂದಾಯ ಸಚಿವರಾದ ಕೃಷ್ಣ ಭೈರೇಗೌಡರು ಅ.21 ರಂದು ಚಾಮರಾಜನಗರಕ್ಕೆ ಭೇಟಿ ನೀಡಲಿದ್ದಾರೆ. ಬೆಳಗ್ಗೆ 10 ಗಂಟೆಗೆ ಚಾಮರಾಜನಗರಕ್ಕೆ ಆಗಮಿಸುವರು. ಮಧ್ಯಾಹ್ನ 12.30 ರಿಂದ 1 ಗಂಟೆಯವರೆಗೆ ಚಾಮರಾಜನಗರ ಜಿಲ್ಲಾ ಕಾಂಗ್ರೆಸ್ ಪಕ್ಷದ ಕಚೇರಿಗೆ ಭೇಟಿ ನೀಡುವರು. 2 ರಿಂದ 6 ಗಂಟೆಯವರೆಗೆ ಜಿಲ್ಲಾಡಳಿತ ಭವನದ ಆವರಣದಲ್ಲಿರುವ ಹೊಸ ಕೆಡಿಪಿ ಸಭಾಂಗಣದಲ್ಲಿ ಜಿಲ್ಲೆಯ ಕಂದಾಯ ಇಲಾಖೆಯ ಪ್ರಗತಿ ಪರಿಶೀಲನಾ ಸಭೆ ನಡೆಸುವರು. ಸಂಜೆ 6 ಗಂಟೆಗೆ ಬೆಂಗಳೂರಿಗೆ ತೆರಳುವರು ಎಂದು ಪ್ರಕಟಣೆ ತಿಳಿಸಿದೆ.

ಮೂರನೇ ಪುಟದಿಂದ

ನಮ್ಮ ಮೈಸೂರಿಗೂ ಮೆಟ್ರೋ

ಕಡೆಗಳಲ್ಲಿ ರೈಲು ಸೇವೆಗಳನ್ನು ವಿಸ್ತರಿಸಲಾಗುತ್ತದೆ. ಈ ನಿಟ್ಟಿನಲ್ಲಿ ಪ್ರಮುಖ ನಗರಗಳಿಗೂ ಮೆಟ್ರೋ ಸೇವೆ ಒದಗಲಿದೆ. ಬೆಂಗಳೂರಿನ ಬಳಿಕ ಮೈಸೂರಿನಲ್ಲೂ ಮೆಟ್ರೋ ಸೇವೆ ಆರಂಭವಾಗಲಿದೆ ಎಂದು ಅವರು ಪ್ರಕಟಿಸಿದರು.

ಬೆಂಗಳೂರು ಮತ್ತು ಮೈಸೂರು ನಡುವೆ ಈಗ ಎಕ್ಸ್‌ಪ್ರೆಸ್ ವೇ ನಿರ್ಮಾಣವಾಗಿದ್ದು, ಕೇವಲ ಎರಡು ಗಂಟೆಗಳಲ್ಲಿ ಎರಡು ನಗರಗಳನ್ನು ಸಂಪರ್ಕಿಸಬಹುದಾಗಿದೆ. ಈ ಹಿಂದೆ ಬೆಂಗಳೂರು ಮತ್ತು ಮೈಸೂರನ್ನು ಮೆಟ್ರೋ ಮೂಲಕವೇ ಸಂಪರ್ಕಿಸುವ ಯೋಜನೆಯ ಬಗ್ಗೆ ಚರ್ಚೆಯಾಗಿತ್ತು. ಇದೀಗ ಪ್ರಧಾನಿಯವರು ಮೈಸೂರಿನಲ್ಲೂ ಮೆಟ್ರೋ ಯೋಜನೆ ಜಾರಿಯ ಪ್ರಸ್ತಾವನೆ ಮಂಡಿಸಿದ್ದಾರೆ.

ವಿಸ್ತೃತ ಮಾರ್ಗ ಲೋಕಾರ್ಪಣೆ: ಬೆಂಗಳೂರಿನ ಹೊಸ ಜೀವನಾಡಿಯಾಗಿರುವ ನಮ್ಮ ಮೆಟ್ರೋದ ನೇರಳೆ ಮಾರ್ಗದ ಎರಡು ವಿಸ್ತೃತ ರೂಟ್‌ಗಳನ್ನು ಪ್ರಧಾನಿ ನರೇಂದ್ರ ಮೋದಿ ಇಂದು ಲೋಕಾರ್ಪಣೆ ಮಾಡಿದರು. ಕೆಆರ್ ಪುರದಿಂದ ಬೈಯಪ್ಪನಹಳ್ಳಿ ಹಾಗೂ ಕೆಂಗೇರಿಯಿಂದ ಚಲ್ಲಘಟ್ಟದವರೆಗೆ ಮೆಟ್ರೋ ರೈಲು ವಿಸ್ತೃತ ಮಾರ್ಗ ಇದಾಗಿದ್ದು, ಈಗ ಚಲ್ಲಘಟ್ಟದಿಂದ ವೈಟ್‌ಫೀಲ್ಡ್‌ವರೆಗಿನ ನೇರಳೆ ಮಾರ್ಗ ಕ್ರಮಿಸುವ ಒಟ್ಟು ದೂರ 43.5 ಕಿ.ಮೀ.ಗೆ ವಿಸ್ತರಣೆಯಾಗಿದೆ. ನರೇಂದ್ರ ಮೋದಿ ಅವರು ಉತ್ತರ ಪ್ರದೇಶದಿಂದ ಕಾರ್ಯಕ್ರಮದಲ್ಲಿ ಭಾಗವಹಿಸಿದರೆ, ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಡಿಸಿಎಂ ಡಿ.ಕೆ. ಶಿವಕುಮಾರ್, ಸಿಎಂ ಅವರ ಗೃಹಕಚೇರಿ ಕೃಷ್ಣಾದಲ್ಲಿ ವರ್ಚುಯಲ್ ಸಭೆ ಮೂಲಕ ಉದ್ಘಾಟನೆ ಕಾರ್ಯಕ್ರಮದಲ್ಲಿ ಭಾಗಿಯಾದರು. ರಾಜ್ಯ ಯೋಜನಾ ಆಯೋಗದ ಉಪಾಧ್ಯಕ್ಷ ಪ್ರೊ ರಾಜೀವ್ ಗೌಡ, ಮಾಜಿ ಸಚಿವ, ಶಾಸಕ ಎಸ್ ಟಿ ಸೋಮಶೇಖರ್, ಸಿಎಂ ರಾಜಕೀಯ ಕಾರ್ಯದರ್ಶಿ ನಸೀರ್ ಅಹ್ಮದ್ ಮತ್ತಿತರರು ಉಪಸ್ಥಿತರಿದ್ದರು.

ಕುಣಿದು ಕುಪ್ಪಳಿಸಿದ ಯುವ ಪಡೆ

ಹೆಜ್ಜೆ ಹಾಕಿದ ಬೆಡಗಿಯರು ಕಿರುನಗೆಯಿಂದಲೇ ಪಡ್ಡೆ ಹುಡುಗರ ಕಣ್ಮನಕ್ಕೆ ಪುಳಕ ನೀಡಿದರು. ನಂತರ ಫೋರ್ ಫೈವ್ ಸಿಕ್ಸ್ ನೃತ್ಯ ತಂಡದ ಕಲಾವಿದರು ರಾಷ್ಟ್ರೀಯ ಭಾವೈಕ್ಯತೆ ಸಾರುವ ಅಮೋಘ ನೃತ್ಯದ ಮೂಲಕ ಎಲ್ಲರನ್ನು ರಂಜಿಸಿದರು.

ರ‍್ಯಾಪಿಡ್ ರಿದು: ಕನ್ನಡ ಮಿಕ್ಸಿಂಗ್ ರ‍್ಯಾಪಿಡ್ ಹಾಡುಗಳಿಗೆ ಹೆಸರಾದ ಆಲ್–ಓಕೆ ತಂಡದ ರ‍್ಯಾಪಿಡ್ ಹಾಡುಗಳು ಮಸ್ತ್ ಮನರಂಜನೆ ನೀಡಿತು. ಗಾಯಕ ಅಲೋಕ್ ಆರ್.ಬಾಬು, 'ನಾವು ಲಾಸ್ಟ್ ಬೆಂಚ್ ಬಾಯ್ಸ್', 'ದಾಸರಾಗು ವಿಶೇಷರಾಗು', 'ಯಾಕಿಂಗೆ ಮಗ', 'ಕ್ರೇಜ್', 'ಆರ್‌ಸಿಬಿ' 'ಹ್ಯಾಪಿ', ಮಾರಮ್ಮನ ಡಿಸ್ಕು', 'ಮಲ್ಲಿಗೆ ಹೂ' ಹಾಡುಗಳ ಮೂಲಕ ಯುವ ದಸರಾ ವೇದಿಕೆಯಲ್ಲಿ ರ‍್ಯಾಪಿಡ್ ಸಂಚಲನ ಸೃಷ್ಟಿಸಿದರು. 'ಆರ್‌ಸಿಬಿ' ಹಾಡಿಗೆ ಇಡೀ ಮೈದಾನದಲ್ಲಿದ್ದ ಎಲ್ಲರೂ 'ಆರ್‌ಸಿಬಿ' ಎಂದು ಕೂಗುವ ಮೂಲಕ ಅಭಿಮಾನ ಮೆರೆದರು. 'ಜೀವನದಲ್ಲಿ ಏನೇ ಆದ್ರೂ ಡೋಂಟ್ ವರೀ..' ಹಾಡಿನ ಮೂಲಕ ಎಲ್ಲರ ಎದೆಯನ್ನು ಹಗುರವಾಗಿಸಿದ ಗಾಯಕ ಅಲೋಕ್, ಸದಾ ಖುಷಿಯಾಗಿರಿ ಎಂದು 'ಹ್ಯಾಪಿ' ಹಾಡನ್ನು ಹಾಡುವ ಮೂಲಕ ಎಲ್ಲರಲ್ಲು ಹೊಸ ಚೈತನ್ಯ ತುಂಬಿದರು. ಕಡೆಯಲ್ಲಿ 'ರಾಜಕುಮಾರ' ಚಿತ್ರದ 'ಬೊಂಬೆ ಹೇಳುತೈತೆ' ಹಾಡನ್ನು ಹಾಡುವ ಮೂಲಕ ಡಾ.ಪುನೀತ್ ರಾಜ್‌ಕುಮಾರ್ ಅವರನ್ನು ಸ್ಮರಿಸಿದರು. ಈ ವೇಳೆ ಇಡೀ ಮೈದಾನದಲ್ಲಿ ನೆರೆದಿದ್ದ ಸಾವಿರಾರು ಮಂದಿ ಒಮ್ಮೆಗೆ ತಮ್ಮ ಮೊಬೈಲ್ ಟಾರ್ಚ್ ಲೈಟ್ ಆನ್ ಮಾಡುವ ಮೂಲಕ ಅಭಿಮಾನ ಮೆರೆದರು.

ಆಂಕರ್ ಅನುಶ್ರೀ ಕಿಕ್: ಹಲೋ ಮೈಸೂರು ಎನ್ನುತ್ತಲೇ ವೇದಿಕೆಗೆ ಆಗಮಿಸಿದ ಆಂಕರ್ ಅನುಶ್ರೀ ಉಲ್ಲಾಸ–ಉತ್ಸಾಹದ ಕಿಕ್ ನೀಡಿದರು. ಆಗಾಗ ಮಾತಿನಲ್ಲೇ ಯುವಕರನ್ನು ಕೆಣಕುತ್ತಿದ್ದ ಅನುಶ್ರೀ, ಮಾತಿನ ಮೋಡಿಯ ಮೂಲಕ ಎಲ್ಲರ ಮನಗೆದ್ದರು. ಬಳಿಕ ಯುವ ದಸರಾ ಕುರಿತು 'ಸಂಜೆ ಭಾನು ಕೆಂಪಾಗಿದೆ' ಹಾಡನ್ನು ಹಾಡಿದ ಗಾಯಕ ಪಂಚಮ್, ಶಿಳ್ಳೆ–ಚಪ್ಪಾಳೆ ಗಿಟ್ಟಿಸಿದರೆ, ಗಾಯಕ ಅಜಯ್ 'ಕಾಲಿ ಕ್ವಾಟ್ರು ಬಾಟ್ಲು ಅಂಗೆ ಲೈಫು' ಹಾಡಿನ ಮೂಲಕ ಮನರಂಜಿಸಿದರು. ಇದೇ ವೇಳೆ ವೇದಿಕೆ ಆಗಮಿಸಿದ 'ತತ್ಸಮ ತದ್ಭವ' ಚಿತ್ರದ ನಿರ್ದೇಶಕ ಪನ್ನಗಾಭರಣ, ಕನ್ನಡ ಚಿತ್ರಗಳನ್ನು ಹೆಚ್ಚಿನ ಸಂಖ್ಯೆಯಲ್ಲಿ ನೋಡಿ ಪ್ರೋತ್ಸಾಹಿಸಬೇಕು ಎಂದು ಮನವಿ ಮಾಡಿದರು.

ಮ್ಯಾಜಿಕಲ್ ಮ್ಯೂಸಿಕ್: ಬಾಲಿವುಡ್ ಗಾಯಕ ಸಲೀಂ ಸುಲೆಮಾನ್ ಮ್ಯಾಜಿಕಲ್ ಮ್ಯೂಸಿಕ್ ಯುವ ಮನಸ್ಸುಗಳಿಗೆ ಮೋಡಿ ಮಾಡಿತು. 'ಕುರ್ಬಾನ್' ಹಿಂದಿ ಚಿತ್ರದ 'ಕುರ್ಬಾನ್ ಹುವಾ..', 'ಮರ್ಡರ್–2' ಚಿತ್ರ 'ಆಯ್ ಖುದಾ' ಸೇರಿದಂತೆ ಹತ್ತಾರು ಜನಪ್ರಿಯ ಹಿಂದಿ ಹಾಡುಗಳನ್ನು ಸುಮಧುರವಾಗಿ ಹಾಡುವ ಮೂಲಕ ಮೋಡಿ ಮಾಡಿದರು.

ಹಿಂದೆ ಭರ್ತಿ–ಮುಂದೆ ಖಾಲಿ...!

ಮೈಸೂರು ದಸರಾ ಮಹೋತ್ಸವದ ಮೆಗಾ ಇವೆಂಟ್ 'ಯುವ ದಸರಾ' ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಅಪಾರ ಜನ ಸೇರುತ್ತಿದ್ದಾರೆ. ಆದರೆ, ವೇದಿಕೆ ಮುಂದಿನ ವಿವಿಐಪಿ ಮತ್ತು ಮಾಧ್ಯಮ ಗ್ಯಾಲರಿ ಎಡ ಮತ್ತು ಬಲ ಭಾಗದಲ್ಲಿನ ವಿಐಪಿ ಗ್ಯಾಲರಿಯಲ್ಲಿ ನೂರಾರು ಕುರ್ಚಿಗಳು ಖಾಲಿ ಇದ್ದವು. ಸಾಕಷ್ಟು ಹೆಣ್ಣು ಮಕ್ಕಳು ವೇದಿಕೆ ಮುಂದಿನ ಖಾಲಿ ಕುರ್ಚಿಗಳಿದ್ದ ಸ್ಥಳದಲ್ಲಿ ಕೂರಲು ಬಂದರೂ ಅವರನ್ನು ತಡೆಯುತ್ತಿದ್ದ ಪೊಲೀಸರು, ಕೂರಲು ಅವಕಾಶ ನೀಡದೆ ಪಾಸ್ ತೋರಿಸಿ, ಐಡಿ ಕಾರ್ಡ್ ತೋರಿಸಿ ಎಂದು ಹೊರಗಡೆ ಕಳುಹಿಸುತ್ತಿದ್ದರು. ವಿವಿಐಪಿ ನಂತರದ ಗ್ಯಾಲರಿಗಳು ತುಂಬಿ ತುಳುಕುತ್ತಿದ್ದರೆ, ವಿಐಪಿ ಗ್ಯಾಲರಿಯಲ್ಲಿದ್ದ ಕುರ್ಚಿಗಳು ಬಹುತೇಕ ಖಾಲಿ ಇದ್ದವು.

ಮೆರಗು ನೀಡಿದ ವಿಂಟೇಜ್ ಕಾರ್ ರ‍್ಯಾಲಿ



ದಾನ ಮಾಡುವ ಮನಸ್ಸಿರುವುದಿಲ್ಲ. ಆದರೆ, ಶೆಣೈ ಅವರು ಯಾವುದೇ ಪ್ರತಿಫಲಾಪೇಕ್ಷೆ ಇಲ್ಲದೆ, ಪ್ರಚಾರವನ್ನೂ ಬಯಸದೇ ದೇವಸ್ಥಾನ, ಧಾರ್ಮಿಕ ಕಾರ್ಯಗಳಿಗೆ ನೆರವು ನೀಡುತ್ತಾರೆ ಎಂದರು. ರಾಯಲ್ ಫ್ಯಾಮಿಲಿ ಕಾರುಗಳು, ಹಳೇ ಐಷರಾಮಿ ಕಾರುಗಳನ್ನು ಸಂಗ್ರಹಿಸಲು ಆಸಕ್ತಿ ತೋರುತ್ತಿರುವ ಗೋಪಿನಾಥ ಶೆಣೈ, ಕಳೆದ 20 ವರ್ಷಗಳಿಂದ ಹಳೇ ವಿಂಟೇಜ್ ಕಾರುಗಳ ಸಂಗ್ರಹ ಮತ್ತು ನಿರ್ವಹಣೆಯಲ್ಲಿ ಆಸಕ್ತಿ ತೋರುತ್ತಿದ್ದಾರೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು. ಇದೇ ವೇಳೆ ಈ ಹಿಂದೆ ಕೈನಲ್ಲಿ ಪೆಡ್ಲಿಂಗ್ ಮಾಡಿ ವಾಹನಗಳಿಗೆ ಇಂಧನ ತುಂಬುತ್ತಿದ್ದ ಹ್ಯಾಂಡ್ ಪೆಟ್ರೋಲ್ ಪಂಪ್ ಅನ್ನೂ ಸಂಗ್ರಹಿಸಿರುವ ಎಂ. ಗೋಪಿನಾಥ ಶೆಣೈ ಇಂದು ಅದನ್ನು ಸಹ ಪ್ರದರ್ಶಿಸಿದ್ದು ವಿಶೇಷವಾಗಿತ್ತು.

ಸಂಚಾರ ಆರಂಭ

ಧಾರವಾಡಕ್ಕೆ ಅ.22ಮತ್ತು 24ರಂದು ಎರಡು ಬಾರಿ ಸಂಚರಿಸಲಿದ್ದು, ಮೈಸೂರಿನಿಂದ ರಾತ್ರಿ 10.35ಕ್ಕೆ ಹೊರಟು ಮರುದಿನ ಬೆಳಿಗ್ಗೆ 8ಕ್ಕೆ ಧಾರವಾಡ ತಲುಪುತ್ತದೆ. ಹಾಗೆಯೇ ರೈಲು ಸಂಖ್ಯೆ 06206 ಧಾರವಾಡದಿಂದ ಮೈಸೂರಿಗೆ ಅ.23 ಮತ್ತು 25ರಂದು ಪ್ರಯಾಣಿಸಲಿದ್ದು, ಧಾರವಾಡದಿಂದ ಬೆಳಿಗ್ಗೆ 11.15ಕ್ಕೆ ಹೊರಟು ರಾತ್ರಿ 9.30ಕ್ಕೆ ಮೈಸೂರು ತಲುಪಲಿದೆ ಈ ರೈಲುಗಳು ಕೆ.ಆರ್.ನಗರ, ಹೊಳೆನರಸೀಪುರ, ಹಾಸನ, ಅರಸೀಕೆರೆ, ಕಡೂರು, ಬೀರೂರು, ಚಿಕ್ಕಜಾಜೂರು, ದಾವಣಗೆರೆ, ಹರಿಹರ, ರಾಣೆಬೆನ್ನೂರು, ಬ್ಯಾಡಗಿ, ಹಾವೇರಿ ಮತ್ತು ಹುಬ್ಬಳ್ಳಿಯಲ್ಲಿ ನಿಲುಗಡೆ ನೀಡಲಿವೆ. ಈ ರೈಲುಗಳು ಒಂದು 2ನೇ ದರ್ಜೆ ಎಸಿ, ಮೂರು 3ನೇ ದರ್ಜೆ ಎಸಿ, ಎಂಟು ಸ್ಲೀಪರ್ ದರ್ಜೆ ಮತ್ತು ನಾಲ್ಕು ದ್ವಿತೀಯ ದರ್ಜೆ ಆಸನದ ಕೋಚ್‌ಗಳ ಸಂಯೋಜನೆ ಹೊಂದಿವೆ ಎಂದು ನೈರುತ್ಯ ರೈಲ್ವೆ ಮೈಸೂರು ವಿಭಾಗದ ಹಿರಿಯ ವಿಭಾಗೀಯ ವಾಣಿಜ್ಯ ವ್ಯವಸ್ಥಾಪಕ ಜೆ.ಲೋಹಿತೇಶ್ವರ ತಿಳಿಸಿದ್ದಾರೆ.

ಮೈಸೂರು–ವಿಜಯಪುರ: ರೈಲು ಸಂಖ್ಯೆ 06203 ಇಂದು ಸಂಜೆ ಮೈಸೂರಿನಿಂದ ಪ್ರಯಾಣ ಆರಂಭಿಸಿದ್ದು, ವಿಜಯಪುರಕ್ಕೆ ಶನಿವಾರ ಬೆಳಗ್ಗೆ 10ಕ್ಕೆ ತಲುಪಲಿದೆ. ರೈಲು ಸಂಖ್ಯೆ 06204 ವಿಜಯಪುರದಿಂದ ಶನಿವಾರ ಬೆಳಿಗ್ಗೆ 11.45ಕ್ಕೆ ಹೊರಟು ಮರುದಿನ ಮುಂಜಾನೆ 3ಕ್ಕೆ ಮೈಸೂರು ತಲುಪುತ್ತದೆ. ಬಾಗಲಕೋಟೆ, ಬಾದಾಮಿ, ಹೊಳೆ ಆಲೂರು, ಹುಬ್ಬಳ್ಳಿ, ಕಾರಜಗಿ, ಹಾವೇರಿ, ರಾಣೆಬೆನ್ನೂರು, ಹರಿಹರ, ದಾವಣಗೆರೆ, ಬೀರೂರು, ಅರಸೀಕೆರೆ, ಹಾಸನ, ಹೊಳೆನರಸೀಪುರ ಮತ್ತು ಕೆ.ಆರ್.ನಗರದಲ್ಲಿ ನಿಲುಗಡೆ ನೀಡಲಿದೆ.

ಸಮಯ ಪರಿಷ್ಕರಣೆ ಮೈಸೂರಿನಿಂದ ಚಾಮರಾಜನಗರ ಮತ್ತು ಮೈಸೂರಿನಿಂದ ಕೆಎಸ್‌ಆರ್ ಬೆಂಗಳೂರು ನಡುವೆ ಸಂಚರಿಸುವ ದಸರಾ ವಿಶೇಷ ರೈಲುಗಳ ಸಮಯ ಪರಿಷ್ಕರಿಸಲಾಗಿದೆ. ರೈಲು ಸಂಖ್ಯೆ 06597 ಕೆಎಸ್‌ಆರ್ ಬೆಂಗಳೂರಿನಿಂದ ಸಂಜೆ 5ಕ್ಕೆ ಹೊರಟು ರಾತ್ರಿ 8.15ಕ್ಕೆ ಮೈಸೂರು ತಲುಪಲಿದೆ ಮತ್ತು ಪ್ರತಿಯಾಗಿ ರೈಲು ಸಂ.06598 ಮೈಸೂರಿನಿಂದ ರಾತ್ರಿ 8.30ಕ್ಕೆ ಹೊರಟು ರಾತ್ರಿ 11.30ಕ್ಕೆ ಕೆಎಸ್‌ಆರ್ ಬೆಂಗಳೂರು ತಲುಪಲಿದೆ. ಇಂದಿನಿಂದ ಅ.24ರವರೆಗೆ ಈ ವೇಳಾಪಟ್ಟಿಯಂತೆ ಸಂಚರಿಸಲಿವೆ. ರೈಲು ಸಂ.06283 ಮೈಸೂರಿನಿಂದ ಅ.24ರಂದು ರಾತ್ರಿ 8.45ಕ್ಕೆ ಹೊರಟು ರಾತ್ರಿ 10.40ಕ್ಕೆ ಚಾಮರಾಜನಗರ ತಲುಪಲಿದೆ. ಅಲ್ಲಿಂದ ರಾತ್ರಿ 11ಕ್ಕೆ ಹೊರಟು ಮಧ್ಯರಾತ್ರಿ 1ಕ್ಕೆ ಮೈಸೂರಿಗೆ ತಲುಪುತ್ತದೆ ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಪಾಕ್ ವಿರುದ್ಧ ಆಸೀಸ್‌ಗೆ ಭರ್ಜರಿ ಜಯ

ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಪಂದ್ಯ ವೀಕ್ಷಿಸಿದ ಸಿಎಂ ಸಿದ್ದರಾಮಯ್ಯ



ಬೆಂಗಳೂರು, ಅ.20– ಡೇವಿಡ್ ವಾರ್ನರ್ ಹಾಗೂ ಮಿಚೆಲ್ ಮಾರ್ಷ್ ಅವರ ಶತಕ ಹಾಗೂ ಆಡಂ ಝಂಪಾ ಸ್ಪಿನ್ ದಾಳಿ ನೆರವಿನಿಂದ ಆಸ್ಟ್ರೇಲಿಯಾ ಪಾಕಿಸ್ತಾನದ ವಿರುದ್ಧ 62 ರನ್‌ಗಳ ಭರ್ಜರಿ ಜಯ ಸಾಧಿಸಿದೆ.

ಆಸ್ಟ್ರೇಲಿಯಾ ನೀಡಿದ 368 ರನ್‌ಗಳ ಬೃಹತ್ ಗುರಿ ಬೆನ್ನತ್ತಿದ ಪಾಕಿಸ್ತಾನ 45.3 ಓವರ್‌ಗಳಲ್ಲಿ 305 ರನ್ ಗಳಿಗೆ ಆಲೌಟಾಗುವ ಮೂಲಕ ಸೋಲು ಅನುಭವಿಸಿತು. ಪಾಕಿಸ್ತಾನದ ಪರ ಅಬ್ದುಲ್ಲಾ ಶಫೀಕ್ 64, ಇಮಾಮ್ ಉಲ್ ಹಕ್ 70, ನಾಯಕ ಬಾಬರ್ ಆಜಂ 18, ಮೊಹಮ್ಮದ್ ರಿಜ್ವಾನ್ 46, ಸೌದ್ ಶಕೀಲ್ 30, ಇಫ್ತಿಕಾರ್ ಅಹ್ಮದ್ 26, ಮೊಹಮ್ಮದ್ ನವಾಜ್ 14, ಶಾಹೀನ್ ಶಾ ಅಫ್ರಿದಿ 10, ಹಸನ್ ಅಲಿ 8 ರನ್ ಗಳಿಸಿದರು.

ಆಸೀಸ್ ಪರ ಆಡಂ ಝಂಪಾ 4, ಮಾರ್ಕಸ್ ಸ್ಟೋಯ್ನಿಸ್ ಮತ್ತು ಪ್ಯಾಟ್ ಕಮ್ಮಿನ್ಸ್ ತಲಾ 2 ಹಾಗೂ ಮಿಚೆಲ್ ಸ್ಟಾರ್ಕ್, ಜೋಸ್ ಹ್ಯಾಜಲ್‌ವುಡ್ ತಲಾ ಒಂದೊಂದು ವಿಕೆಟ್ ಪಡೆದು ಮಿಂಚಿದರು.

ಇದಕ್ಕೂ ಮುನ್ನ ಟಾಸ್ ಸೋತು ಮೊದಲು ಬ್ಯಾಟಿಂಗ್ ಮಾಡಿದ ಆಸ್ಟ್ರೇಲಿಯಾ 50 ಓವರ್‌ಗಳಲ್ಲಿ 9 ವಿಕೆಟ್ ನಷ್ಟಕ್ಕೆ 367 ರನ್ ಗಳಿಸಿತ್ತು. ಆರಂಭಿಕ ರಾಗಿ ಕಣಕ್ಕಿಳಿದ ಮಿಚೆಲ್ ಮಾರ್ಷ್ ಹಾಗೂ ಡೇವಿಡ್ ವಾರ್ನರ್ ಜೋಡಿ ಮೊದಲ ವಿಕೆಟ್‌ಗೆ 259ರನ್ ಗಳ ಜೊತೆಯಾಟವಾಡುವ ಮೂಲಕ ತಂಡಕ್ಕೆ ಭರ್ಜರಿ ಆರಂಭ ಒದಗಿಸಿತು. ಈ ವೇಳೆ 108 ಎಸೆತಗಳಲ್ಲಿ 10 ಬೌಂಡರಿ, 9 ಸಿಕ್ಸರ್ ಒಳಗೊಂಡ 121 ರನ್ ಗಳಿಸಿ ಮಿಚೆಲ್ ಮಾರ್ಷ್ ನಿರ್ಗಮಿಸಿದರು. ಮತ್ತೊಂದೆಡೆ 124 ಎಸೆತಗಳಲ್ಲಿ 14 ಬೌಂಡರಿ, 9 ಸಿಕ್ಸರ್‌ಗಳೊಂದಿಗೆ 163 ರನ್ ಬಾರಿಸಿ ಡೇವಿಡ್ ವಾರ್ನರ್ ಪೆವಿಲಿಯನ್‌ಗೆ ಮರಳಿದರು. ನಂತರ ಬಂದ ಮಾರ್ಕಸ್ ಸ್ಟೋಯ್ನಿಸ್ 21, ಜೋಶ್ ಇಂಗ್ಲಿಸ್ 13 ರನ್ ಗಳಿಸಿದ್ದು ಬಿಟ್ಟರೇ ಉಳಿದವರು ಎರಡಂಕಿ ಮೊತ್ತ ದಾಖಲಿಸಲು ಸಾಧ್ಯವಾಗದೇ ಪೆವಿಲಿಯನ್ ಪರೇಡ್ ನಡೆಸಿದರು. ಪಾಕ್ ಪರ ಶಾಹೀನ್ ಶಾ ಅಫ್ರಿದಿ 5, ಹ್ಯಾರಿಸ್ ರೌಫ್ 3, ಉಸ್ಮಾನ್ ಮಿರ್ 1 ವಿಕೆಟ್ ಪಡೆದರು. ಡೇವಿಡ್ ವಾರ್ನರ್ ಪಂದ್ಯಶ್ರೇಷ್ಠ ಪ್ರಶಸ್ತಿ ಪಡೆದರು.

ಸಿಎಂ ಸಿದ್ದರಾಮಯ್ಯ ಪಂದ್ಯ ವೀಕ್ಷಣೆ: ಇಲ್ಲಿನ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಶುಕ್ರವಾರ ನಡೆದ ಭಾರತ–ಪಾಕಿಸ್ತಾನ ನಡುವಿನ ಪಂದ್ಯವನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ವೀಕ್ಷಿಸಿದರು. 2023 ಐಪಿಎಲ್ ಟೂರ್ನಿ ವೇಳೆ ಆರ್‌ಸಿಬಿ ಮ್ಯಾಚ್ ವೀಕ್ಷಣೆ ಮಾಡಿದ್ದ ಸಿಎಂ ಇಂದು ಕೂಡ ಕ್ರೀಡಾಂಗಕ್ಕೆ ಆಗಮಿಸಿ ಪಂದ್ಯ ವೀಕ್ಷಣೆ ಮಾಡಿದರು.

ಸಿಎಂ ಜೊತೆಗೆ ವಿಐಪಿ ವಿಂಗ್‌ನಲ್ಲಿ ಕುಳಿತು ಸಚಿವ ಭೈರತಿ ಸುರೇಶ್, ರಾಜಕೀಯ ಕಾರ್ಯದರ್ಶಿ ಗೋವಿಂದರಾಜು ಮತ್ತು ನಸೀರ್ ಅಹಮದ್ ಕ್ರಿಕೆಟ್ ವೀಕ್ಷಿಸಿದರು.

ಅಜರುದ್ದೀನ್ ಮೇಲೆ ಮತ್ತೊಂದು ಎಫ್‌ಐಆರ್ ದಾಖಲು

ಹೈದರಾಬಾದ್: ಭಾರತ ಕ್ರಿಕೆಟ್ ತಂಡದ ಮಾಜಿ ನಾಯಕ ಮೊಹಮ್ಮದ್ ಅಜರುದ್ದೀನ್ ಅವರು ಭ್ರಷ್ಟಾಚಾರದ ಗಂಭೀರ ಆರೋಪಗಳನ್ನು ಎದುರಿಸುತ್ತಿದ್ದಾರೆ. ಸಂಸ್ಥೆಯ ನಿಧಿ ದುರುಪಯೋಗದ ಆರೋಪದ ಮೇಲೆ ಅಜರುದ್ದೀನ್ ಮತ್ತು ಹೈದರಾಬಾದ್ ಕ್ರಿಕೆಟ್ ಸಂಸ್ಥೆ (ಎಚ್‌ಸಿಎ)ಯ ಕೆಲವು ಮಾಜಿ ಪದಾಧಿಕಾರಿಗಳ ವಿರುದ್ಧ ಪ್ರಕರಣ ದಾಖಲಿಸಲಾಗಿದೆ.



ಸಂಘದ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಸುನೀಲ್ ಬೋಸ್ ಅವರ ದೂರಿನ ಆಧಾರದ ಮೇಲೆ ಎಚ್‌ಸಿಎ ಮಾಜಿ ಅಧ್ಯಕ್ಷ ಅಜರುದ್ದೀನ್ ಮತ್ತು ಇತರ ಮಾಜಿ ಪದಾಧಿಕಾರಿಗಳ ವಿರುದ್ಧ ಉಪ್ಪಳ ಪೊಲೀಸ್ ಠಾಣೆಯಲ್ಲಿ ಭಾರತೀಯ ದಂಡ ಸಂಹಿತೆಯ ಸಂಬಂಧಿತ ಸೆಕ್ಷನ್‌ಗಳ ಅಡಿಯಲ್ಲಿ ಪ್ರಕರಣ ದಾಖಲಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಆರೋಪದ ಬಗ್ಗೆ ಅಜರುದ್ದೀನ್ ಹೇಳಿದ್ದೇನು: ಅಜರುದ್ದೀನ್ ತನ್ನ ವಿರುದ್ಧದ ಆರೋಪಗಳು ಸುಳ್ಳು ಮತ್ತು ಆಧಾರರಹಿತ ಪಿತೂರಿ ಎಂದು ಹೇಳಿದ್ದಾರೆ. ಭಾರತ ಕ್ರಿಕೆಟ್ ತಂಡದ ನಾಯಕರಾಗಿದ್ದ ಅಜರುದ್ದೀನ್ ವಿವಾದಗಳೊಂದಿಗೆ ಸಂಬಂಧ ಹೊಂದಿದ್ದಾರೆ. ಈ ಹಿಂದೆಯೂ ಹಲವು ವಿವಾದಗಳಲ್ಲಿ ಅವರ ಹೆಸರು ಕೇಳಿಬಂದಿತ್ತು.

ಮ್ಯಾಚ್ ಫಿಕ್ಸಿಂಗ್ ಆರೋಪ: ಅಜರುದ್ದೀನ್ ಒಬ್ಬ ಅದ್ಭುತ ಕ್ರಿಕೆಟಿಗ. ಈಗಲೂ ಅವರ ಬ್ಯಾಟಿಂಗ್ ಅನ್ನು ಜನರು ಇಷ್ಟಪಡುತ್ತಾರೆ. ಆದರೆ 2000ರಲ್ಲಿ ಅವರು ಮ್ಯಾಚ್ ಫಿಕ್ಸಿಂಗ್ ಆರೋಪಕ್ಕೆ ಒಳಗಾಗಿದ್ದರು. ನಂತರ ಅವರನ್ನು ನಿಷೇಧಿಸಲಾಯಿತು. ಸುದೀರ್ಘ ಕಾನೂನು ಹೋರಾಟ ನಡೆಸಿದ ಅವರು 12 ವರ್ಷಗಳ ನಂತರ ಆಂಧ್ರಪ್ರದೇಶ ಹೈಕೋರ್ಟ್‌ನಿಂದ ಪರಿಹಾರ ಪಡೆದರು. ಅಷ್ಟರೊಳಗೆ ಅವರ ವೃತ್ತಿಜೀವನ ಮುಗಿದಿತ್ತು.

ಇಡೀ ಜಗತ್ತು ಮೈಸೂರಿನತ್ತ ಆಕರ್ಷಿತವಾಗಲು ಇಲ್ಲಿ ಆಳಿದಂತಹ ಮಹಾರಾಜರೇ ಕಾರಣ

● ಪ್ರವಾಸೋದ್ಯಮ ಸಚಿವ ಹೆಚ್.ಕೆ.ಪಾಟೀಲ್ ಗುಣಗಾನ ● ಸಾಂಪ್ರದಾಯಿಕ ಧಿರಿಸಿನಲ್ಲಿ ಸಚಿವ ದಂಪತಿ ಸೇರಿ ಹಲವು ಜೋಡಿಗಳ ಟಾಂಗಾ ಸವಾರಿ





ಮೈಸೂರು, ಅ.20– ವಿಜಯನಗರ ಸಾಮ್ರಾಜ್ಯ ಆಚರಿಸಿಕೊಂಡು ಬಂದಿದ್ದ ದಸರಾ ಉತ್ಸವವನ್ನು ಮೈಸೂರಿನ ಮಹಾರಾಜರು ಮುಂದುವರೆಸಿಕೊಂಡು ಬರುವ ಮೂಲಕ ಇಡೀ ಜಗತ್ತು ಮೈಸೂರಿನತ್ತ ನೋಡುವಂತೆ ಮಾಡಿದ್ದಾರೆ. ಇದಕ್ಕೆ ಮೈಸೂರು ಮಹಾರಾಜರಿಗೆ ನಾಡಿನ ಬಗ್ಗೆ ಇದ್ದ ಅಭಿಮಾನವೇ ಕಾರಣ ಎಂದು ಕಾನೂನು ಮತ್ತು ಸಂಸದೀಯ ವ್ಯವಹಾರ ಹಾಗೂ ಪ್ರವಾಸೋದ್ಯಮ ಸಚಿವ ಹೆಚ್.ಕೆ. ಪಾಟೀಲ್ ಅಭಿಪ್ರಾಯಪಟ್ಟರು.

ಪುರಾತತ್ವ, ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆಯ ವತಿಯಿಂದ ಪಾರಂಪರಿಕ ಉಡುಗೆಯಲ್ಲಿ ನೂತನ ದಂಪತಿಗಳಿಗಾಗಿ ಆಯೋಜಿಸಿದ್ದ ಪಾರಂಪರಿಕ ಟಾಂಗಾ ಸವಾರಿಯ ಕಾರ್ಯಕ್ರಮ ಇಂದು ಬೆಳಗ್ಗೆ ಪುರಾತತ್ವ ಇಲಾಖೆಯ ಆಯುಕ್ತರಾದ ದೇವರಾಜು, ಮಹಾಪೌರ ಶಿವಕುಮಾರ್, ಪ್ರವಾಸೋದ್ಯಮ ಇಲಾಖೆಯ ಜಂಟಿ ನಿರ್ದೇಶಕಿ ಸವಿತಾ ಸುನೀಲ್ ಬೋಸ್ ದಂಪತಿಗೆ ಬಾಗಿನ ನೀಡುವ ಮೂಲಕ ಉದ್ಘಾಟಿಸಿ, ಮಾತನಾಡಿದರು.

ಇಡೀ ಕನ್ನಡ ನಾಡಿನ ಹಬ್ಬವಾಗಿರುವ ದಸರಾ, ಮೈಸೂರಿಗಾಗಲೀ, ನಾಡಿಗಾಗಲೀ ಸೀಮಿತವಾಗಿಲ್ಲ, ವಿಶ್ವವಿಖ್ಯಾತವಾಗಿರುವ ಈ ದಸರಾ ಇಡೀ ವಿಶ್ವಕ್ಕೆ ಶ್ರೇಷ್ಠವಾಗಿದೆ. ರಾಜ್ಯದ ಮುಖ್ಯಮಂತ್ರಿಗಳಾದ ಸಿದ್ದರಾಮಯ್ಯ ಹಾಗೂ ಮೈಸೂರು ಜಿಲ್ಲಾ ಉಸ್ತುವಾರಿ ಸಚಿವರಾದ ಡಾ. ಎಚ್.ಸಿ.ಮಹದೇವಪ್ಪ ದಸರಾ ಮಹೋತ್ಸವದ ಬಗ್ಗೆ ಅಪಾರ ಕಾಳಜಿ ವಹಿಸಿ, ದಸರಾ ಯಶಸ್ವಿಯಾಗಲು ಶ್ರಮಿಸುತ್ತಿದ್ದಾರೆ ಎಂದರು.

ಪಾರಂಪರಿಕ ಕಟ್ಟಡಗಳು, ಸ್ಮಾರಕಗಳು ನಿಮ್ಮ ಊರಿನಲ್ಲಿಯೇ ಇದ್ದರೆ ಅಂತಹ ಸ್ಮಾರಕವನ್ನೂ ರಕ್ಷಿಸುವ ಹಕ್ಕು ನಿಮಗಿರುತ್ತದೆ.

> ರಾಜ್ಯದಲ್ಲಿ ಒಟ್ಟು 25 ಸಾವಿರ ಪಾರಂಪರಿಕ ಕಟ್ಟಡಗಳು, ಸ್ಮಾರಕಗಳಿವೆ. ಇವುಗಳಲ್ಲಿ 500 ರಿಂದ 600 ಪಾರಂಪರಿಕ ಕಟ್ಟಡಗಳನ್ನು ಸರ್ಕಾರ ಗುರುತಿಸಿದೆ. ಇನ್ನೂ 500 ಪಾರಂಪರಿಕ ಕಟ್ಟಡಗಳನ್ನು ಗುರುತಿಸಿ ಉಳಿಸಿ ಸಂರಕ್ಷಿಸಲು ಯೋಜನೆಯನ್ನು ರೂಪಿಸಲಾಗುತ್ತಿದೆ. ಎಲ್ಲಾ ಪಾರಂಪರಿಕ ಕಟ್ಟಡಗಳಾಗಲೀ, ಸ್ಮಾರಕಗಳನ್ನಾಗಲೀ ಸರ್ಕಾರ ಒಂದೇ ಮಾಡಲು ಆಗಲ್ಲ ಅದಕ್ಕೆ ಜನಸಾಮಾನ್ಯರ ಸಹಕಾರ ಬೇಕಾಗುತ್ತದೆ.
>
> -ಹೆಚ್.ಕೆ.ಪಾಟೀಲ್, ಪ್ರವಾಸೋದ್ಯಮ ಸಚಿವ

ದತ್ತು ತೆಗೆದುಕೊಂಡು ಇಂತಹುಗಳನ್ನು ರಕ್ಷಿಸಬಹುದಾಗಿದೆ. ಇಂತಹ ಕಟ್ಟಡಗಳನ್ನು ರಕ್ಷಿಸಲು ಜನರನ್ನು ಉತ್ತೇಜಿಸಲು ರಾಜ್ಯ ಸರ್ಕಾರವು "ನಮ್ಮ ಸ್ಮಾರಕಗಳ ದತ್ತು ಕಾರ್ಯಕ್ರಮ"ವನ್ನು ಹಮ್ಮಿಕೊಂಡಿದ್ದು, ಅದು ಯಶಸ್ವಿಯಾಗಿ ಸಾಗುತ್ತಿದೆ ಎಂದರು.

ಅಮೇರಿಕಾದ ಅನಿವಾಸಿ ಭಾರತಿಯರೊಡನೆ ಆನ್‌ಲೈನ್ ಮೂಲಕ (ಜೂಮ್ ಮಿಟಿಂಗ್) ಪಾರಂಪರಿಕ ಕಟ್ಟಡಗಳ ದತ್ತು ತೆಗೆದುಕೊಳ್ಳುವ ಸಂಬಂಧ ಚರ್ಚಿಸಿದ್ದೇನೆ. ಇದರಿಂದಾಗಿ ಸುಮಾರು 20 ಅನಿವಾಸಿ ಭಾರತೀಯರು ಪಾರಂಪರಿಕ ಕಟ್ಟಡಗಳನ್ನು ದತ್ತು ತೆಗೆದುಕೊಂಡು ಸಂರಕ್ಷಿಸುವ ಭರವಸೆ ನೀಡಿದ್ದಾರೆ ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಕರ್ನಾಟಕ ವಸ್ತು ಪ್ರದರ್ಶನ ಪ್ರಾಧಿಕಾರದ ಮುಖ್ಯ ಕಾರ್ಯನಿರ್ವಹಕರಾದ ರಾಜಶೇಖರ್ ಸೇರಿದಂತೆ ಇತರರು ಹಾಜರಿದ್ದರು.

ಇದೇ ವೇಳೆ ಸಚಿವ ಹೆಚ್.ಕೆ.ಪಾಟೀಲ್–ಶ್ರೀಮತಿ ಹೇಮಾ, ಮೇಯರ್ ಶಿವಕುಮಾರ್–ಶ್ರೀಮತಿ ದೀಪಾ, ಪುರಾತತ್ವ ಆಯುಕ್ತ ದೇವರಾಜ್–ಶ್ರೀಮತಿ ಜಿ.ಕವಿತಾ, ಪ್ರವಾಸೋದ್ಯಮ ಜಂಟಿ ನಿರ್ದೇಶಕಿ ಎಂ.ಕೆ.ಸವಿತಾ, ಇತಿಹಾಸ ತಜ್ಞ ಪ್ರೊ. ಎನ್.ಎಸ್.ರಂಗರಾಜ್ ಇತರರು ಟಾಂಗಾ ಸವಾರಿ ಮಾಡಿ ನೆರೆದವರ ಗಮನ ಸೆಳೆದರು. ಈ ಟಾಂಗಾ ಸವಾರಿ ದೊಡ್ಡ ಗಡಿಯಾರ, ಅರಮನೆ ಉತ್ತರ ದ್ವಾರ, ಕೆ.ಆರ್.ಸರ್ಕಲ್, ಲ್ಯಾನ್ಸ್‌ಡೌನ್ ಬಿಲ್ಡಿಂಗ್, ಜಗನ್ಮೋಹನ ಅರಮನೆ, ಹಳೇ ಡಿಸಿ ಕಚೇರಿ, ಮೆಟ್ರೋಪೋಲ್ ಸರ್ಕಲ್, ರೈಲ್ವೆ ನಿಲ್ದಾಣ, ಸರ್ಕಾರಿ ಆಯುರ್ವೇದ ಕಾಲೇಜು ಸರ್ಕಲ್, ಕಾವಾ ಹಳೇ ಕಟ್ಟಡ, ಓಲ್ಡ್ ಬ್ಯಾಂಕ್ ರಸ್ತೆ ಗಾಂಧಿ ಸ್ಕ್ವೇರ್ ಮಾರ್ಗ ಸಾಗಿ ಪುರಭವನದ ಆವರಣ ತಲುಪಿತು.





ಮೈಸೂರಿನ ಸಿದ್ಧಾರ್ಥನಗರ ಹಾಗೂ ಗೋಕುಲಂನಲ್ಲಿ ಎಂ.ಎಸ್.ನಾರಾಯಣ ಸ್ವೀಟ್ಸ್ ಸ್ಟಾಲ್‌ನ್ನು ಶಾಸಕ ಟಿ.ಎಸ್.ಶ್ರೀವತ್ಸ ಉದ್ಘಾಟಿಸಿದರು. ಸಂಸ್ಥೆಯ ಮ್ಯಾನೇಜಿಂಗ್ ಡೈರೆಕ್ಟರ್ ಹೃತ್ವಿಕ್, ಸಂಸ್ಥಾಪಕಿ ಶೈಲಜಾ, ಚಂದನ್ ಇತರರಿದ್ದರು.

ಪುಸ್ತಕೋದ್ಯಮಕ್ಕೆ ಸರ್ಕಾರದಿಂದ ಅನುದಾನ ಕಲ್ಪಿಸಬೇಕು

ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್ ಆಗ್ರಹ



ಮೈಸೂರು,ಅ20(ಎಸ್‌ಪಿಎನ್)– ಪುಸ್ತಕೋದ್ಯಮವನ್ನು ನಿರ್ಲಕ್ಷ್ಯಿಸುವುದು ಸರಿಯಾದ ಕ್ರಮವಲ್ಲ. ಹಾಗಾಗಿ ರಾಜ್ಯ ಸರ್ಕಾರ ಪುಸ್ತಕೋದ್ಯಮಕ್ಕೆ ಹೆಚ್ಚಿನ ಅನುದಾನ ನೀಡಿ, ಪ್ರೋತ್ಸಾಹಿಸಬೇಕು ಎಂದು ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್ ಆಗ್ರಹಿಸಿದರು.

ಮೈಸೂರು ವಿವಿ ಓವೆಲ್ ಮೈದಾನದಲ್ಲಿ ಕರ್ನಾಟಕ ಜಾನಪದ, ಸಾಹಿತ್ಯ, ಯಕ್ಷಗಾನ, ನಾಟಕ, ಸಂಗೀತ, ನೃತ್ಯ, ಶಿಲ್ಪಕಲಾ ಹಾಗೂ ಲಲಿತಾಕಲಾ ಸಹಯೋಗದೊಂದಿಗೆ ಆಯೋಜಿಸಿದ್ದ ಮೈಸೂರು ದಸರಾ ಮಹೋತ್ಸವ–2023ರ ಐದನೇ ದಿನದ 'ಕನ್ನಡ ಪುಸ್ತಕಗಳ ರಿಯಾಯಿತಿ ಮಾರಾಟ ಮೇಳ'ದಲ್ಲಿ 'ಸಾಹಿತಿಗಳೊಂದಿಗೆ ಸೆಲ್ಫಿ' ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ನಾಡಿನ ಪ್ರಮುಖ ಪ್ರಕಾಶಕರು, ಈ ಬಾರಿ ದಸರಾ ಪುಸ್ತಕ ಮೇಳದಲ್ಲಿ ಭಾಗವಹಿಸಿದ್ದು, ದಸರಾ ಮೇಳಕ್ಕೆ ಮೆರಗು ತಂದಿದ್ದಾರೆ. ಅಲ್ಲದೆ, ಈ ಬಾರಿ ದಸರಾ ಮೇಳಕ್ಕೆ ನೀಡಿರುವ ಮೈಸೂರು ವಿವಿ ಓವೆಲ್ ಮೈದಾನ ಎಲ್ಲಾ ರೀತಿಯಿಂದಲೂ ಸೂಕ್ತವಾಗಿದ್ದು, ವಾಹನಗಳ ಪಾರ್ಕಿಂಗ್, ಮಳಿಗೆದಾರರಿಗೆ ವಿಶಾಲ ಜಾಗ ಸೇರಿದಂತೆ ಎಲ್ಲಾ ರೀತಿಯಿಂದಲೂ ಈ ಜಾಗ ಸೂಕ್ತವಾಗಿದೆ ಎಂದು ಅಭಿಪ್ರಾಯಪಟ್ಟರು.

ಮುಂದಿನ ಬಾರಿಯೂ ಇನ್ನು ಹೆಚ್ಚಿನ ಪ್ರಕಾಶಕರು ಈ ಪುಸ್ತಕ ಮೇಳದಲ್ಲಿ ಭಾಗವಹಿಸಿ, ನಾಡು–ನುಡಿ ಕ್ಷೇತ್ರಕ್ಕೆ ಈ ಮೇಳ ಉತ್ತಮ ವೇದಿಕೆಯಾಗಲಿ ಎಂದು ಆಶಿಸಿದರಲ್ಲದೆ, ಈ ಮೇಳದಲ್ಲಿ ಸಂಸ್ಕೃತಿ ಸುಬ್ರಹ್ಮಣ್ಯ ಹೆಚ್ಚಿನ ಮುತುವರ್ಜಿ ವಹಿಸಿದ್ದಾರೆ ಎಂದ ಅವರು, ಇತ್ತೀಚಿನ ದಿನಗಳಲ್ಲಿ ಮೊಬೈಲ್ ಮತ್ತು ದೃಶ್ಯ ಮಾಧ್ಯಮಗಳ ಹಾವಳಿಯಿಂದಾಗಿ ಓದುಗರ ಸಂಖ್ಯೆ ಕಡಿಮೆಯಾಗುತ್ತಿದ್ದು, ಈ ಪರಿಣಾಮ ಪುಸ್ತಕೋದ್ಯಮದ ಮೇಲೆ ಬೀರುತ್ತಿದೆ ಎಂಬ ಆರೋಪ ಪ್ರಕಾಶಕರ ವಲಯದಲ್ಲಿ ಕೇಳಿ ಬರುತ್ತಿದೆ. ಇದನ್ನು ನಾನು ಒಪ್ಪುವುದಿಲ್ಲ ಎಂದರು.

ಏಕೆಂದರೆ, ಯಾವುದೇ ಟಾಪರ್, ತಾನು ಮೊಬೈಲ್, ಟಿವಿ, ಸಾಮಾಜಿಕ ಜಾಲತಾಣ ಬಳಸಿ ರ‍್ಯಾಂಕ್ ಬಂದಿದ್ದೇನೆ ಎಂದೂ ಹೇಳಿಲ್ಲ. ಈಗಲೂ ಟಾಪರ್ ವಿದ್ಯಾರ್ಥಿಗಳು ತಮಗಿಷ್ಟವಾದ ಲೇಖಕರ ಪುಸ್ತಕಗಳನ್ನು ಓದಿ, ರ‍್ಯಾಂಕ್ ಬಂದಿದ್ದೇನೆ ಎಂದು ಹೇಳುವ ಪರಿಪಾಠ ಇದೆ. ಹಾಗಾಗಿ ಪ್ರಕಾಶಕರು ಆತಂಕಪಡುವ ಅವಶ್ಯಕತೆ ಇಲ್ಲ ಎಂದು ಅಭಿಪ್ರಾಯಪಟ್ಟರು.

> 2023ರ ದಸರಾ ಪುಸ್ತಕ ಮೇಳಕ್ಕೆ ದಸರಾ ಉಪ ಸಮಿತಿ ನೀಡಿರುವ ಜಾಗ ಉತ್ತಮವಾಗಿದೆ. ನಾನು ವಿವಿಧ ಮಳಿಗೆಗಳಿಗೆ ಭೇಟಿ ನೀಡಿ, ಪುಸ್ತಕ ಖರೀದಿಸಿದ್ದೇನೆ. ಮುಂದೆಯೂ ಇದೇ ಜಾಗದಲ್ಲಿ ಪುಸ್ತಕ ಮೇಳ ಆಯೋಜಿಸಲಿ, ಜೊತೆಗೆ ವಿವಿಧ ಕವಿಗೋಷ್ಠಿ, ಲಲಿತಾ ಕಲೆ, ಶಿಲ್ಪಕಲಾ ಪ್ರದರ್ಶನ, ಮಕ್ಕಳ ದಸರಾ, ವಿಚಾರಗೋಷ್ಠಿ ಸೇರಿದಂತೆ ಇತರೆ ಶೈಕ್ಷಣಿಕ ವಲಯದ ಕಾರ್ಯಕ್ರಮಗಳನ್ನು ಪುಸ್ತಕ ಮೇಳದಲ್ಲಿ ಆಯೋಜಿಸಿದರೆ, ದೂರದ ಊರುಗಳಿಂದ ಬರುವ ಪುಸ್ತಕ ಪ್ರಿಯರು ತಮಗಿಷ್ಟದ ಪುಸ್ತಕಗಳನ್ನು ಖರೀದಿಸಲು ಅನುಕೂಲವಾಗುತ್ತದೆ. ಅಲ್ಲದೆ, ದಸರಾ ಪುಸ್ತಕ ಮೇಳವನ್ನು 'ಶೈಕ್ಷಣಿಕ ದಸರಾ ಮೇಳ' ಶೀರ್ಷಿಕೆಯಡಿ ಆಯೋಜಿಸಬೇಕು.
>
> -ಸತೀಶ್ ಜವರೇಗೌಡ, ಯುವ ಸಾಹಿತಿ

ವೇದಿಕೆ ಕಾರ್ಯಕ್ರಮದ ನಂತರ ಜೆಎಸ್‌ಎಸ್ ಗ್ರಂಥ ಮಾಲೆ, ಅಭಿರುಚಿ ಪ್ರಕಾಶನ, ಸಂವಹನ, ಚಿಂತನ ಚಿತ್ತಾರ, ಕದಂಬ, ಕನ್ನಡ ಪುಸ್ತಕ ಪ್ರಾಧಿಕಾರ, ಕರ್ನಾಟಕ ಜಾನಪದ ವಿವಿ ಪ್ರಸಾರಾಂಗ ಮಳಿಗೆ, ಮೈಸೂರು ವಿವಿ ಪ್ರಸಾರಾಂಗ ಮಳಿಗೆ, ತನುಮನ ಪ್ರಕಾಶನ, ರೂಪ, ಧಾತ್ರಿ ಬುಕ್ ಹೌಸ್, ಅಂಕಿತ, ಸಪ್ನ ಬುಕ್ ಹೌಸ್ ಮಳಿಗೆಗಳಿಗೆ ಭೇಟಿ, ನೀಡಿ, ತಮಗಿಷ್ಟದ ಪುಸ್ತಕಗಳನ್ನು ತಿರುವಿ ಹಾಕಿದರು.

ಈ ವೇಳೆ ಮೈಸೂರು ವಿವಿ ಪ್ರಸಾರಾಂಗ ನಿರ್ದೇಶಕ ಡಾ.ನಂಜಯ್ಯ ಹೊನ್ನೂರು, ಚಿಂತನ ಚಿತ್ತಾರ ಪ್ರಕಾಶನದ ನಿಂಗರಾಜ್ ಚಿತ್ತಣ್ಣವರ್, ಸೇರಿದಂತೆ ಇತರೆ ಪ್ರಕಾಶಕರು ಜೊತೆಗೂಡಿ ಗ್ರೂಪ್ ತೆಗೆಸಿಕೊಂಡು ಸಂಭ್ರಮಪಟ್ಟರು.

ಜಯಪ್ರದಾಗೆ 6 ತಿಂಗಳ ಜೈಲು ಶಿಕ್ಷೆ ಖಚಿತಪಡಿಸಿದ ಮದ್ರಾಸ್ ಹೈಕೋರ್ಟ್

15 ದಿನದಲ್ಲಿ ಶರಣಾಗಲು ಆದೇಶ

ಚೆನ್ನೈ: ಖ್ಯಾತ ನಟಿ ಜಯಪ್ರದಾ ಅವರಿಗೆ ಕೆಳ ಹಂತದ ನ್ಯಾಯಾಲಯ ವಿಧಿಸಿದ್ದ 6 ತಿಂಗಳ ಜೈಲು ಶಿಕ್ಷೆಯನ್ನು ಮದ್ರಾಸ್ ಹೈಕೋರ್ಟ್ ಇಂದು (ಶುಕ್ರವಾರ) ಖಚಿತಪಡಿಸಿದೆ. 15 ದಿನದಲ್ಲಿ ಎಗ್ಮೋರ್ ಕೋರ್ಟ್‌ಗೆ ಶರಣಾಗುವಂತೆ ಹಾಗೂ 20 ಲಕ್ಷ ರೂ. ಠೇವಣಿ ಇಡುವಂತೆ ಸೂಚಿಸಿದೆ. ಕನ್ನಡ, ತೆಲುಗು ಹಾಗೂ ತಮಿಳು ಸೇರಿದಂತೆ ವಿವಿಧ ಭಾಷೆಗಳ ಸಿನಿಮಾಗಳಲ್ಲಿ ಅಭಿನಯಿಸಿರುವ ಜಯಪ್ರದಾ, ಸಂಸತ್ ಸದಸ್ಯರಾಗಿದ್ದರು. ಚೆನ್ನೈನಲ್ಲಿ ರಾಮಕುಮಾರ್, ರಾಜ್‌ಬಾಬು ಎಂಬವರೊಂದಿಗೆ ಸೇರಿ ಚಿತ್ರಮಂದಿರವನ್ನು ನಡೆಸುತ್ತಿರುವ ಇವರು, ಕಾರ್ಮಿಕರಿಂದ ಸಂಗ್ರಹಿಸಿದ ಇಎಸ್‌ಐ ಹಣವನ್ನು ರಾಜ್ಯ ವಿಮಾ ನಿಗಮಕ್ಕೆ ಪಾವತಿಸದ ಆರೋಪ ಎದುರಿಸುತ್ತಿದ್ದಾರೆ. ಇಎಸ್‌ಐ ಕಂಪನಿ ಕಡೆಯಿಂದ ಇಗ್ಮೋರ್ ಕೋರ್ಟ್‌ನಲ್ಲಿ ಐದು ಪ್ರಕರಣಗಳು ದಾಖಲಾಗಿವೆ. ಆಗಸ್ಟ್ 10ರಂದು ಜಯಪ್ರದಾ ಸೇರಿದಂತೆ ಮೂವರಿಗೆ 6 ತಿಂಗಳ ಜೈಲು ಶಿಕ್ಷೆ ಹಾಗೂ ತಲಾ 5 ಸಾವಿರ ರೂ. ದಂಡವನ್ನು ಕೋರ್ಟ್ ವಿಧಿಸಿತ್ತು ಈ ಆದೇಶ ಪ್ರಶ್ನಿಸಿ ಜಯಪ್ರದಾ ಹೈಕೋರ್ಟ್‌ನಲ್ಲಿ ಅರ್ಜಿ ಸಲ್ಲಿಸಿದ್ದರು.



ಪ್ರಕರಣದ ಹಿನ್ನೆಲೆ ಹೀಗಿದೆ..: ಚೆನ್ನೈನ ಅಣ್ಣಾ ಸಲೈನಲ್ಲಿ ಜಯಪ್ರದಾ, ರಾಮಕುಮಾರ್, ರಾಜ್‌ಬಾಬು ಸೇರಿಕೊಂಡು ಚಿತ್ರಮಂದಿರ ನಡೆಸುತ್ತಿದ್ದಾರೆ. ಇಲ್ಲಿನ ಕಾರ್ಮಿಕರಿಂದ 1991ರ ನವೆಂಬರ್‌ನಿಂದ 2002ರವರೆಗೆ 8.17 ಲಕ್ಷ ರೂ., 2002ರಿಂದ 2005ರವರೆಗೆ 1.58 ಲಕ್ಷ ರೂ., 2003ರಿಂದ 2003ರವರೆಗೆ 1.58 ಲಕ್ಷ ರೂ.ಗಳನ್ನು ಸಂಗ್ರಹಿಸಿ, ಅದನ್ನು ರಾಜ್ಯ ವಿಮಾ ನಿಗಮಕ್ಕೆ ಪಾವತಿಸದ ಆರೋಪ ಪ್ರಕರಣ ಇದಾಗಿದೆ.

ನಾಳೆ ಒರಿಸ್ಸಾ ಅಸೋಸಿಯೇಷನ್‌ನಿಂದ ಕಾವೇರಿ ಸಂಗೀತ, ನೃತ್ಯ ಉತ್ಸವ

ಮೈಸೂರು, ಅ.20– ಮೈಸೂರು ಒರಿಸ್ಸಾ ಅಸೋಸಿಯೇಷನ್‌ನಿಂದ ಕಾವೇರಿ ಸಂಗೀತ ಮತ್ತು ನೃತ್ಯ ಉತ್ಸವವನ್ನು ಅ.22ರ ಭಾನುವಾರ ಮಧ್ಯಾಹ್ನ 2 ಗಂಟೆಯ ನಂತರ ಮಂಡ್ಯ ಜಿಲ್ಲೆ ಶ್ರೀರಂಗಪಟ್ಟಣ ತಾಲೂಕಿನ ಬೆಳಗೊಳದ ಕಾವೇರಿ ತೀರದಲ್ಲಿನ ಶ್ರೀನಿವಾಸ ಕ್ಷೇತ್ರದಲ್ಲಿ ಏರ್ಪಡಿಸಲಾಗಿದೆ.

ಈ ಕಾರ್ಯಕ್ರಮಕ್ಕೆ ಮುಖ್ಯ ಅತಿಥಿಗಳಾಗಿ ಬೆಳಗೊಳದ ವಿಶ್ವಕ್ಷೇಮ ಟ್ರಸ್ಟ್‌ನ ಟ್ರಸ್ಟಿ ಹಾಗೂ ನಿರ್ದೇಶಕ ಲಕ್ಷ್ಮೀ ನಾರಾಯಣನ್, 'ಮೈಸೂರು ಮಿತ್ರ' ಹಾಗೂ 'ಸ್ಟಾರ್ ಆಫ್ ಮೈಸೂರ್' ಸಂಸ್ಥಾಪಕ ಸಂಪಾದಕರಾದ ಡಾ. ಕೆ.ಬಿ. ಗಣಪತಿ, ಮೈಸೂರು ವಿಶ್ವವಿದ್ಯಾನಿಲಯದ ಪುರಾತತ್ವ ವಿಭಾಗದ ನಿವೃತ್ತ ಪ್ರಾಧ್ಯಾಪಕ ಎಂ.ಎಸ್. ಕೃಷ್ಣಮೂರ್ತಿ, ಧರ್ಮಾಧಿಕಾರಿ ಹೆಚ್. ರಾಮಚಂದ್ರ ಅತಿಥಿಗಳಾಗಿ ನಿವೃತ್ತ ಇಂಜಿನಿಯರ್ ನರಸಿಂಹಯ್ಯ, ದೊಡ್ಡ ಯಜಮಾನರಾದ ಶ್ರೀನಿವಾಸಗೌಡ ಆಗಮಿಸಲಿದ್ದಾರೆ.

ಅಂದು ಬೆಳಗ್ಗೆ 10.30ಕ್ಕೆ ಶ್ರೀ ವೆಂಕಟೇಶ್ವರ ಮತ್ತು ಭೋಗ ನರಸಿಂಹಸ್ವಾಮಿಗೆ ಪೂಜಾ ಕಾರ್ಯ ಆರಂಭವಾಗಲಿದ್ದು, ಮಧ್ಯಾಹ್ನ 12.30ರಿಂದ 1 ಗಂಟೆವರೆಗೆ ಮಹಾ ಮಂಗಳಾರತಿ, 1 ರಿಂದ 1.30ರವರೆಗೆ ಪ್ರಸಾದ ವಿನಿಯೋಗವಿದೆ. ನಂತರ ಗಣ್ಯರಿಂದ ಭಾಷಣವಿರುತ್ತದೆ. ಮಧ್ಯಾಹ್ನ 2 ಗಂಟೆಗೆ ವಿದ್ವಾನ್ ಡಾ. ಬಿ.ಎಸ್. ಶ್ರೀಕಾಂತನ್ ಅವರಿಂದ ಕರ್ನಾಟಿಕ್ ಗಾಯನ, ಎಂ. ಪ್ರೀತಿ ಅವರಿಂದ ಓಡಿಸ್ಸಿ, ಅದಿತಿ ಗೋಪಿನಾಥ್ ಅವರಿಂದ ಭರತನಾಟ್ಯಂ, ಮಧುಮಿತ ನವೀನ್ ಅವರಿಂದ ಕುಚುಪುಡಿ ಏರ್ಪಡಿಸಲಾಗಿದೆ.

ಜೈಲುಗಳು ಈಗ ಶಿಕ್ಷಾ ಕೇಂದ್ರಗಳಲ್ಲ; ಮನಃಪರಿವರ್ತನ ತಾಣಗಳು

● ಕಾರಾಗೃಹ ಸುಧಾರಣಾ ಸೇವಾ ಇಲಾಖೆಯ ಅಧೀಕ್ಷಕ ಬಿ.ಎಸ್.ರಮೇಶ್ ಅಭಿಮತ ● ಜೈಲು ಹಕ್ಕಿಗಳಿಗೆ ಯಶಸ್ವಿ ಯೋಗಾಭ್ಯಾಸ

ಮೈಸೂರು, ಅ.20– ಇತ್ತೀಚಿಗೆ ಕಾರಾಗೃಹಗಳು ಅಪರಾಧಿಗಳಿಗೆ ಶಿಕ್ಷೆ ಬದಲು ಮನಃಪರಿವರ್ತನೆಗೆ ಅವಕಾಶ ಮಾಡಿಕೊಟ್ಟು ಸಮಾಜದಲ್ಲಿ ಶಾಂತಿಯನ್ನು ನೆಲೆಸುವಂತಹ ಕೆಲಸಗಳನ್ನು ಮಾಡುತ್ತಿವೆ ಎಂದು ಮೈಸೂರು ಕಾರಾಗೃಹ ಮತ್ತು ಸುಧಾರಣಾ ಸೇವಾ ಇಲಾಖೆಯ ಅಧೀಕ್ಷಕರಾದ ಬಿ.ಎಸ್.ರಮೇಶ್ ಹೇಳಿದರು.



ದಸರಾ ಮಹೋತ್ಸವದ ಅಂಗವಾಗಿ ಮೈಸೂರು ಜಿಲ್ಲಾ ಕಾರಾಗೃಹದಲ್ಲಿ ಯೋಗದಸರಾ ಉಪ ಸಮಿತಿಯಿಂದ ಆಯೋಜಿಸಿದ್ದ ಕಾರಾಗೃಹ ವಾಸಿಗಳಿಗೆ ವಿಶಿಷ್ಟ ಯೋಗಭ್ಯಾಸ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು, ನಮ್ಮ ದೇಹ ಮತ್ತು ಮನಸ್ಸನ್ನು ನಿಯಂತ್ರಣ ದಲ್ಲಿಟ್ಟುಕೊಳ್ಳಲು ಯೋಗ ಅತೀ ಅವಶ್ಯಕ. ನಾಡ ಹಬ್ಬ ಮೈಸೂರು ದಸರಾ ಸವಿ ನೆನಪು ಕಟ್ಟಿಕೊಳ್ಳಲು ಇಂದು ನಮ್ಮ ಕಾರಾಗೃಹದಲ್ಲಿ ವಿಶಿಷ್ಟ ಯೋಗ ಅಭ್ಯಾಸ ಕಾರ್ಯಕ್ರಮವನ್ನು ಹಮ್ಮಿಕೊಂಡಿರುವುದು ಒಂದು ವಿನೂತನ ಪ್ರಯತ್ನ ಎಂದರು.

ಯಾವುದೋ ಕೆಟ್ಟ ಘಳಿಗೆಯಲ್ಲಿ ಮಾಡಿದ ತಪ್ಪಿಗೆ ಸೆರೆಮನೆ ವಾಸ ಅನುಭವಿಸುತ್ತಿದ್ದೀರಿ. ಮನಃಪರಿವರ್ತನೆ ಮಾಡಿಕೊಂಡು ಪ್ರತಿಯೊಬ್ಬರು ಸಮಾಜಕ್ಕೆ ಒಳ್ಳೆಯದನ್ನು ಬಯಸುವಂತಹ ಮನಸ್ಸಿನೊಂದಿಗೆ ಇಲ್ಲಿಂದ ಹೊರಡಬೇಕು. ವಿವಿಧ ಸಂಘ ಸಂಸ್ಥೆಗಳ ಅಡಿಯಲ್ಲಿ ಕಾರ್ಯಕ್ರಮಗಳನ್ನು ರೂಪಿಸಿ ನಿಮ್ಮಲ್ಲಿರುವ ಒಳ್ಳೆಯ ಗುಣಗಳನ್ನು ಪೋಷಣೆ ಮಾಡಿ ಸಮಾಜಕ್ಕೆ ಉತ್ತಮ ನಾಗರಿಕರನ್ನಾಗಿ ಮಾಡುವ ಪ್ರಯತ್ನವನ್ನು ಈಗ ಕಾರಾಗೃಹಗಳು ಮಾಡುತ್ತಿವೆ ಎಂದರು.

ಮುಂದಿನ ದಿನಗಳಲ್ಲಿ ಆರೋಗ್ಯದ ಭಾಗವಾಗಿ ಯೋಗವನ್ನು ನಿರ್ವಹಿಸಿ ಆರೋಗ್ಯವಂತ ಸಮಾಜಕ್ಕಾಗಿ ಶ್ರಮಿಸಬೇಕು. ಪ್ರತಿನಿತ್ಯವೂ ಕಾರಾಗೃಹದಲ್ಲಿ ಯೋಗ ಮಾಡುವುದರ ಮೂಲಕ ಧನಾತ್ಮಕ ಮನಪರಿವರ್ತನೆಯಾಗಿ ಕಾರಾಗೃಹದಿಂದ ಮುಕ್ತಿ ಹೊಂದಿರಿ ಎಂದು ತಿಳಿಸಿದರು.

ಯೋಗ ದಸರಾ ಉಪ ಸಮಿತಿ ಅಧ್ಯಕ್ಷರಾದ ದೇವರಾಜ ಮಾತನಾಡಿ, ಯೋಗವು ಮನುಷ್ಯನನ್ನು ಹೇಗೆ ಬದಲಾಯಿಸುತ್ತದೆ ಎಂಬುವುದರ ಬಗ್ಗೆ ತಿಳಿಯಲು ಈ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು. ಕಳೆದ ಒಂದು ತಿಂಗಳಿಂದ ನೀವೆಲ್ಲರೂ ಯೋಗಭ್ಯಾಸವನ್ನು ಮಾಡಿದ್ದೀರಿ. ಪ್ರತಿನಿತ್ಯವೂ ಯೋಗ ಮಾಡುವುದರ ಮೂಲಕ ಋಣಾತ್ಮಕ ಚಿಂತನೆಯನ್ನು ತೊಲಗಿಸಿ ಧನಾತ್ಮಕ ಚಿಂತನೆಯತ್ತ ಮುಖ ಮಾಡಿ ಎಂದರು.

ಯೋಗಭ್ಯಾಸ ಕುರಿತು ಅಭಿಪ್ರಾಯ ಹಂಚಿಕೊಂಡ ಕಾರಾಗೃಹ ವಾಸಿಗಳು, ಯೋಗದಿಂದ ನಮ್ಮ ಮನಸ್ಸು, ದೇಹ ಸಮಸ್ಥಿತಿಯಲ್ಲಿರುತ್ತದೆ. ಧ್ಯಾನದ ಮೂಲಕ ನಮ್ಮ ಮಾನಸಿಕ ಚಿಂತೆಯನ್ನು ದೂರ ಮಾಡಬಹುದು. ಯೋಗವು ಸಕಲ ರೋಗಗಳಿಂದ ಸಂರಕ್ಷಣೆಯ ಮಂತ್ರವಾಗಿದೆ. ಯೋಗವನ್ನು ಚಿಕ್ಕ ವಯಸ್ಸಿನಿಂದ ಅಭ್ಯಾಸ ಮಾಡುವುದು ಉತ್ತಮ. ಹೀಗೆ ಮಾಡಿದರೆ ದೀರ್ಘಾಯುಷಿಯಾಗಿ ಬದುಕಬಹುದು. ಪೂಜೆಗೆ ಒಂದು ದೇವಾಲಯ, ಓದಿಗೊಂದು ಗ್ರಂಥಾಲಯ, ಅದೇ ರೀತಿಯಾಗಿ ಉತ್ತಮ ಆರೋಗ್ಯಕ್ಕಾಗಿ ಒಂದು ಯೋಗಾಲಯವಿರಬೇಕು ಎಂದು ತಿಳಿಸಿದರು.

ಕಳೆದ ಒಂದು ತಿಂಗಳಿಂದ ಕಾರಾಗೃಹದಲ್ಲಿ ಯೋಗ ತರಬೇತಿಯನ್ನು SPYSS ಸಂಸ್ಥೆಯಿಂದ ನೀಡಲಾಗಿತ್ತು. ಸುಮಾರು 300 ಜೈಲು ಹಕ್ಕಿಗಳು ಎರಡು ಗಂಟೆಗಳ ಕಾಲ ಯೋಗ ಮಾಡಿದರು. ಚಾಮರಾಜನಗರ ಜಿಲ್ಲಾ ಆಡಳಿತ, ಆಯುಷ್ ಸಂಸ್ಥೆಯ ಸದಸ್ಯರು, ದಸರಾ ಯೋಗ ಉಪ ಸಮಿತಿಯ ಸದಸ್ಯರು ಎಲ್ಲರೂ ಕೂಡ ಯೋಗ ಮಾಡಿ, ಸಿಹಿ ಹಂಚಿ ಯೋಗ ದಸರಾವನ್ನು ವಿಶಿಷ್ಟವಾಗಿ ಆಚರಿಸಿದರು.

ಕಾರ್ಯಕ್ರಮದಲ್ಲಿ ಮೈಸೂರು ಕಾರಾಗೃಹದ ಉಸ್ತುವಾರಿ ದಾಮೋದರ್, ಯೋಗ ದಸರಾ ಉಪ ಸಮಿತಿಯ ಉಪಾಧ್ಯಕ್ಷರಾದ ಮಹೇಶ್, ಭೂ ದಾಖಲೆಗಳ ಉಪ ನಿರ್ದೇಶಕರಾದ ಕೆ.ರಮ್ಯಾ, ಯೋಗ ದಸರಾ ಉಪ ಸಮಿತಿಯ ಕಾರ್ಯಾಧ್ಯಕ್ಷರಾದ ಡಿ.ಎಂ.ರಾಣಿ, ಹಾಗೂ ಕಾರ್ಯದರ್ಶಿ ಡಾ. ಪುಷ್ಪಾ, ಪತಂಜಲಿ ಯೋಗ ಶಿಕ್ಷಣ ಸಮಿತಿಯ ಸದಸ್ಯರು, ಯೋಗ ಶಿಕ್ಷಣ ಮತ್ತು ಸಂಶೋಧನೆಯ ಸದಸ್ಯರು, ಮತ್ತು ಯೋಗ ದಸರಾ ಉಪ ಸಮಿತಿಯ ಸದಸ್ಯರು ಹಾಜರಿದ್ದರು.

ಮೈಸೂರು ಮಿತ್ರ

ಶನಿವಾರ 21 ಅಕ್ಟೋಬರ್ 2023

ಗ್ರಾಮೀಣ ರಸ್ತೆಗಳ ಅಭಿವೃದ್ಧಿಗೆ ಒತ್ತು

● ಶಾಸಕ ಜಿ.ಡಿ.ಹರೀಶ್‌ಗೌಡ ಭರವಸೆ ● ಹನಗೋಡು ಸಂಪರ್ಕ ರಸ್ತೆ ಡಾಂಬರೀಕರಣಕ್ಕೆ ಚಾಲನೆ



ಹುಣಸೂರು, ಅ.20– ಗ್ರಾಮೀಣ ರಸ್ತೆಗಳ ಅಭಿವೃದ್ಧಿಗೆ ಹೆಚ್ಚು ಒತ್ತು ನೀಡುವ ಮೂಲಕ ಗ್ರಾಮೀಣ ಭಾಗದ ಜನರಿಗೆ ಅನುಕೂಲ ಮಾಡಿಕೊಡಲಾಗುವುದು ಎಂದು ಶಾಸಕ ಜಿ.ಡಿ.ಹರೀಶ್‌ಗೌಡ ಹೇಳಿದರು.

ತಾಲೂಕಿನ ಹನಗೋಡು ಭಾಗದ ಹರಳಹಳ್ಳಿ ಕಿರಂಗೂರು ಗ್ರಾಮದಿಂದ ಹನಗೋಡು ಸಂಪರ್ಕ ಮುಖ್ಯರಸ್ತೆ ಡಾಂಬರೀಕರಣಕ್ಕೆ ಶುಕ್ರವಾರ ಚಾಲನೆ ನೀಡಿ ಮಾತನಾಡಿದ ಅವರು, ಕ್ಷೇತ್ರ ವ್ಯಾಪ್ತಿಯ ಗ್ರಾಮೀಣ ಭಾಗದ ಸಾಕಷ್ಟು ರಸ್ತೆಗಳು ಹದಗೆಟ್ಟಿವೆ. ಸಾರ್ವಜನಿಕರು ಮತ್ತು ರೈತರು ಸಂಚರಿಸಲು ತ್ರಾಸದಾಯಕವಾಗಿದೆ. ಹೊಸ ರಸ್ತೆಗಳ ನಿರ್ಮಾಣಕ್ಕೆ ಹಿಂದಿನ ಸರ್ಕಾರಗಳು ಅನುದಾನ ಮಂಜೂರು ಮಾಡಿಲ್ಲ. ಈ ಬಾರಿ ಅನುದಾನ ಬಿಡುಗಡೆ ಮಾಡಿಸಿ, ಕಾಮಗಾರಿಗಳನ್ನು ನಡೆಸಲಾಗುತ್ತಿದೆ. ಮುಂದಿನ ದಿನಗಳಲ್ಲಿ ಗ್ರಾಮೀಣ ಭಾಗದ ಮತ್ತಷ್ಟು ರಸ್ತೆಗಳ ಅಭಿವೃದ್ಧಿಗೆ ಆದ್ಯತೆ ನೀಡಲಾಗುವುದು ಎಂದರು.

ನಾನು ಶಾಸಕನಾದ ಮೇಲೆ ಕ್ಷೇತ್ರದ ರಸ್ತೆ ಅಭಿವೃದ್ಧಿಗೆ ಭೂಮಿಪೂಜೆ ಮಾಡುತ್ತಿರುವುದು ಇದೇ ಮೊದಲನೆ ಕಾಮಗಾರಿ. ಉಳಿಕೆ ಕೆಲಸ ಕಾರ್ಯಗಳನ್ನು ಆದ್ಯತೆ ಮೇರೆಗೆ ಹಂತ ಹಂತವಾಗಿ ಮಾಡುತ್ತೇನೆ. ರಾಜ್ಯ ಸರ್ಕಾರ ಎಲ್ಲಾ ಶಾಸಕರಿಗೂ ಈ ವರ್ಷ ಅನುದಾನ ಇಲ್ಲ ಎಂದು ಹೇಳಿದೆ. ಆದರೆ, ಗ್ರಾಮಗಳ ರಸ್ತೆಗಳನ್ನು ನೋಡಿದರೆ ಭಯ ಪಡುವಂತಾಗಿದೆ. ಕ್ಷೇತ್ರದ ರಸ್ತೆಗಳ ಅಭಿವೃದ್ಧಿಗೆ ಸಾವಿರಾರು ಕೋಟಿ ರೂ. ನೀಡಿದರೂ ಸಾಲದು ಎಂದು ತಿಳಿಸಿದರು.

ಕೃಷಿ ಪಂಪ್‌ಸೆಟ್‌ಗಳಿಗೆ ಸರ್ಪಕವಾಗಿ ವಿದ್ಯುತ್ ನೀಡುತ್ತಿಲ್ಲ. ಹನಗೋಡು ಭಾಗಕ್ಕೆ ರಾತ್ರಿ ವೇಳೆ ವಿದ್ಯುತ್ ನೀಡಲಾಗುತ್ತಿದೆ. ಆದರೆ, ಈ ಭಾಗದಲ್ಲಿ ಕಾಡುಪ್ರಾಣಿಗಳ ಹಾವಳಿ ಹೆಚ್ಚಾಗಿರುವುದರಿಂದ ರಾತ್ರಿ ವೇಳೆ ರೈತರು ಬೆಳೆಗಳಿಗೆ ನೀರು ಹಾಯಿಸಲು ಸಾಧ್ಯವಾಗುತ್ತಿಲ್ಲ. ರೈತರ ಹೊಸ ಪಂಪ್‌ಸೆಟ್‌ಗಳಿಗೆ ವಿದ್ಯುತ್ ಸಂಪರ್ಕ ನೀಡಬೇಡಿ ಎಂದು ಈಗಾಗಲೇ ಸರ್ಕಾರ ಆದೇಶಿಸಿದೆ. ಇದರಿಂದ ರೈತರಿಗೆ ಬಹಳ ತೊಂದರೆಯಾಗಿದೆ. ಆದ್ದರಿಂದ ಈ ಆದೇಶವನ್ನು ಸರ್ಕಾರ ಕೂಡಲೇ ವಾಪಸ್ ಪಡೆಯಬೇಕು ಎಂದು ಒತ್ತಾಯಿಸಿದರು.

ಬಡವರಿಗೆ ಉಚಿತ ಭಾಗ್ಯಗಳನ್ನು ನೀಡಲು ನಮ್ಮ ವಿರೋಧವಿಲ್ಲ. ಆದರೆ, ಗ್ಯಾರಂಟಿ ಯೋಜನೆಗಳು ಅರ್ಹ ಫಲಾನುಭವಿಗಳಿಗೆ ಸರಿಯಾಗಿ ತಲುಪುತ್ತಿಲ್ಲ. ರಾಜ್ಯದಲ್ಲಿ ಯಾರು ಸಹ ಉಚಿತ ಭಾಗ್ಯಗಳನ್ನು ಕೇಳಿರಲಿಲ್ಲ. ಕ್ಷೇತ್ರಕ್ಕೆ ಶಾಸಕರ ಅನುದಾನ ಕೇವಲ 50 ಲಕ್ಷ ರೂ. ಬಂದಿದೆ. ಈ ಹಣವನ್ನು ಇಡೀ ತಾಲೂಕಿಗೆ ಹೇಗೆ ಹಂಚಿಕೆ ಮಾಡಿ, ಕೆಲಸ ಮಾಡುವುದು ಎಂಬುವುದೇ ದೊಡ್ಡ ತಲೆನೋವಾಗಿದೆ ಎಂದರು.

ಈ ಸಂದರ್ಭದಲ್ಲಿ ಗ್ರಾಪಂ ಅಧ್ಯಕ್ಷ ಮಧು, ಉಪಾಧ್ಯಕ್ಷ ಅಣ್ಣಯ್ಯ, ಲೋಕೋಪಯೋಗಿ ಇಲಾಖೆಯ ಎಇಇ ಭೋಜರಾಜ್, ಎಪಿಎಂಸಿ ಮಾಜಿ ಅಧ್ಯಕ್ಷ ಬಸವರಾಜು, ಸುಭಾಷ್, ಪಿಡಿಓ ಮಹೇಶ್, ಎಂಜಿನಿಯರ್ ಪ್ರಭಾಕರ್, ಹನಗೋಡು ಅಧ್ಯಕ್ಷ ಚೆನ್ನಯ್ಯ, ಹೆಗ್ಗಂದೂರು ಗ್ರಾಪಂ ಅಧ್ಯಕ್ಷ ರವಿ, ಮುಖಂಡರಾದ ರಾಮೇಗೌಡ, ಮಾದೇಗೌಡ ಮತ್ತಿತರರು ಉಪಸ್ಥಿತರಿದ್ದರು.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ ಚಿತ್ರಮಂದಿರ	(ದೂ: 2521923)
ಲಿಯೋ (ತ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ಘೋಸ್ಟ್ (ಕ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ಗಣಪತ್ (ಹಿ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ಲಿಯೋ (ತ)	4 ಪ್ರದರ್ಶನಗಳು
ಗಾಯಿತ್ರಿ	
ಘೋಸ್ಟ್ (ಕ)	4 ಪ್ರದರ್ಶನಗಳು
ರಾಜಕಮಲ್	
ಭಗವಂತ್ ಕೇಸರಿ (ತೆ)	4 ಪ್ರದರ್ಶನಗಳು
ಸಂಗಂ	
ಲಿಯೋ (ಕ)	3 ಪ್ರದರ್ಶನಗಳು
ಲಿಯೋ (ತ)	1 ಪ್ರದರ್ಶನಗಳು
ಲಿಡೋ	
ಫೈಟರ್ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
ಗಣಪತ್ (ಹಿ)	4 ಪ್ರದರ್ಶನಗಳು
ಪ್ರಭಾ	
ಟೈಗರ್ (ತೆ)	4 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್
ದೂ : 4240422/4241800

ಸ್ಕ್ರೀನ್ 1	ಲಿಯೋ (ತ): ಬೆ.10ಕ್ಕೆ, ಸಂ.4ಕ್ಕೆ, ರಾ.10ಕ್ಕೆ, ಘೋಸ್ಟ್ (ಕ): ಮ.1.10ಕ್ಕೆ, ರಾ.7.10ಕ್ಕೆ.
ಸ್ಕ್ರೀನ್ 2	ದಸರಾ ಚಿತ್ರಗಳು: ಬೆ.10ಕ್ಕೆ, ಮ.1ಕ್ಕೆ, ಸಂ.4ಕ್ಕೆ, ರಾ.7ಕ್ಕೆ, ಗಣಪತ್ (ಹಿಂ): ರಾ.10.20ಕ್ಕೆ.
ಸ್ಕ್ರೀನ್ 3	ಯಾರಿಯನ್ 2 (ಹಿಂ): ಬೆ.10.05ಕ್ಕೆ, ಗಣಪತ್ (ಹಿಂ): ಮ.1ಕ್ಕೆ, ಟೈಗರ್ ನಾಗೇಶ್ವರ್ ರಾವ್ (ತೆ): ಮ.3.35ಕ್ಕೆ, ರಾ.7ಕ್ಕೆ, ಭಗವಂತ್ ಕೇಸರಿ (ತೆ): ರಾ.10.25ಕ್ಕೆ.
ಸ್ಕ್ರೀನ್ 4	ಘೋಸ್ಟ್ (ಕ): ಬೆ.10.15ಕ್ಕೆ, ಸಂ.4.10ಕ್ಕೆ, ರಾ.10.10ಕ್ಕೆ, ಲಿಯೋ (ತ): ಮ.1ಕ್ಕೆ, ರಾ.7ಕ್ಕೆ.

ಐನಾಕ್ಸ್ ಮೂವೀಸ್
INOX LIVE THE MOVIE
ದೂ : 2533444 / 2433456

ಸ್ಕ್ರೀನ್ 1	ಲಿಯೋ (ತ): ಬೆ.9.35ಕ್ಕೆ, ಮ.3.55ಕ್ಕೆ, ಘೋಸ್ಟ್ (ಕ): ಮ.1ಕ್ಕೆ, ರಾ.7.20ಕ್ಕೆ, ಗಣಪತ್ (ಹಿಂ): ರಾ.10.15ಕ್ಕೆ.
ಸ್ಕ್ರೀನ್ 2	ಲಿಯೋ (ತ): ರಾ.10.20ಕ್ಕೆ.
ಸ್ಕ್ರೀನ್ 3	ಭಗವಂತ್ ಕೇಸರಿ (ತೆ): ರಾ.10.30ಕ್ಕೆ.
ಸ್ಕ್ರೀನ್ 4	ಟೈಗರ್ ನಾಗೇಶ್ವರ್ ರಾವ್ (ತೆ): ರಾ.10.10ಕ್ಕೆ.


ಮೈಸೂರು ವಿಷನ್ ಸಿನಿಮಾ
ದೂ : 0821–2973519

ಸ್ಕ್ರೀನ್ 1	ಪರಿಶುದ್ಧಂ (ಕ): ಬೆ.10.30ಕ್ಕೆ, ಹನಿಮೂನ್ ಇನ್ ಬ್ಯಾಂಕಾಕ್(ಕ): ಮ.1.30ಕ್ಕೆ, ಧ್ವಜ (ಕ): ಸಂ.4.20ಕ್ಕೆ, ಬನ್ ಟೀ (ಕ): ಸಂ.6.45ಕ್ಕೆ, ಸಪ್ತ ಸಾಗರದಾಚೆ ಎಲ್ಲೋ (ಕ): ರಾ.9.15ಕ್ಕೆ.
ಸ್ಕ್ರೀನ್ 2	ಜವಾನ್ (ಹಿಂ): ಸಂ.4.15ಕ್ಕೆ, ರಾ.9.15ಕ್ಕೆ.
ಸ್ಕ್ರೀನ್ 3	ದಿ ನನ್ 2 (ಇಂ): ಸಂ.4.45ಕ್ಕೆ, ಜವಾನ್ (ಹಿಂ): ರಾ.7ಕ್ಕೆ.
ಸ್ಕ್ರೀನ್ 4	ಜವಾನ್ (ಹಿಂ): ಬೆ.10.30ಕ್ಕೆ, ಸಪ್ತ ಸಾಗರದಾಚೆ ಎಲ್ಲೋ (ಕ): ಮ.1.45ಕ್ಕೆ, ಸಂ.4.45ಕ್ಕೆ, ದಿ ನನ್ 2 (ಇಂ): ರಾ.7.35ಕ್ಕೆ.

ಪಿವಿಆರ್ ಸಿನಿಮಾಸ್
PVR CINEMAS
ಮೊ.ನಂ: 8951357139
ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ,

ಭಗವಂತ್ ಕೇಸರಿ (ತೆ): ಮ.1.05ಕ್ಕೆ, ಮ.3.20ಕ್ಕೆ, ರಾ.10.30ಕ್ಕೆ, ಗಣಪತ್ (ಹಿಂ): ಬೆ.9.20ಕ್ಕೆ, ಮ.12.20ಕ್ಕೆ, ಮ.3.20ಕ್ಕೆ, ಸಂ.6.45ಕ್ಕೆ, ರಾ.9.45ಕ್ಕೆ, ಘೋಸ್ಟ್ (ಕ): ಬೆ.9.30ಕ್ಕೆ, ಮ.12.25ಕ್ಕೆ, ಸಂ.4.30ಕ್ಕೆ, ರಾ.7.25ಕ್ಕೆ, ರಾ.10.20ಕ್ಕೆ, ಲಿಯೋ (ಕ): ಮ.12.15ಕ್ಕೆ, ಲಿಯೋ (ತ): ಬೆ.8.20ಕ್ಕೆ, ಮ.11.45ಕ್ಕೆ, ಮ.3.10ಕ್ಕೆ, ಸಂ.6.15ಕ್ಕೆ, ಸಂ.6.35ಕ್ಕೆ, ರಾ.10ಕ್ಕೆ, ಲಿಯೋ (ತ): ಬೆ.8.50ಕ್ಕೆ, ಮ.12.15ಕ್ಕೆ, ಮ.3.40ಕ್ಕೆ, ರಾ.7.05ಕ್ಕೆ, ರಾ.10.30ಕ್ಕೆ, ಟೈಗರ್ ನಾಗೇಶ್ವರ್ ರಾವ್ (ತೆ): ಬೆ.8.35ಕ್ಕೆ, ಮ.3.40ಕ್ಕೆ, ರಾ.9.40ಕ್ಕೆ, ಯಾರಿಯನ್ 2 (ಹಿಂ): ಬೆ.9.55ಕ್ಕೆ, ರಾ.7.20ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪ ಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.



ತಿ.ನರಸೀಪುರ ತಾಲೂಕಿನ ಮೂಗೂರು ಗ್ರಾಮದ ಶ್ರೀ ತ್ರಿಪುರ ಸುಂದರಿ ಅಮ್ಮನವರ ದೇವಾಲಯಕ್ಕೆ ಹೊಂದಿಕೊಂಡಿರುವ ಹಾಗೂ ಶ್ರೀ ಸ್ವರ್ಣಗೌರಿ ಮಂದಿರಕ್ಕೆ ಹೋಗುವ ರಸ್ತೆಯ ಚರಂಡಿಯಲ್ಲಿ ತ್ಯಾಜ್ಯ ತೆರವುಗೊಳಿಸದೆ ಇರುವುದರಿಂದ ಕೊಚ್ಚೆ ನೀರು ರಸ್ತೆಗೆ ಹರಿಯುತ್ತಿದೆ.

ಸಾಧನೆಗೆ ಗುರಿ, ಶ್ರಮ ಮುಖ್ಯ: ಡಾ.ಜೆ.ಎನ್.ವೆಂಕಟೇಶ್



ಹೆಚ್.ಡಿ.ಕೋಟೆ, ಅ.20–ಸಾಧನೆಗೆ ಬಡತನ ಅಥವಾ ಸಿರಿತನ ಕಾರಣವಲ್ಲ, ಗುರಿ ಮತ್ತು ಶ್ರಮ ಮುಖ್ಯ ಎಂದು ಶ್ರೀ ಆದಿಚುಂಚನಗಿರಿ ಪ್ರಥಮ ದರ್ಜೆ ಕಾಲೇಜಿನ ಪ್ರಾಂಶುಪಾಲ ಡಾ.ಜೆ.ಎನ್. ವೆಂಕಟೇಶ್ ತಿಳಿಸಿದರು.

ಪಟ್ಟಣದ ಶ್ರೀ ಆದಿಚುಂಚನಗಿರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಮೈಸೂರು ವಿಶ್ವವಿದ್ಯಾಲಯದ ಘಟಿಕೋತ್ಸವದಲ್ಲಿ ಚಿನ್ನದ ಪದಕ ಪಡೆದ ಕಾಲೇಜಿನ ವಿದ್ಯಾರ್ಥಿನಿ ಫಿರ್ದೋಸ್ ಅವರನ್ನು ಸನ್ಮಾನಿಸಿ ಮಾತನಾಡಿದ ಅವರು, ಕೂಲಿಕಾರ್ಮಿಕರ ಮಗಳಾದ ಈಕೆ 2021– 22ನೇ ಸಾಲಿನ ವಾಣಿಜ್ಯ ವಿಭಾಗದಲ್ಲಿ ಅತ್ಯುನ್ನತ ಶ್ರೇಣಿಯಲ್ಲಿ ತೇರ್ಗಡೆಯಾಗಿ ಚಿನ್ನದ ಪದಕ ಪಡೆದಿದ್ದಾಳೆ. ಈಕೆ ಪ್ರಸ್ತುತ ಮಾನಸಗಂಗೋತ್ರಿಯಲ್ಲಿ ದ್ವಿತೀಯ ಎಂಕಾಂ ಓದುತ್ತಿದ್ದು, ಇತರ ವಿದ್ಯಾರ್ಥಿಗಳಿಗೆ ಪ್ರೇರಣೆ ಆಗಿದ್ದಾಳೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಸನ್ಮಾನ ಸ್ವೀಕರಿಸಿ ಮಾತನಾಡಿದ ಫಿರ್ದೋಸ್, ಮನೆಯಲ್ಲಿ ಬಡತನ ಇದರಿಂದ ಪಿಯು ನಂತರ ಶಿಕ್ಷಣ ನಿಲ್ಲಿಸಬೇಕು ಎಂದುಕೊಂಡಿದ್ದೆ. ಆದರೆ, ಕಾಲೇಜಿನ ಪ್ರಾಂಶುಪಾಲ ಡಾ.ಜೆ.ಎನ್.ವೆಂಕಟೇಶ್, ವಿದ್ಯಾಸಂಸ್ಥೆಯ ಲೆಕ್ಕಿಗರಾದ ರಾಜೇಶ್ ಅವರು ನನಗೆ ಪ್ರೋತ್ಸಾಹ ನೀಡಿದ್ದರಿಂದ ಪದವಿಯಲ್ಲಿ ಚಿನ್ನದ ಪದಕ ಪಡೆಯಲು ಸಾಧ್ಯವಾಯಿತು ಎಂದರು.

ಉಪನ್ಯಾಸಕರಾದ ರಾಮಚಂದ್ರ, ಸಿದ್ದೇಗೌಡ, ಮಹೇಂದ್ರ, ಚೆನ್ನಕೇಶವ ನಾಯಕ, ಮಂಜು, ಸಿದ್ದರಾಜು, ರವಿ, ರವೀಶ್, ಪ್ರಕಾಶ್ ನಾಯಕ, ಮಹೇಶ್, ಮಹದೇವ್, ಅಮೂಲ್ಯ, ರಮ್ಯಶ್ರೀ, ಕಾವ್ಯಾ ಬಾಯಿ, ಅವಿನಾ, ಚಿಕ್ಕದೇವಿ, ಪ್ರೀತಿ, ಚಂದನಾ, ಕಲ್ಲೇಶ್‌ಗೌಡ ಹಾಜರಿದ್ದರು.

ವಿದ್ಯಾರ್ಥಿನಿಯನ್ನು ಆದಿಚುಂಚನಗಿರಿಯ ಮೈಸೂರು ಶಾಖಾ ಮಠದ ಶ್ರೀ ಸೋಮೇಶ್ವರನಾಥ ಸ್ವಾಮೀಜಿ, ಸಂಸ್ಥೆಯ ಗೌರವಾಡಳಿತಾಧಿಕಾರಿ ಪ್ರೊ.ಕೆ.ಪಿ. ಬಸವೇಗೌಡ ಅಭಿನಂದಿಸಿದ್ದಾರೆ.

ಬೀಚನಹಳ್ಳಿ ಪ್ರೌಢಶಾಲೆ ಬಾಲಕಿಯರು ರಾಜ್ಯಮಟ್ಟಕ್ಕೆ ಆಯ್ಕೆ



ಹೆಚ್.ಡಿ.ಕೋಟೆ, ಅ.20–ತಾಲೂಕಿನ ಬೀಚನಹಳ್ಳಿ ಸರ್ಕಾರಿ ಪ್ರೌಢಶಾಲೆಯ ಬಾಲಕಿಯರು ಬಾಲ್ ಬ್ಯಾಡ್ಮಿಂಟನ್ ಪಂದ್ಯಾವಳಿಯ ರಾಜ್ಯಮಟ್ಟಕ್ಕೆ ಆಯ್ಕೆಯಾಗಿದ್ದಾರೆ.


ಚಾಮರಾಜನಗರದಲ್ಲಿ ನಡೆದ ವಿಭಾಗ ಮಟ್ಟದ ಬಾಲ್ ಬ್ಯಾಡ್ಮಿಂಟನ್ ಪಂದ್ಯಾವಳಿಯಲ್ಲಿ ಜಯಗಳಿಸಿದ ತಂಡಕ್ಕೆ ಶಾಸಕರಾದ ಪುಟ್ಟರಂಗಶೆಟ್ಟಿ, ಗಣೇಶ್ ಪ್ರಸಾದ್, ವಿಧಾನ ಪರಿಷತ್ ಸದಸ್ಯ ಮರಿತಿಬ್ಬೇಗೌಡ, ಡಿಡಿಪಿಐ ರಾಮಚಂದ್ರರಾಜೇ ಅರಸ್, ಚಾಮರಾಜನಗರ ಜಿಲ್ಲಾ ದೈಹಿಕ ಶಿಕ್ಷಣಾಧಿಕಾರಿ ಶಂಕರ್ ಪ್ರಶಸ್ತಿ ನೀಡಿದರು.

ತಂಡದ ಐಶ್ವರ್ಯ, ಸಿಂಚನಾ, ಶಾಜಿಯಾ ಸಪುರಾ, ನಿಸರ್ಗ, ಜಯಲಕ್ಷ್ಮೀ ಅವರನ್ನು ಶಾಲೆಯ ಮುಖ್ಯ ಶಿಕ್ಷಕ ನಾಗಣ್ಣ, ವ್ಯವಸ್ಥಾಪಕಿ ಮೇರಿ, ದೈಹಿಕ ಶಿಕ್ಷಣ ಶಿಕ್ಷಕ ರಮೇಶ್, ಮೇಘಾ, ರಮೇಶ್ ಅಭಿನಂದಿಸಿದರು.

ಅ.23ರಿಂದ ತಂಬಾಕು ಮಾರುಕಟ್ಟೆಗೆ ರಜೆ



ಹಿರಿಕ್ಯಾತನಹಳ್ಳಿ: ಹುಣಸೂರು ತಾಲೂಕಿನ ಕಟ್ಟೆಮಳಲವಾಡಿಯ ಡಿ.ದೇವರಾಜ ಅರಸು ತಂಬಾಕು ಹರಾಜು ಮಾರುಕಟ್ಟೆಗೆ ದಸರಾ ಹಾಗೂ ವಿಜಯದಶಮಿ ಹಬ್ಬದ ಪ್ರಯುಕ್ತ ಅ.23 ರಿಂದ 26ರವರೆಗೆ ರಜೆ ಘೋಷಿಸಲಾಗಿದೆ. ಆದ್ದರಿಂದ ರೈತರು ಮಾರುಕಟ್ಟೆಗೆ ತಂಬಾಕು ಬೇಲ್‌ಗಳನ್ನು ತರಬಾರದು ಎಂದು ತಂಬಾಕು ಮಂಡಳಿ ಪ್ರಕಟಣೆಯಲ್ಲಿ ತಿಳಿಸಿದೆ.



ಮೈಸೂರಿನ ನಾಗನಹಳ್ಳಿ ದೇಸಿ ತರಬೇತಿಯಲ್ಲಿ ಹೆಚ್ಚು ಅಂಕ ಗಳಿಸಿದ ತಿ.ನರಸೀಪುರ ತಾಲೂಕಿನ ನಿಂಗೇಗೌಡನಹುಂಡಿ ಗ್ರಾಮದ ಮಂಜುನಾಥ್ ಅವರಿಗೆ ಬೆಂಗಳೂರಿನ ಜಿಕೆವಿಕೆ ಕೃಷಿ ವಿವಿಯಲ್ಲಿ ನಡೆದ ರಾಜ್ಯ ದೇಸಿ ಸಮ್ಮೇಳನದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಪ್ರಶಸ್ತಿ ಪ್ರದಾನ ಮಾಡಿದರು. ಸಚಿವರಾದ ಚಲುವರಾಯಸ್ವಾಮಿ, ಕೃಷ್ಣಬೈರೇಗೌಡ, ಕುಲಪತಿ ಡಾ.ಸುರೇಶ್, ಅಧಿಕಾರಿಗಳು, ಶಿಕ್ಷಣಾರ್ಥಿಗಳು ಇದ್ದರು.

ಬೀರನಹಳ್ಳಿಯಲ್ಲಿ ಪದಾಧಿಕಾರಿಗಳ ಪದಗ್ರಹಣ



ಹುಣಸೂರು, ಅ.20–ತಾಲೂಕಿನ ಬೀರನಹಳ್ಳಿ ಗ್ರಾಮದಲ್ಲಿ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಒಕ್ಕೂಟದ ಪದಾಧಿಕಾರಿಗಳ ಪದಗ್ರಹಣ ನಡೆಯಿತು.

ಯೋಜನೆಯ ಜಿಲ್ಲಾ ನಿರ್ದೇಶಕ ಹೆಚ್.ಎಲ್.ಮುರುಳಿಧರ್ ಮಾತನಾಡಿ, ಧರ್ಮಸ್ಥಳ ಸಂಸ್ಥೆ ಯಾವುದೇ ದಾಖಲಾತಿ ಇಲ್ಲದೆ ಮಹಿಳೆಯರಿಗೆ ಸಾಲ ನೀಡುತ್ತಿದ್ದು, ಇದು ಸ್ವಂತ ಉದ್ಯೋಗಕ್ಕೆ ನೆರವಾಗುತ್ತಿದೆ. ಇದರಿಂದ ಸಾವಿರಾರು ಮಹಿಳೆಯರು ಸ್ವಯಂ ಉದ್ಯೋಗ ನಡೆಸುತ್ತಿದ್ದಾರೆ. ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯಿಂದ ಪ್ರತಿ ಗ್ರಾಮದ ಮಹಿಳೆಯರು ಕೇವಲ ಹಣಕಾಸು ಸಹಾಯ ಮಾತ್ರವಲ್ಲ, ಸ್ವಉದ್ಯೋಗದೊಂದಿಗೆ ಆರ್ಥಿಕವಾಗಿ ಸಬಲರಾಗುತ್ತಿದ್ದಾರೆ. ಮಕ್ಕಳ ಮುಂದಿನ ಭವಿಷ್ಯ ರೂಪಿಸಲು ಹಣ ಉಳಿತಾಯ ಮಾಡುತ್ತಿದ್ದಾರೆ ಎಂದರು.

ಜನಜಾಗೃತಿ ಸಮಿತಿ ಸದಸ್ಯ ದಾ.ರಾ. ಮಹೇಶ್ ಕಾರ್ಯಕ್ರಮ ಉದ್ಘಾಟಿಸಿದರು. ಹೆಗ್ಗಂದೂರು ಗ್ರಾಪಂ ಅಧ್ಯಕ್ಷ ರವಿ, ಉಪಾಧ್ಯಕ್ಷೆ ನಾಗರತ್ನ, ತಾಲೂಕು ಯೋಜನಾಧಿಕಾರಿ ನಾರಾಯಣಶೆಟ್ಟಿ, ಗ್ರಾಮದ ಯಜಮಾನ ಮಹಾದೇವಪ್ಪ, ಮೇಲ್ವಿಚಾರಕಿ ಸುನಂದಾ, ಸೇವಪ್ರತಿನಿಧಿ ಆನಂದ್ ಇದ್ದರು.



ಬನ್ನೂರು ಸಮೀಪ ಬೀಡನಹಳ್ಳಿಯ ಪ್ರಮುಖ ಬೀದಿಯಲ್ಲಿ ಶುಕ್ರವಾರ ಶ್ರೀ ಚಾಮುಂಡೇಶ್ವರಿ ಹಬ್ಬದ ಪ್ರಯುಕ್ತ ಪೂರ್ಣಕುಂಭ ಸಹಿತ ಬಸವನ ಮೆರವಣಿಗೆ ಸಾಗಿತು.

ನಂಜನಗೂಡಲ್ಲಿ ನಾಲ್ವರು ಕಳ್ಳರ ಬಂಧನ; 75 ಸಾವಿರ ರೂ. ನಗದು, ಕಾರು ವಶ

ನಂಜನಗೂಡು, ಅ.20–ವಿವಿಧ ಕಳ್ಳತನ ಪ್ರಕರಣಗಳಲ್ಲಿ ಭಾಗಿಯಾಗಿದ್ದ ನಾಲ್ವರು ಕಳ್ಳರನ್ನು ಬಂಧಿಸಿರುವ ಪಟ್ಟಣ ಪೊಲೀಸರು, 1.87 ಲಕ್ಷ ರೂ. ಬೆಲೆ ಬಾಳುವ ದಿನಸಿ ಪದಾರ್ಥ, 75 ಸಾವಿರ ರೂ. ನಗದು ಹಾಗೂ ಒಂದು ಕಾರನ್ನು ವಶಪಡಿಸಿಕೊಂಡಿದ್ದಾರೆ.

ಮೈಸೂರಿನ ನಿವಾಸಿಗಳಾದ ಸುಭಾನ ಅಹಮದ್, ಅಭಿದ್ ಅಹಮದ್, ಶಮೀರ್ ಪಾಷಾ, ಇದಾಯದ್‌ನನ್ನು ಪೊಲೀಸರು ಬಂಧಿಸಿ, ನ್ಯಾಯಾಂಗ ವಶಕ್ಕೆ ಒಪ್ಪಿಸಿದ್ದಾರೆ.

ಅ.18ರಂದು ಪಟ್ಟಣ ಪೊಲೀಸ್ ಠಾಣೆ ಇನ್ಸ್‌ಪೆಕ್ಟರ್ ಬಸವರಾಜು ಹಾಗೂ ಸಿಬ್ಬಂದಿ ಗಸ್ತಿನಲ್ಲಿದ್ದ ವೇಳೆ ಅಂಬೇಡ್ಕರ್ ವೃತ್ತದ ಬಳಿ ನಾಲ್ವರು ಕಾರನ್ನು ನಿಲ್ಲಿಸಿಕೊಂಡು ನಿಂತಿದ್ದರು. ಇದರಿಂದ ಅನುಮಾನಗೊಂಡ ಪೊಲೀಸರು ಕಾರನ್ನು ಪರಿಶೀಲಿಸಿದಾಗ ಕಾರಿನ ಡಿಕ್ಕಿಯಲ್ಲಿದ್ದ ಬ್ಯಾಗ್‌ನಲ್ಲಿ ಮಚ್ಚು, ಕಬ್ಬಿಣದ ವೈರ್‌ರೂಪ್, ಬ್ಯಾಟರಿ ಚಾಲಿತ ಕಟರ್, ಸ್ಕ್ರೂಡ್ರೈವರ್, ಕಟಿಂಗ್ ಪ್ಲೇಯರ್, ಹಾಕಿಸ್ಟಿಕ್, ಹ್ಯಾಂಡ್ ಗ್ಲೌಸ್ ಸಿಕ್ಕಿವೆ. ನಂತರ ಆರೋಪಿಗಳನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಿದರು.

ಮೇ17ರಂದು ನಂಜನಗೂಡಿನ ಮಾರ್ಕೆಟ್ ರಸ್ತೆಯ ಬಾಳೆ ಮಂಡಿಯ ಬೀಗ ಮುರಿದು 2 ಲಕ್ಷ ರೂ. ಕಳವು, ಅ.3ರಂದು ನಗರದ ಸಿಟಿಜನ್ ಶಾಲೆಯ ಬಳಿಯ ಚಿಲ್ಲರೆ ಅಂಗಡಿಯ ಬಾಗಿಲು ಮುರಿದು 80 ಸಾವಿರ ಮೌಲ್ಯದ ದಿನಸಿ ಪದಾರ್ಥ ಮತ್ತು ತಿ.ನರಸೀಪುರ ತಾಲೂಕಿನ ಬನ್ನೂರಿನ ನಂದಿನಿ ಮಿಲ್ಕ್ ಪಾರ್ಲರ್ ಬಾಗಿಲು ಮುರಿದು 15 ಸಾವಿರ ರೂ. ನಗದು ಮತ್ತು ತಿಂಡಿ–ತಿನಿಸು, ತುಪ್ಪ, ತಿ.ನರಸೀಪುರದಲ್ಲಿ ಪ್ರಾವಿಷನ್ ಸ್ಟೋರ್ ಬೀಗ ಮುರಿದು ದಿನಸಿ ಮತ್ತು ಸಿಗರೇಟ್ ಕಳ್ಳತನ ಮಾಡಿರುವುದಾಗಿ ಕಳ್ಳರು ವಿಚಾರಣೆ ವೇಳೆ ತಪ್ಪೊಪ್ಪಿಕೊಂಡಿದ್ದಾರೆ.

ನಾಲ್ವರು ಕಳ್ಳರ ಪೈಕಿ ಇಬ್ಬರ ವಿರುದ್ಧ ಮೈಸೂರು ಮತ್ತು ಪಾಂಡವಪುರ ಪೊಲೀಸ್ ಠಾಣೆಯಲ್ಲಿ ಸುಲಿಗೆ ಪ್ರಕರಣ ದಾಖಲಾಗಿದೆ. ಕಾರ್ಯಾಚರಣೆಯಲ್ಲಿ ನಂಜನಗೂಡು ಪಟ್ಟಣ ಪೊಲೀಸ್ ಠಾಣೆಯ ಎಸ್‌ಐ ಪ್ರಕಾಶ್ ಸಿದ್ದಪ್ಪ ಮದ್ದೂರು, ಶಿವಣ್ಣ, ಎಎಸ್ಐ ಸತೀಶ್, ಸಿಬ್ಬಂದಿ ಶಿವಕುಮಾರ್, ಜಯರಾಮ, ನಾರಾಯಣ, ತಿಮ್ಮಯ್ಯ ಭಾಗಿಯಾಗಿದ್ದರು.

ಗೃಹಿಣಿ ನಾಪತ್ತೆ



ಬನ್ನೂರು, ಅ.20–ತಿ.ನರಸೀಪುರ ತಾಲೂಕಿನ ಚಾಮನಹಳ್ಳಿ ಗ್ರಾಮದ ನಿವಾಸಿ ಮಹೇಶ್ ಅವರ ಪತ್ನಿ ಲಕ್ಷ್ಮೀ ಕಾಣೆಯಾಗಿದ್ದು, ಈ ಸಂಬಂಧ ಬನ್ನೂರು ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಈಕೆ ಅ.18 ರಂದು ಔಷಧ ತರುವುದಾಗಿ ಹೇಳಿ ಮೈಸೂರಿಗೆ ಹೋದವರು ವಾಪಸ್ಸು ಬಂದಿಲ್ಲ. ಈಕೆ ಯಾರಿಗಾದರೂ ಪತ್ತೆಯಾದಲ್ಲಿ ಬನ್ನೂರು ಪೊಲೀಸ್ ಠಾಣೆ ಅಥವಾ ದೂ.ಸಂಖ್ಯೆ: 08227–275632ಕ್ಕೆ ತಿಳಿಸುವಂತೆ ಪೊಲೀಸರು ಪ್ರಕಟಣೆಯಲ್ಲಿ ಮನವಿ ಮಾಡಿದ್ದಾರೆ.



ನಂಜನಗೂಡಿನ ಚಾಮುಂಡಿ ಟೌನ್‌ಶಿಪ್ ಬಡಾವಣೆಯಲ್ಲಿ ನೂತನವಾಗಿ ನಿರ್ಮಾಣವಾಗಿರುವ ಶ್ರೀ ಶ್ರೀನಿವಾಸನ್ ಪೆರುಮಾಳ್ ದೇವಾಲಯದ ಕುಂಭಾಭಿಷೇಕ ಮತ್ತು ಕಳಸ ಪ್ರತಿಷ್ಠಾಪನೆ ಮಹೋತ್ಸವವನ್ನು ಪ್ರೊ. ಭಾಷ್ಯಂಸ್ವಾಮೀಜಿ ನೆರವೇರಿಸಿದರು. ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಸಿ.ಎಂ.ಶಂಕರ್, ನಗರಸಭಾ ಸದಸ್ಯ ಪ್ರದೀಪ್, ಮುಖಂಡರಾದ ಯು.ಎನ್.ಪದ್ಮನಾಭರಾವ್, ದೇವಾಲಯದ ಪ್ರಧಾನ ಅರ್ಚಕರಾದ ಎನ್.ಶ್ರೀನಿವಾಸನ್, ಶ್ರೀ ತಿರುಮಲ್ಲೇಶ್ ತುಂಬು ಇದ್ದರು.

ಪ್ರತಿಯೊಬ್ಬರು ಯೋಧರನ್ನು ಗೌರವಿಸಬೇಕು



ಸರಗೂರು, ಅ.20– ನಮ್ಮ ಮಣ್ಣು ನಮ್ಮ ದೇಶ ಅಭಿಯಾನದಲ್ಲಿ ಪ್ರತಿಯೊಬ್ಬರೂ ಭಾಗವಹಿಸುವ ಮೂಲಕ ಯೋಧರನ್ನು ಗೌರವಿಸೋಣ ಎಂದು ತಾಪಂ ಇಓ ಕೆ.ಸುಷ್ಮಾ ತಿಳಿಸಿದರು.

ಪಟ್ಟಣದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಜಿಲ್ಲಾ, ತಾಲೂಕು ಪಂಚಾಯಿತಿ, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಮೈಸೂರಿನ ನೆಹರು ಯುವ ಕೇಂದ್ರ ಹಾಗೂ ರಾಷ್ಟ್ರೀಯ ಸೇವಾ ಯೋಜನೆಯ ಸರಗೂರು ಘಟಕದ ವತಿಯಿಂದ ಆಯೋಜಿಸಿದ್ದ 'ನಮ್ಮ ಮಣ್ಣು ನಮ್ಮ ದೇಶ' ಅಭಿಯಾನದಲ್ಲಿ ಮಾತನಾಡಿದ ಅವರು, ಕೇಂದ್ರ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಆದೇಶದಂತೆ ಅಜಾದಿ ಕಾ ಅಮೃತ ಮಹೋತ್ಸವ ಅಂಗವಾಗಿ ಪ್ರತಿ ಗ್ರಾಮ ಪಂಚಾಯಿತಿ ವ್ಯಾಪ್ತಿ ಮಣ್ಣು ಸಂಗ್ರಹಿಸಿದ ಅಮೃತ ಕಳಸವನ್ನು ದೆಹಲಿಗೆ ಕಳುಹಿಸುವ ಉದ್ದೇಶದಿಂದ ತಾಲೂಕಿನ 13 ಗ್ರಾಪಂನಲ್ಲಿ ಅಭಿಯಾನ ನಡೆಸಲಾಗುತ್ತಿದೆ ಎಂದರು.

ಪ್ರಧಾನಿ ನರೇಂದ್ರ ಮೋದಿ ಹುತಾತ್ಮ ವೀರಯೋಧರನ್ನು ಗೌರವಿಸಲು ದೇಶಾದ್ಯಂತ ಅಭಿಯಾನಕ್ಕೆ ಕರೆ ನೀಡಿದ್ದಾರೆ. ವೀರಯೋಧರ ಗೌರವಾರ್ಥ ಈ ಅಭಿಯಾನ ನಡೆಸಲಾಗುತ್ತಿದೆ. ಆದ್ದರಿಂದ ಪ್ರತಿಯೊಬ್ಬರು ಅಭಿಯಾನದಲ್ಲಿ ಭಾಗವಹಿಸಿ ಯೋಧರನ್ನು ಗೌರವಿಸಬೇಕು ಎಂದು ಹೇಳಿದರು.

ಪ್ರಭಾರ ಪ್ರಾಂಶುಪಾಲ ವೆಂಕಟಮ್ಮ ಮಾತನಾಡಿ, ದೇಶದ ಜನರು ಶಾಂತಿ, ನೆಮ್ಮದಿಯಿಂದ ಜೀವನ ನಡೆಸುತ್ತಿದ್ದಾರೆ ಎಂದರೆ, ಅದಕ್ಕೆ ಕಾರಣ ಸೈನಿಕರು. ಯೋಧರು ಗಡಿ ಕಾಯದೆ ಹೋಗಿದ್ದರೆ ನಾವು ನೆಮ್ಮದಿಯಿಂದ ಬದುಕು ನಡೆಸಲು ಸಾಧ್ಯವಾಗುತ್ತಿರಲಿಲ್ಲ. ದೇಶ. ಮಣ್ಣಿನ್ನು ಗೌರವಿಸೋಣ ಎಂದರು.

ಇದೇ ವೇಳೆ ಕಾಲೇಜಿನ ಹಳೇ ವಿದ್ಯಾರ್ಥಿ ಹಾಗೂ ತಾಲೂಕಿನ ಮಾಗುಡಿಲು ಯೋಧ ಎಂ.ಎಂ.ನವೀನ್ ಕುಮಾರ್ ಅವರನ್ನು ಸನ್ಮಾನಿಸಲಾಯಿತು. ಪಟ್ಟಣದ ಪ್ರಮುಖ ರಸ್ತೆಯಲ್ಲಿ ಜಾಥಾ ನಡೆಸಲಾಯಿತು. ನೆಹರು ಯುವ ಕೇಂದ್ರದ ತಾಲೂಕು ಸಂಚಾಲಕ ಲಕ್ಷ್ಮಿಕಾಂತ, ಪ್ರಾಧ್ಯಾಪಕರಾದ ದೀಪಾ, ಮಂಜುಳಾ ದೇವಿ, ಕಾಲೇಜು ಸಿಬ್ಬಂದಿ, ವಿದ್ಯಾರ್ಥಿಗಳು ಹಾಜರಿದ್ದರು.

ಪಶು ಪರೀಕ್ಷಕರ ನೇಮಕಕ್ಕೆ ಒತ್ತಾಯ

ಹಿರಿಕ್ಯಾತನಹಳ್ಳಿ, ಅ.20–ಹುಣಸೂರು ತಾಲೂಕಿನ ಗಾವಡಗೆರೆ ಹೋಬಳಿಯ ಹಿರಿಕ್ಯಾತನಹಳ್ಳಿ ಗ್ರಾಮದ ಪಶು ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಪಶು ವೈದ್ಯಕೀಯ ಪರೀಕ್ಷಕರಿಲ್ಲದೆ, ಜಾನುವಾರುಗಳ ಚಿಕಿತ್ಸೆಗೆ ರೈತರು ಪರದಾಡುವಂತಾಗಿದೆ.

ಹಿರಿಕ್ಯಾತನಹಳ್ಳಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಸುತ್ತಲಿನ ಹಳ್ಳಿಗಳಿಂದ ರೈತರು ಹಸುಗಳನ್ನು ಇಲ್ಲಿನ ಆರೋಗ್ಯ ಕೇಂದ್ರಕ್ಕೆ ಚಿಕಿತ್ಸೆಗಾಗಿ ಕರೆತರುತ್ತಾರೆ. ಆದರೆ, ಕಳೆದ 2–3 ತಿಂಗಳಿನಿಂದ ವೈದ್ಯಕೀಯ ಪರೀಕ್ಷಕರಿಲ್ಲ. ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡಿ, ಜಾನುವಾರುಗಳಿಗೆ ಸೂಕ್ತ ಚಿಕಿತ್ಸೆ ನೀಡುವಂತೆ ರೈತರು ಒತ್ತಾಯಿಸಿದ್ದಾರೆ.



ಅನಾರೋಗ್ಯದಿಂದ ಹಸುಗಳು ನರಳುತ್ತಿದ್ದರೂ ಚಿಕಿತ್ಸೆ ನೀಡಲು ವೈದ್ಯರಿಲ್ಲ. ಜತೆಗೆ ಆಸ್ಪತ್ರೆಯಲ್ಲಿ ಗುಣಮಟ್ಟದ ಔಷಧ ಕೂಡ ದೊರೆಯುತ್ತಿಲ್ಲ. ಖಾಸಗಿ ಮೆಡಿಕಲ್ ಶಾಪ್‌ಗಳಿಂದ ಔಷಧ ಖರೀದಿಸಬೇಕು. ನಮಗೆ ಗೋಳು ತಪ್ಪಿದ್ದಲ್ಲ.
– ಮರೀಗೌಡ, ರೈತ, ಹಿರಿಕ್ಯಾತನಹಳ್ಳಿ

ಕೊತ್ತೇಗಾಲ ಹಾಗೂ ಹಿರಿಕ್ಯಾತನಹಳ್ಳಿಯ ಪಶು ಪ್ರಾಥಮಿಕ ಆರೋಗ್ಯ ಕೇಂದ್ರದ ಪಶು ಪರೀಕ್ಷಕರು ವರ್ಗಾವಣೆಯಾಗಿದ್ದಾರೆ. ಆದರೆ, ತಾತ್ಕಾಲಿಕವಾಗಿ ಬೇರೆಯವರನ್ನು ನೇಮಿಸಲಾಗಿದೆ. ಶೀಘ್ರದಲ್ಲೇ ಖಾಲಿ ಹುದ್ದೆಗಳನ್ನು ಭರ್ತಿ ಮಾಡಲಾಗುವುದು.
– ಚನ್ನಬಸಪ್ಪ, ತಾಲೂಕು ಮುಖ್ಯ ಪಶು ವೈದ್ಯಾಧಿಕಾರಿ (ಆಡಳಿತ) ಹುಣಸೂರು.

ಹಿರಿಕ್ಯಾತನಹಳ್ಳಿ ಪಶು ಆರೋಗ್ಯ ಕೇಂದ್ರ ವ್ಯಾಪ್ತಿ 4 ಸಾವಿರ ಹಾಗೂ ಕೊತ್ತೇಗಾಲ ಕೇಂದ್ರ ವ್ಯಾಪ್ತಿ 4500 ರಾಸುಗಳಿವೆ. ಆದರೆ, ವೈದ್ಯರ ಕೊರತೆ ಇದೆ. ಕಳೆದ ಮೂರು ನಾಲ್ಕು ತಿಂಗಳಿಂದ ಜಾನುವಾರುಗಳಿಗೆ ಗಂಟು ರೋಗ ತಗಲಿದ್ದು, ಇದರಿಂದ ಕೆಲ ರೈತರು ರಾಸುಳನ್ನು ಮಾರುತ್ತಿದ್ದಾರೆ. ಇನ್ನು ಕೆಲ ರೈತರು ಜಾನುವಾರುಗಳನ್ನು ಉಳಿಸಿಕೊಳ್ಳಬೇಕಾದ ಅನಿವಾರ್ಯತೆ ಇದೆ. ಆದ್ದರಿಂದ ದುಬಾರಿ ಹಣ ಖರ್ಚು ಮಾಡಿ ಚಿಕಿತ್ಸೆ ಕೊಡಿಸುತ್ತಿದ್ದಾರೆ.

ಖಾಸಗಿ ವೈದ್ಯರ ಮೊರೆ: ಪಶು ಆರೋಗ್ಯ ಕೇಂದ್ರದಲ್ಲಿ ವೈದ್ಯರಿಲ್ಲದ ಕಾರಣ ಖಾಸಗಿ ವೈದ್ಯರನ್ನು ಕರೆತಂದು ಹೆಚ್ಚು ಹಣ ನೀಡಿ ರಾಸುಗಳಿಗೆ ಚಿಕಿತ್ಸೆ ಕೊಡಿಸುವ ಅನಿವಾರ್ಯ ಉಂಟಾಗಿದೆ.

ಲಿಂಗಾಂಬುದಿ ಸಸ್ಯ ಶಾಸ್ತ್ರೀಯ ತೋಟ ಉದ್ಘಾಟನೆ

ಮೈಸೂರು, ಅ.20– ತೋಟಗಾರಿಕೆ ಇಲಾಖೆ ವತಿಯಿಂದ ಅ.25ರಂದು ಮಧ್ಯಾಹ್ನ 12,.30ಕ್ಕೆ ಮೈಸೂರಿನ ರಾಮಕೃಷ್ಣನಗರದಲ್ಲಿನ 'ಲಿಂಗಾಂಬುದಿ ಸಸ್ಯ ಶಾಸ್ತ್ರೀಯ ತೋಟದ ಉದ್ಘಾಟನಾ' ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಕಾರ್ಯಕ್ರಮ ಉದ್ಘಾಟಿಸಲಿದ್ದು, ಸಮಾಜ ಕಲ್ಯಾಣ ಸಚಿವರೂ ಆದ ಜಿಲ್ಲಾ ಉಸ್ತುವಾರಿ ಸಚಿವ ಡಾ. ಹೆಚ್.ಸಿ.ಮಹದೇವಪ್ಪ, ಪಶು ಸಂಗೋಪನೆ ಮತ್ತು ರೇಷ್ಮೆ ಸಚಿವ ಕೆ.ವೆಂಕಟೇಶ್, ಗಣಿ ಮತ್ತು ಭೂವಿಜ್ಞಾನ ಹಾಗೂ ತೋಟಗಾರಿಕೆ ಸಚಿವ ಎಸ್.ಎಸ್. ಮಲ್ಲಿಕಾರ್ಜುನ ಉಪಸ್ಥಿತರಿರುವರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಚಾಮುಂಡೇಶ್ವರಿ ವಿಧಾನಸಭಾ ಕ್ಷೇತ್ರದ ಶಾಸಕ ಜಿ.ಟಿ.ದೇವೇಗೌಡ ವಹಿಸಲಿದ್ದು, ಮುಖ್ಯ ಅತಿಥಿಗಳಾಗಿ ಮಹಾಪೌರ ಶಿವಕುಮಾರ್, ಸಂಸದರಾದ ಪ್ರತಾಪ್ ಸಿಂಹ, ಶ್ರೀನಿವಾಸ್ ಪ್ರಸಾದ್, ಸುಮಲತಾ ಅಂಬರೀಶ್ ಭಾಗವಹಿಸಲಿದ್ದಾರೆ. ಸಮಾರಂಭದ ಅತಿಥಿಗಳಾಗಿ ವಿಧಾನಸಭಾ ಶಾಸಕರಾದ ತನ್ವೀರ್ ಸೇಠ್, ಹರೀಶ್ ಗೌಡ, ಶ್ರೀವತ್ಸ, ಅನಿಲ್ ಕುಮಾರ್.ಸಿ, ರವಿಶಂಕರ್.ಡಿ, ಜಿ.ಡಿ. ಹರೀಶ್ ಗೌಡ, ದರ್ಶನ್ ಧ್ರುವನಾರಾಯಣ, ವಿಧಾನ ಪರಿಷತ್ತಿನ ಸದಸ್ಯರಾದ ಮರಿತಿಬ್ಬೇಗೌಡ, ಹೆಚ್. ವಿಶ್ವನಾಥ್, ಡಾ.ಡಿ.ತಿಮ್ಮಯ್ಯ, ಮಧು ಜಿ ಮಾದೇಗೌಡ, ಸಿ.ಎನ್.ಮಂಜೇಗೌಡ, ಉಪ ಮಹಾಪೌರರಾದ ಡಾ.ಜಿ. ರೂಪ ಮತ್ತು ಮೈಸೂರು ಮಹಾನಗರ ಪಾಲಿಕೆ ವಾರ್ಡ್ ನಂ–58 ರ ಸದಸ್ಯರಾದ ಆರ್.ಕೆ. ಶರತ್ ಕುಮಾರ್ ಭಾಗವಹಿಸುವರು ಎಂದು ತೋಟಗಾರಿಕೆ ಇಲಾಖೆ ತಿಳಿಸಿದೆ.

ಸಾರ್ವಜನಿಕ ಪತ್ರಿಕಾ ಪ್ರಕಟಣೆ

ಈ ಮೂಲಕ ಸಾರ್ವಜನಿಕರಿಗೆ ತಿಳಿಸುವುದೇನೆಂದರೆ, ಹುಣಸೂರು ತಾಲ್ಲೂಕು ಬಿಳಿಕೆರೆ ಹೋಬಳಿ ದೇವರಳ್ಳಿ ಗ್ರಾಮಕ್ಕೆ ಸೇರಿದ ಹಳೇ ಸರ್ವೆ ನಂ.4/3ಎ ಹೊಸ ಸರ್ವೆ ನಂ.4/13ರಲ್ಲಿ ಒಟ್ಟು ವಿಸ್ತೀರ್ಣ 3.32 ಎಕರೆ, ಸರ್ವೆ ನಂ.4/3ಬಿರಲ್ಲಿ 0.24 ಗುಂಟೆ, ಸರ್ವೆ ನಂ.11/2ರಲ್ಲಿ 1.10 ಎಕರೆ, ಸರ್ವೆ ನಂ. 11/3ರಲ್ಲಿ 0.10 ಗುಂಟೆ ಸರ್ವೆ ನಂ. 11/5ರಲ್ಲಿ 0.05 ಗುಂಟೆ ಜಮೀನುಗಳು ಹುಣಸೂರಿನ ಪ್ರಧಾನ ಹಿರಿಯ ಶ್ರೇಣಿ ಸಿವಿಲ್ ನ್ಯಾಯಾಲಯದ ಅಸಲು ದಾವಾ OS ನಂ.135/2014ರಂತೆ ದಿನಾಂಕ: 26/11/2019 ರಿಂದ ಮೊಹಮ್ಮದ್ ರಮೀಜುದ್ದಿನ್, ಶಫೀಉದ್ದಿನ್, ಹಬೀಬ್ ಸಾಬ್, ಮೆಹರುನ್ನೀಸಾ ರವರಿಗೆ ಭಾಗಾಂಶದ ಆದೇಶ ಮತ್ತು ಡಿಕ್ರಿ ಆಗಿದ್ದು, ನ್ಯಾಯಾಲಯದ ಸರ್ವೆ ಕಾರ್ಯದಲ್ಲಿ ರುತ್ತದೆ. ಸದರಿ ಆಸ್ತಿಗಳೆನ್ನು ಯಾರೂ ಖರೀದಿಸಬಾರದು, ತಪ್ಪಿದ್ದಲ್ಲಿ ಕಾನೂನು ರೀತ್ಯಾ ಕ್ರಮ ವಹಿಸಲಾಗುವುದೆಂದು ಹಾಗೂ ಕ್ರಯವು ಊರ್ಜಿತವಾಗುವುದಿಲ್ಲ ವೆಂದು ತಿಳಿಯುವುದು.

ಸಹಿ/– ಕೆ. ರಾಜ, ವಕೀಲರು ENR.No KAR1762/2000, ಕಾರ್ಪೋರೇಷನ್ ಬ್ಯಾಂಕ್ ಹಿಂಭಾಗ, ಬಿ.ಎಂ ರಸ್ತೆ, ಹುಣಸೂರು–571105 ಮೊಬೈಲ್ ನಂ.9341915844

ದಿನಾಂಕ–17.10.23.

ಸಾರ್ವಜನಿಕ ತಿಳುವಳಿಕೆ ಪತ್ರ

ನನ್ನ ಕಕ್ಷಿದಾರರು ಈ ಕೆಳಗೆ ಅನುಸೂಚಿಯಲ್ಲಿ ನಮೂದಿಸಿರುವ ಸ್ವತ್ತನ್ನು ಅದರ ಮಾಲೀಕರಾದ ರಾಮನಗರ ಜಿಲ್ಲೆ, ಕೈಲಂಚ ಹೋಬಳಿ, ಕೆ.ಪಿ ದೊಡ್ಡಿ ಅಂಚೆ, ಹುಣಸನಹಳ್ಳಿ ಗ್ರಾಮದಲ್ಲಿ ವಾಸವಾಗಿರುವ ಶ್ರೀ ಹೆಚ್.ಎಂ. ಪ್ರಭಾಕರ್ ರಾವ್ ರವರ ಮಗನಾದ ಶ್ರೀ.ಪಿ.ಅರುಣ್ ಕುಮಾರ್ ರವರು ಮಾತ್ರ ಮಾಲೀಕರಾಗಿ ಅನುಸೂಚಿ ಸ್ವತ್ತಿನ ಮೇಲೆ ಹಕ್ಕು, ಆಸಕ್ತಿ ಮತ್ತು ಸೌಮ್ಯಂಗಳಿಗೂ ಒಳಪಟ್ಟು ಸ್ವಾಧೀನದಲಿದ್ದು ಅವರು ವಿಕ್ರಯಿಸಲು, ಪರಭಾರೆ ಮಾಡಲು ಸಂಪೂರ್ಣ ಸ್ವತಂತ್ರರಾಗಿಯೂ ಮತ್ತು ಕಾನೂನು ಪ್ರಕಾರ ಹಕ್ಕುಳ್ಳವರಾಗಿಯೂ ಇರುತ್ತೇವೆ ಎಂದು ಪ್ರತಿಪಾದಿಸುತ್ತಿದ್ದಾರೆ.

ಅನುಸೂಚಿ ಸ್ವತ್ತು ಯಾವುದೇ ಬ್ಯಾಂಕಿಗೆ, ಹಣಕಾಸು ಸಂಸ್ಥೆಗೆ ಅಥವಾ ಯಾವುದೇ ಸಂಘ, ಸಂಸ್ಥೆಗೆ, ನ್ಯಾಸ(ಟ್ರಸ್ಟ್) ಮತ್ತು ಯಾವುದೇ ವ್ಯಕ್ತಿಗೆ ಸಮ್ಮತವಾದ ಮತ್ತು ಕಾನೂನು ಬದ್ಧವಾದ ಹಕ್ಕು ಅಸಕ್ತಿ ಅಂದರೆ, ಆಧಾರ, ಭೋಗ್ಯ, ಗೇಣಿ, ಕ್ರಯ, ದಾನ, ರಿಲೀಸ್, ವ್ಯವಸ್ಥಾ, ಹಿಸ್ಸೆ, ಜೀವನಾಂಶ, ಭಾಗಾಂಶ, ಮೈನರ್ ಹಕ್ಕು, ವಾರಸು ಹಕ್ಕು, ರಹದಾರಿ, ನಿರಂತರವಾಗಿ ಬಳಸಿರುವ (ಹಾದಿ) ಹಕ್ಕು, ಡಿಮಾಂಡ್ ಸಿವಿಲ್, ರೆವಿನ್ಯೂ, ಕ್ರಿಮಿನಲ್, ಕೋರ್ಟ್ ಅಟ್ಯಾಚ್‌ಮೆಂಟ್, ದಾವಾ, ಡಿಕ್ರಿ, ಜಪ್ತಿ, ಜಾಮೀನು, ನಿರ್ದಿಷ್ಟ ಪರಿಹಾರ ಸಾಲ ಬಾಕಿ, ಕರಾರು, ಅಧಿಕಾರ ಪತ್ರ ಹೊಂದಿದ್ದರೆ, ಇತರೆ ತಂಟೆ ತಕರಾರು ಇದ್ದಲ್ಲಿ, ಅವರು ಖುದ್ದಾಗಿ ದಾಖಲೆಗಳ ಸಹಿತ ಈ ಪತ್ರಿಕಾ ಪ್ರಕಟಣೆಯಾದ 07 (ಏಳು) ದಿನಗಳ ಒಳಗೆ ಸೂಕ್ತ ದಾಖಲೆಗಳೊಂದಿಗೆ ಕೆಳಕಂಡ ನನ್ನ ಕಛೇರಿಯಲ್ಲಿ ಕೆಲಸದ ವೇಳೆಯಲ್ಲಿ ಸಂಪರ್ಕಿಸತಕ್ಕದ್ದು ಅಥವಾ ಲಿಖಿತವಾಗಿ ತಿಳಿಸತಕ್ಕದ್ದು ಎಂದು ಈ ಮೂಲಕ ತಿಳಿಸಲಾಗಿದೆ. ತಪ್ಪಿದಲ್ಲಿ ಅನುಸೂಚಿ ನಿವೇಶನಗಳ ಸಂಬಂಧ ಯಾರು ಅಧಿಕಾರ ಪತ್ರ ಹೊಂದಿಲ್ಲವೆಂದು ಮತ್ತು ಯಾರಿಗೂ ಯಾವುದೇ ರೀತಿಯ ಹಕ್ಕು, ಅಸಕ್ತಿ, ಸೌಮ್ಯ, ಕ್ಲೈಮ್. ಆಧಾರ, ಸಾಲ ಬಾಕಿ, ಕರಾರು, ಅಧಿಕಾರ ಪತ್ರ, ಇತರೆ ತಂಟೆ ತಕರಾರು ಯಾವುದು ಇರುವುದಿಲ್ಲಾ ಎಂದು ಪರಿಗಣಿಸಿ ನನ್ನ ಕಕ್ಷಿದಾರರು ಅನುಸೂಚಿ ಸ್ವತ್ತಿನ ಸಂಬಂಧ ಕ್ರಯದ ಕ್ರಯ ಪತ್ರವನ್ನು ಬರೆಯಿಸಿ ನೋಂದಾಯಿಸಿಕೊಳ್ಳುವ ಪ್ರಕ್ರಿಯೆಗೆ ಮುಂದಾಗುತ್ತಾರೆ ಎಂದು ತಿಳಿಯುವುದು. ಆನಂತರದಲ್ಲಿ ಉಂಟಾಗತಕ್ಕ ಯಾವುದೇ ತಂಟೆ ತಕರಾರುಗಳು ನಮ್ಮ ಕಕ್ಷಿದಾರರನ್ನು ಬದ್ಧಪಡಿಸುವುದಿಲ್ಲವೆಂದು ತಿಳಿಯತಕ್ಕದ್ದು.

ಅನುಸೂಚಿ: ಮೈಸೂರು ಸಿಟಿ. ಜಿಲ್ಲೆ ಮೊಹಲ್ಲಾ, ನಾಚನಹಳ್ಳಿ ಪಾಳ್ಯ, 168/63/ಡಿ ನಂಬರ್ ನಿವೇಶದ ಅಳತೆ ಪೂರ್ವ- ಪಶ್ಚಿಮ 60.00 ಅಡಿಗಳು, ಉತ್ತರ–ದಕ್ಷಿಣ 40.00 ಅಡಿಗಳು ಒಟ್ಟು 2400 ಚದರ ಅಡಿ ನಿವೇಶನ ಮತ್ತು ಇದರಲ್ಲಿ ಕಟ್ಟಿರುವ ಕೆಂಪುಗಾರೆ ನೆಲಹಾಸಿನಿಂದ ಕೂಡಿದ, ಆರ್‌ಸಿಸಿ ಮನೆಗೆ ಚೆಕ್ಕುಬಂದಿ: ಪೂರ್ವಕ್ಕೆ : ರಸ್ತೆ, ಪಶ್ಚಿಮಕ್ಕೆ : ಜೆ ಎಸ್ ಎಸ್ ಕಾಲೇಜು, ಉತ್ತರಕ್ಕೆ : ಖಾಸಗಿಯವರ ಸ್ವತ್ತು, ದಕ್ಷಿಣಕ್ಕೆ : ಖಾಸಗಿಯವರ ಸ್ವತ್ತು

Sd/- Mohana. C, Advocate, #1164, 1st Floor, Nanjundeshwara Complex, Narayana Shastri Road, Devaraja Mohalla, Mysuru - 570004, Mob: 9448448407

ದಿನಾಂಕ: 20/10/2023, ಸ್ಥಳ: ಮೈಸೂರು

ಮೈಸೂರು ಮಿತ್ರ

ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸ ಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

-ಜಾಹೀರಾತು ವ್ಯವಸ್ಥಾಪಕರು

apmcnanjangud@gmail.com ದೂ.ಸಂ.08221–226309

ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ನಂಜನಗೂಡು

ಹುಲ್ಲಹಳ್ಳಿ ರಸ್ತೆ, ನಂಜನಗೂಡು, ಮೈಸೂರು ಜಿಲ್ಲೆ.

ಸಂಖ್ಯೆ: ಕೃಉಮಾಸ/ನಂ/428/2023–24 ದಿ: 20.10.2023

ತಿದ್ದುಪಡಿ ಪ್ರಕಟಣೆ

ಈ ಸಮಿತಿಯ ಸಂಕ್ಷಿಪ್ತ ಟೆಂಡರ್ ಪ್ರಕಟಣೆ ಸಂಖ್ಯೆ:ಕೃಉಮಾಸ(ನಂ)ಲೆ.ವಿ./401/2023–24 ದಿ: 17.10.2023 ರಲ್ಲಿ ಆಹ್ವಾನಿಸಲಾಗಿರುವ ನಿಶ್ಚಿತ ಠೇವಣಿಯ ಟೆಂಡರ್ ಪ್ರಕಟಣೆಯಲ್ಲಿನ ಟೆಂಡರ್ ಬಿಡ್ ದಾಖಲಾತಿ ಕೊನೆಯ ದಿನಾಂಕವನ್ನು 30.10.2023ರ ಬದಲಾಗಿ 06.11.2023 ಎಂದೂ ಇ–ಆಕ್ಷನ್ ದಿನಾಂಕವನ್ನು 03.11.2023ರ ಬದಲಾಗಿ 08.11.2023 ಎಂದು ತಿದ್ದುಪಡಿ ಮಾಡಲಾಗಿರುತ್ತದೆ.

ಸಹಿ/– ಕಾರ್ಯದರ್ಶಿ, ಕೃ.ಉ.ಮಾ.ಸ., ನಂಜನಗೂಡು
ಸಹಿ/– ಆಡಳಿತಾಧಿಕಾರಿಯವರು, ಕೃ.ಉ.ಮಾ.ಸ., ನಂಜನಗೂಡು

ಕರ್ನಾಟಕ ಸರ್ಕಾರ

ಕಾರ್ಯದರ್ಶಿಗಳ ಕಾರ್ಯಾಲಯ,

ಶ್ರೀ ಮಲೈ ಮಹದೇಶ್ವರಸ್ವಾಮಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರ. ಮಹದೇಶ್ವರಬೆಟ್ಟ
ಹನೂರು ತಾಲ್ಲೂಕು, ಚಾಮರಾಜನಗರ ಜಿಲ್ಲೆ.

ದೂರವಾಣಿ ಸಂಖ್ಯೆ: 08225–272128, ಫ್ಯಾಕ್ಸ್ ಸಂಖ್ಯೆ : 08225–272123, Email: sec.mmtemple@gmail.com

ನಂ.ಶ್ರೀ ಮ.ಮ.ಕ್ಷೇ.ಅ.ಪ್ರಾ/5/ಪಿಆರ್/34/2023–24 ದಿನಾಂಕ: 13–10–2023

ಅಲ್ಪಾವಧಿ ಮರು ಇ–ಟೆಂಡರ್ ಪ್ರಕಟಣೆ (2ನೇ ಕರೆ)

ಕರ್ನಾಟಕ ಸರ್ಕಾರದ ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಮಾತ್ರ

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅದ್ಯಾದೇಶ 1999–2000ರ ಪ್ರಕಾರ ಆಕ್ಟ್ 2000ರ ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಟೆಂಡರ್‌ನ್ನು ಈ ಕೆಳಗೆ ಸಹಿ ಮಾಡಿರುವವರು ಆಹ್ವಾನಿಸಿರುತ್ತಾರೆ. ವಿವಿಧ ಸಂಸ್ಥೆಗಳಿಂದ ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್ https//kppp.karnataka.gov.in ಮುಖಾಂತರ ಕರೆದಿರುವ ಈ ಕೆಳಕಂಡ ಇ–ಪ್ರಕ್ಯೂರ್‌ಮೆಂಟ್‌ನಲ್ಲಿ ಭಾಗವಹಿಸಬಹುದು. ಟೆಂಡರ್ ದಾಖಲೆಯಲ್ಲಿ ತಿಳಿಸಿರುವಂತೆ (Technical qualification) ಎಲ್ಲಾ ಅಗತ್ಯ ದಾಖಲೆಗಳನ್ನು ಸಲ್ಲಿಸುವುದು. ಹೆಚ್ಚಿನ ವಿವರಗಳಿಗೆ ಈ ಕಛೇರಿಯಿಂದ ವಿಷಯ ನಿರ್ವಾಹಕರ ಮೊಬೈಲ್ ನಂ.9019707141 ರಿಂದ ಮಾಹಿತಿ ಪಡೆಯಬಹುದು. ಈ ಕೆಳಕಂಡಂತೆ ನಿಗದಿಪಡಿಸಿದ ಇ.ಎಂ.ಡಿ.ಯನ್ನು ಇ–ಪ್ರಕ್ಯೂರ್ ಮೆಂಟ್ ಪೋರ್ಟಲ್‌ನಲ್ಲಿ ನಮೂದಿಸಿದ ಯಾವುದಾದರೊಂದು ರೀತಿಯಲ್ಲಿ ಸಲ್ಲಿಸತಕ್ಕದ್ದು, ಇ.ಎಂ.ಡಿ.ಯ ಟೆಂಡರಿನ ನ್ಯಾಯ ಸಮ್ಮತಾ ಮಾನ್ಯತಾ ಅವಧಿಗಿಂತ (Validity period) 30 ದಿನಗಳ ನಂತರದವರೆಗೆ ಮಾನ್ಯತೆ ಇರತಕ್ಕದ್ದು.

ವಿಶೇಷ ಸೂಚನೆ: ಟೆಂಡರ್ ಸಲ್ಲಿಸುವವರು ತಮ್ಮ ಅಂಚೆ ವಿಳಾಸ ಮತ್ತು ಮೊಬೈಲ್ ಸ್ಥಿರ ದೂರವಾಣಿಯನ್ನು ಇ–ಪೋರ್ಟಲ್‌ನಲ್ಲಿ ಸಲ್ಲಿಸಲು ಸೂಚಿಸಿದೆ.

ಕ್ರ. ಸಂ	ಟೆಂಡರ್ ಹೆಸರು	ಅಂದಾಜು ಮೊತ್ತ (ರೂ.ಲಕ್ಷಗಳಲ್ಲಿ)	ಇ.ಎಂ.ಡಿ ಮೊತ್ತ ರೂ.ಗಳಲ್ಲಿ
	ಶ್ರೀ ಮಲೈ ಮಹದೇಶ್ವರಸ್ವಾಮಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರಕ್ಕೆ ಸೇರಿದ ವಿವಿಧ ಸ್ಥಳಗಳಲ್ಲಿ ಕ್ಷೇತ್ರದಲ್ಲಿ ಜರುಗಲಿರುವ ವಾರ್ಷಿಕ ಜಾತ್ರೆಗಳು, ವಿಶೇಷ ದಿನಗಳು, ಸರ್ಕಾರಿ ರಜೆ ದಿನಗಳು ಹಾಗೂ ಇನ್ನಿತರೆ ವಿವಿಧ ಕಾರ್ಯಕ್ರಮಗಳಿಗೆ ಭಕ್ತಾಧಿಗಳ ನೆರಳಿನ ವ್ಯವಸ್ಥೆಗಾಗಿ ಪೈಪ್ ಶಾಮಿಯಾನ ಜಂಕ್‌ಶೀಟ್ ಶೆಡ್, ವೇದಿಕೆ ನಿರ್ಮಾಣಕ್ಕಾಗಿ ಎಲ್ಲಾ ಹೇರುವ ಇಳಿಸುವ ಸಾಗಿಸುವ ಹಾಗೂ ಇತರೆ ಎಲ್ಲಾ ವೆಚ್ಚಗಳು ಮತ್ತು ಶಾಸನಬದ್ಧ ತೆರಿಗೆಗಳನ್ನು ಒಳಗೊಂಡಂತೆ ಒಂದು ವರ್ಷದ ಅವಧಿಗೆ ಮಾತ್ರ	50.00	125000.00

ಇ–ಪ್ರಕ್ಯೂರ್‌ಮೆಂಟ್ ವ್ಯವಸ್ಥೆಯಡಿ ಟೆಂಡರ್ ಷೆಡ್ಯೂಲ್ ದಿನಾಂಕಗಳು ಈ ಕೆಳಕಂಡಂತಿದೆ

ಇ–ಪೋರ್ಟಲ್‌ನಲ್ಲಿ ಟೆಂಡರ್ ದಾಖಲೆಗಳು ಚಾಲ್ತಿಗೆ ಬರುವ	ದಿನಾಂಕ: 16–10–2023	ರ ನಂತರ
ಟೆಂಡರ್ ಸಲ್ಲಿಸುವ ಕೊನೆ ದಿನಾಂಕ ಮತ್ತು ಕಾಲ	ದಿನಾಂಕ: 25–10–2023	ಸಂಜೆ 4.00 ಗಂಟೆವರೆಗೆ
ಟೆಂಡರ್ ಬಿಡ್‌ನ್ನು ತೆರೆಯುವ ದಿನಾಂಕ ಮತ್ತು ಕಾಲ	ದಿನಾಂಕ: 26–10–2023	ಸಂಜೆ 5.00 ಗಂಟೆ ನಂತರ

ಸಂ/ವಾಸಾಸಂಇ/ಚಾ.ನಗರ/183/2023–24

ಸಹಿ/–ಕಾರ್ಯದರ್ಶಿ, ಶ್ರೀ ಮಲೈ ಮಹದೇಶ್ವರ ಕ್ಷೇತ್ರ, ಅಭಿವೃದ್ಧಿ ಪ್ರಾಧಿಕಾರ, ಮಹದೇಶ್ವರ ಬೆಟ್ಟ